23 April 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮವರ ತಪ್ಪಿಗೆ ತಕ್ಷಣ ಕ್ಷಮೆ ಕೊಡುತ್ತೇವೆ,
ಬೇರೆಯವರ ತಪ್ಪನ್ನು ಮಾತ್ರ ಜಾಸ್ತಿ ಬಿಂಬಿಸುತ್ತೇವೆ,
ಇದು ಮನುಷ್ಯನ ಸ್ವಾರ್ಥ ಗುಣದಲ್ಲೊಂದಿರುವ ಅಂಶ!

-ಸ್ನೇಹಾ ಆನಂದ್

info.varthaman@gmail.com



ಶಾಸಕರ ಸ್ವಾರ್ಥಕ್ಕಾಗಿ ರಿವರ್ ಫ್ರಂಟ್ ಯೋಜನೆ ಪುಟ ಸಂ. 2



29ರೊಳಗೆ ಬಾಕಿ ವಾಪಾಸ್‌ಗೆ ಡಿಸಿ ಭರವಸೆ: ಪ್ರತಿಭಟನೆ ವಾಪಾಸ್ ಪುಟ ಸಂ. 3



ಹೆಣ್ಣು ಮಕ್ಕಳು ವೈಚಾರಿಕ ಶಿಕ್ಷಣ ಪಡೆಯಿರಿ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 153 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಸಿಎಂಗೆ ರಾಜಣ್ಣನೇ ಮಾಟ ಮಾಡಿಸಿರಬಹುದು: ಬಾಲಕೃಷ್ಣ



**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆ.ಎನ್.ರಾಜಣ್ಣ ಅವರೇ ಮಾಡ ಮಾಡಿಸಿರಬಹುದು. ಸಿಎಂಗೆ ಮಾಟ, ಮಂತ್ರ ಮಾಡಿಸುವ ಶಕ್ತಿ ಇದ್ದರೆ ಅದು ರಾಜಣ್ಣ ಒಬ್ಬರಿಗೇ ಮಾತ್ರ. ಸಿಎಂ ಆಪ್ತರೇ ಅವರಿಗೆ ಮಾಟ ಮಾಡಿಸಿರಬೇಕು. ಬೇರೆ ಯಾರಿಗೂ ಆ ಶಕ್ತಿ ಇಲ್ಲ ಎಂದು ಕಾಂಗ್ರೆಸ್ ಶಾಸಕ ಎಚ್.ಸಿ ಬಾಲಕೃಷ್ಣ ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಹಾಯಕರಾಗಿ ಕಾಣುತ್ತಿದ್ದಾರೆ. ಅಗಾಧ ಶಕ್ತಿ ಇರುವ ಅವರನ್ನು ಇಂತಹ ಸ್ಥಿತಿಯಲ್ಲಿ ನಾನು ಎಂದಿಗೂ ನೋಡಿರಲಿಲ್ಲ. ಇದೆಲ್ಲವನ್ನು ನೋಡುತ್ತಿದ್ದರೆ ಯಾರಾದರೂ ಮಾಟ–ಮಂತ್ರ ಮಾಡಿಸಿದ್ದಾರೆಯೇ ಎಂಬ ಅನುಮಾನ ಕಾಡುತ್ತಿದೆ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು. ಪುಟ 2ಕ್ಕೆ

## ಲೋಕಾಯುಕ್ತ ಬಲೆಗೆ ಬಿದ್ದ ಎಸ್‌ಐ, ಕಾನ್ಸ್ಟೇಬಲ್ ಬಂಧನ

**ಬಾಗಲಕೋಟೆ:** ಬಾದಾಮಿ ತಾಲೂಕಿನ ಕೆರೂರು ಪೊಲೀಸ್ ಠಾಣೆ ಮೇಲೆ ಬುಧವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. 1.70 ಲಕ್ಷ ರೂಪಾಯಿ ಲಂಚ ಪಡೆಯುತ್ತಿದ್ದ ಪಿಎಸ್ ಐ ಮತ್ತು ಕಾನ್ಸ್ಟೇಬಲ್ ರೆಡ್ ಹ್ಯಾಂಡ್ ಆಗಿ ಬಲೆಗೆ ಬಿದ್ದಿದ್ದಾರೆ.




ಲಂಚ ಸ್ವೀಕರಿಸುವಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದ ಕೆರೂರು ಪೊಲೀಸ್ ಠಾಣೆ ಸಬ್ ಇನ್ಸ್ಪೆಕ್ಟರ್ ಭೀಮಪ್ಪ ರಬಕವಿ ಮತ್ತು ಪೇದೆ ಸಂತೋಷ್ ಬಿರಾದರ್ ಅವರನ್ನು ಬಂಧಿಸಲಾಗಿದೆ. ಇಸ್ಪೀಟ್ ಆಡುವಾಗ ಸಿಕ್ಕಿಬಿದ್ದಿದ್ದ ಆರೋಪಿಯನ್ನು ಪ್ರಕರಣದಿಂದ ಕೈಬಿಡಲು ಹಾಗೂ ಆತನ ಬೈಕ್ ಬಿಡಲು 2 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 1.70 ಲಕ್ಷ ರೂ. ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಲಂಚದ ಬೇಡಿಕೆ ಬಗ್ಗೆ ಮುತ್ತಪ್ಪ ನಾಯ್ಕರ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಫೋನ್ ಕರೆ ರೆಕಾರ್ಡಿಂಗ್ ಆಧಾರದ ಮೇಲೆ ದಾಳಿ ಮಾಡಿ ಇಬ್ಬರನ್ನು ಬಂಧಿಸಿದ್ದಾರೆ.

## ಚಿನ್ನ ಕಳ್ಳಸಾಗಣೆ ಪ್ರಕರಣ: ನಟಿ ರನ್ಯಾ ರಾವ್‌ಗೆ ಜಾಮೀನು

**ಬೆಂಗಳೂರು:** ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಒಂದು ವರ್ಷದಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ನಟಿ ರನ್ಯಾ ರಾವ್ ಅವರಿಗೆ ಆರ್ಥಿಕ ಅಪರಾಧಗಳ ತಡೆ ನ್ಯಾಯಾಲಯ ಜಾಮೀನು ನೀಡಿದೆ.

2025 ಮಾರ್ಚ್ 3ರಂದು ನಟಿ ರನ್ಯಾ ರಾವ್ 14.8 ಕೆಜಿ ಚಿನ್ನದ ಕಳ್ಳಸಾಗಣೆ ಮಾಡಿದ ಆರೋಪದ ಮೇಲೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿಆರ್ ಐ ಕೈಯಲ್ಲಿ ಲಾಕ್ ಆಗಿದ್ದರು. ಪುಟ 2ಕ್ಕೆ




## ಜೆಡಿಎಸ್‌ಗೆ ಜಮೀರ್ ಬರುವ ಅಗತ್ಯವಿಲ್ಲ : ನಿಖಿಲ್



**ಬೆಂಗಳೂರು:** ಜಮೀರ್ ಜೆಡಿಎಸ್‌ಗೆ ಬರುವ ಅವಶ್ಯಕತೆ ಇಲ್ಲ ಎಂದು ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಸುಮ್ಮನೇ ಮಾಧ್ಯಮದಲ್ಲಿ ಬರುತ್ತಿರುವ ವಿಚಾರ ಅದು. ಅವರಿಗೆ ಕಾಂಗ್ರೆಸ್ ಪಕ್ಷ ಸ್ಥಾನಮಾನ ಕೊಟ್ಟಿದೆ. ಅವರ ಬಗ್ಗೆ ಚರ್ಚೆ ಬೇಡ. ಪುಟ 2ಕ್ಕೆ

## ಮೋದಿ ಅವಹೇಳನ: ಖರ್ಗೆ ವಿರುದ್ಧ ಆಯೋಗಕ್ಕೆ ದೂರು

**ನವದೆಹಲಿ:** ಮೋದಿ ಭಯೋತ್ಪಾದಕ ಎಂಬ ಹೇಳಿಕೆ ನೀಡಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ಚುನಾವಣಾ ಆಯೋಗದ ಮೆಟ್ಟಿಲೇರಿದೆ. ಖರ್ಗೆ ಅವರ ಹೇಳಿಕೆಗೆ ಆಕ್ಷೇಪಣೆ ವ್ಯಕ್ತಪಡಿಸಿ ಕೇಂದ್ರ ಸಚಿವ ಕಿರಣ್ ರಿಜಿಜು ನೇತೃತ್ವದ ಬಿಜೆಪಿ ನಿಯೋಗ ಚುನಾವಣಾ ಆಯೋಗಕ್ಕೆ ಬುಧವಾರ ದೂರು ನೀಡಿದೆ.

ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಅರ್ಜುನ್ ರಾಮ್ ಮೇಘವಾಲ್ ಸೇರಿದಂತೆ ಹಿರಿಯ ನಾಯಕರು ನಿಯೋಗದಲ್ಲಿದ್ದರು. ಚುನಾವಣಾ ಆಯೋಗವನ್ನು ಭೇಟಿ ಮಾಡಿದ ಬಿಜೆಪಿ ನಿಯೋಗ ಖರ್ಗೆ ಅವರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದೆ. ಮಲ್ಲಿಕಾರ್ಜುನ ಖರ್ಗೆ ಸಾರ್ವಜನಿಕವಾಗಿ ಪ್ರಧಾನಿಗಳನ್ನು ಕ್ಷಮೆಯಾಚಿಸಬೇಕೆಂದು ಒತ್ತಾಯಿಸಿದರು.

ಚುನಾವಣಾ ಸಮಿತಿಗೆ ಪತ್ರ ಬರೆದಿದ್ದ



ಬಿಜೆಪಿ, ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಹೇಳಿಕೆಯು ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 175ರ ಅಡಿಯಲ್ಲಿ ಅಪರಾಧವಾಗಿದೆ ಮತ್ತು ಮಾನನಷ್ಟ ಪ್ರಕರಣವಾಗಿದೆ ಎಂದು ಆರೋಪಿಸಿದೆ. ಚುನಾವಣಾ ಆಯೋಗ ಈ ವಿಚಾರವನ್ನ ಗಂಭೀರವಾಗಿ ತೆಗೆದುಕೊಳ್ಳಬೇಕು. ಎಐಸಿಸಿ ಮುಖ್ಯಸ್ಥರಾದ ಖರ್ಗೆ ಅವರು ಸಾರ್ವಜನಿಕವಾಗಿ ಪ್ರಧಾನಿಗಳನ್ನ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದೆ.

## ಹಿಂದಿಗೆ ಗ್ರೇಡ್ ಬದಲಿಗೆ ಅಂಕ: ಶಿಕ್ಷಣ ಸಚಿವ ಮಧು ಬಂಗಾರಪ್ಪ

**ಶಿವಮೊಗ್ಗ:** ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೇಡ್ ಬದಲು ಅಂಕ ನೀಡುವಂತೆ ಹೈಕೋರ್ಟ್ ಆದೇಶ ಹೊರಡಿಸಿದೆ. ಹೈಕೋರ್ಟ್ ಆದೇಶದಂತೆ ಅಂಕ ನೀಡಲಾ



ಗುವುದು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಸೊರಬದ ಬಂಗಾರಧಾಮದಲ್ಲಿ ಬುಧವಾರ ತಮ್ಮ ತಾಯಿ ಶಕುಂತಲಾ ಪುಟ 2ಕ್ಕೆ

# ಮೈಸೂರಿಗೆ 'ಜಲಕಂಟಕ' ಭೀತಿ

## ಕೆಆರ್‌ಎಸ್, ಕಬಿನಿ ಜಲಾಶಯಗಳ ನೀರಿನ ಮಟ್ಟ ಕುಸಿತ | ಕುಡಿಯುವ ನೀರಿನ ಆತಂಕ

ಕೆ.ಎನ್.ನಾಗಸುಂದ್ರಪ್ಪ ಮೈಸೂರು

ಕೃಷ್ಣರಾಜ ಸಾಗರ ಜಲಾಶಯದ ನೀರಿನ ಮಟ್ಟ ಆತಂಕಕಾರಿ ಮಟ್ಟಕ್ಕೆ ಕುಸಿದಿದೆ. ಪ್ರಮುಖ ನಗರಗಳಿಗೆ ನೀರು ಪೂರೈಸುವ ಜಲಾಶಯದ ನೀರಿನ ಮಟ್ಟ 98 ಅಡಿಗೆ ಇಳಿದಿದೆ. ಹೀಗೆ ಮಳೆಗಾಲ ವಿಳಂಬವಾದರೆ ಕುಡಿಯುವ ನೀರಿಗೆ ಹಾಹಾಕಾರ ಎದುರಾಗುವ ಭೀತಿ ಆವರಿಸಿದೆ.

ಕೆಆರ್‌ಎಸ್ ಮಾತ್ರವಲ್ಲದೆ ಕಾವೇರಿ ಕೊಳ್ಳದ ಕಬಿನಿ. ಹಾರಂಗಿ, ಹೇಮಾವತಿ, ನುಗು, ತಾರಕ ಸೇರಿದಂತೆ ಎಲ್ಲಾ ಜಲಾಶಯಗಳ ನೀರಿನ ಮಟ್ಟ ಕುಸಿದಿದೆ. ಇನ್ನೂ ಮುಂಗಾರು ಪೂರ್ವ ಮಳೆ ಆರಂಭವಾಗದ ಕಾರಣ ಜಲಾಶಯಗಳಿಗೆ ನೀರು ಹರಿದು ಬರುತ್ತಿಲ್ಲ. ಹೀಗೆ ಮುಂದುವರಿದರೆ ಕುಡಿಯುವ ನೀರಿಗೆ ಸಮಸ್ಯೆ ಆಗುವ ಆತಂಕ ಉಂಟಾಗಿದೆ. ಕಾವೇರಿ ಕೊಳ್ಳದ ನೀರನ್ನು ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಸುತ್ತಲಿನ ಹಲವು ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಬಳಕೆ ಮಾಡ ಲಾಗುತ್ತಿದೆ. ಈ ಬಾರಿ ಮುಂಗಾರು ಕ್ಷೀಣಿಸುವ ಸಾಧ್ಯತೆ ಇದೆ ಎಂದು ತಜ್ಞರ ವರದಿಗಳು ತಿಳಿಸಿವೆ. ಸದ್ಯಕ್ಕೆ ಮಳೆ ಬಾರದಿದ್ದರೆ ಸಿಲಿಕಾನ್ ಸಿಟಿ ಸೇರಿ ದಂತೆ ನಗರ ಪ್ರದೇಶಕ್ಕೆ ಜಲಕಂಟಕ ಶುರುವಾಗಲಿದೆ.

ಕೆಆರ್ ಎಸ್ ಜಲಾಶಯದಲ್ಲಿ ನೀರಿನ ಮಟ್ಟ ಇಳಿಕೆಯಾಗಿರುವುದು ಇನ್ನಷ್ಟು ಸಮಸ್ಯೆಗೆ ಕಾರಣವಾಗಲಿದೆ. 124.80 ಅಡಿ ಗರಿಷ್ಠ ಮಟ್ಟ



ವರ್ತಮಾನ ವಿಶೇಷ

ಹೊಂದಿರುವ ಕೆಆರ್‌ಎಸ್ ಡ್ಯಾಂನಲ್ಲಿ ಸದ್ಯ ಕೇವಲ 22 ಟಿಎಂಸಿ ಮಾತ್ರ ನೀರು ಶೇಖರಣೆ ಇದೆ. ಇದರಲ್ಲಿ 7 ಟಿಎಂಸಿ ನೀರು ಡೆಡ್ ಸ್ಟೋರೇಜ್ ಆಗಿದೆ. ಬಳಕೆಗೆ ಲಭ್ಯ ವಿರುವುದು ಕೇವಲ 15 ಟಿಎಂಸಿ ಮಾತ್ರ. ಪ್ರಸ್ತುತ ಜಲಾಶಯಕ್ಕೆ 66 ಕ್ಯೂಸೆಕ್ ಒಳಹರಿವು ಇದೆ. ಹೊರಹರಿವು 4,388 ಕ್ಯೂಸೆಕ್ ಇದೆ.

ಬೆಂಗಳೂರಿನ ಹಲವೆಡೆ ಈಗಾಗಲೇ ನೀರಿನ ಸಮಸ್ಯೆ ಶುರುವಾಗಿದೆ. ಕಾವೇರಿ ನೀರನ್ನೇ ನಂಬಿ ಕೊಂಡಿರುವ ಸಿಲಿಕಾನ್ ಸಿಟಿ ಬೆಂಗಳೂರು ಸೇರಿದಂತೆ ಮೈಸೂರು, ಮಂಡ್ಯ ಮತ್ತಿತರ ನಗರಗಳಿಗೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ದಟ್ಟವಾಗಿದೆ. ಸದ್ಯ ಲಭ್ಯವಿರುವ ನೀರನ್ನು ಕಟ್ಟು ಪದ್ಧತಿಯಲ್ಲಿ ಬೆಳೆಗಳಿಗೂ ನೀಡಬೇಕಿದೆ. ಕುಡಿಯಲು ಸಹ ಮೀಸಲಿಡಬೇಕಾದ ಅನಿವಾರ್ಯತೆ ಸರ್ಕಾರಕ್ಕೆ ಎದುರಾಗಿದೆ. ಜೂನ್ ಮೊದಲ ವಾರ ದಲ್ಲಿ ಮುಂಗಾರು ಮಳೆ ತಡವಾದರೆ ಅಥವಾ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದಿದ್ದರೆ ಕಾವೇರಿ ನೀರು ಅವಲಂಬಿತ ಜನರಿಗೆ ನೀರಿನ ಸಮಸ್ಯೆ ಕಟ್ಟಿಟ್ಟ ಬುತ್ತಿ ಎನ್ನಲಾಗಿದೆ.

ಪ್ರಮುಖ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿತ ಕಂಡಿರುವುದು ಮುಂದೆ ಅನಾವೃಷ್ಟಿ ಪರಿಸ್ಥಿತಿ ಎದುರಾಗುತ್ತದೆಯೇ ಎಂಬ ಆತಂಕ ಕಾಡುತ್ತಿದೆ. ಕಾವೇರಿ ಮತ್ತು ಕೃಷ್ಣ ಕೊಳ್ಳ ಸೇರಿದಂತೆ ಪ್ರಸ್ತುತ ರಾಜ್ಯದ ಎಲ್ಲಾ ಪ್ರಮುಖ ಜಲಾಶಯಗಳಲ್ಲಿ ಶೇ.36ರಷ್ಟು ಮಾತ್ರ ನೀರು ಸಂಗ್ರಹವಿದೆ. ಎಲ್ಲಾ ಪ್ರಮುಖ ಜಲಾಶಯಗಳು ಸೇರಿದಂತೆ 321 ಟಿಎಂಸಿ ನೀರಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಸುಮಾರು 330 ಟಿಎಂಸಿ ನೀರಿತ್ತು ಎಂದು ಕಂದಾಯ ಇಲಾಖೆ ಮಾಹಿತಿ ನೀಡಿದೆ.

ಜಲಸಂಪನ್ಮೂಲ ಇಲಾಖೆ ಅಂಕಿ ಅಂಶಗಳ ಪ್ರಕಾರ ರಾಜ್ಯದ ಪ್ರಮುಖ ಜಲವಿದ್ಯುತ್ ಜಲಾಶಯ ಗಳಾದ ಲಿಂಗನಮಕ್ಕಿ, ಸೂಪ ಮತ್ತು ವರಾಹಿಯಲ್ಲಿ ಪ್ರಸ್ತುತ ಸುಮಾರು 107 ಟಿಎಂಸಿ ನೀರು ಸಂಗ್ರಹವಿದೆ. ಕಳೆದ ವರ್ಷ ಏಪ್ರಿಲ್ ಎರಡನೇ ವಾರದ ಅವಧಿಗೆ ಸುಮಾರು 124 ಟಿಎಂಸಿ ನೀರು ಲಭ್ಯವಿತ್ತು. ಈ ಮೂರು ಜಲಾಶಯಗಳ ಗರಿಷ್ಠ ಸಾಮರ್ಥ್ಯ 327.63 ಟಿಎಂಸಿ ಇದೆ. ಈ ಪೈಕಿ ಪ್ರಸ್ತುತ ಶೇಖರಣೆ ಇರುವುದು ಕೇವಲ ಶೇ.33ರಷ್ಟು ಮಾತ್ರ. ಜಲಾಶಯ ಗಳಿಗೆ ಯಾವುದೇ ಒಳಹರಿವು ಇಲ್ಲ.

### ಕಬಿನಿ, ಹಾರಂಗಿಯಲ್ಲೂ ನೀರಿನ ಕೊರತೆ

**ಕಾವೇರಿ ಕಣಿವೆಯ ಪ್ರಮುಖ ಜಲಾಶಯಗಳಾದ ಹಾರಂಗಿ, ಹೇಮಾವತಿ, ಕೆ.ಆರ್.ಎಸ್, ಕಬಿನಿಯಲ್ಲಿ ಪ್ರಸ್ತುತ ಒಟ್ಟು ಸುಮಾರು 57 ಟಿಎಂಸಿ ನೀರು ಶೇಖರಣೆ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಈ ಜಲಾಶಯ ಗಳಲ್ಲಿ ಒಟ್ಟು ಸುಮಾರು 58 ಟಿಎಂಸಿ ನೀರು ಸಂಗ್ರಹ ಇತ್ತು. ಈ ನಾಲ್ಕು ಜಲಾಶಯಗಳ ಗರಿಷ್ಠ ಸಾಮರ್ಥ್ಯ 114.57 ಟಿಎಂಸಿ ಇದೆ. ಇದರ ಪೈಕಿ ಸದ್ಯಕ್ಕೆ ಶೇ.46ರಷ್ಟು ಮಾತ್ರ ನೀರಿನ ಸಂಗ್ರಹವಿದೆ.**

### ಸಿಡಿಲು ಬಡಿದು ಮಹಿಳೆ ಸಾವು




**ರಾಯಚೂರು:** ಲಿಂಗಸೂಗೂರು ತಾಲೂಕಿನ ಬಸವನ ಬಗಡಿ ದೊಡ್ಡಿಯಲ್ಲಿ ಸಿಡಿಲು ಬಡಿದು ರೈತ ಮಹಿಳೆ ಸಾವನ್ನಪ್ಪಿದ್ದಾರೆ. ದುರುಗಮ್ಮ (40) ಸಿಡಿಲಿಗೆ ಬಲಿಯಾದ ಮಹಿಳೆ. ಮಳೆ ಹಿನ್ನೆಲೆ ಬಣವೆಗೆ ತಾಡಪಾಲು ಹೊದಿಸುವ ವೇಳೆ ಸಿಡಿಲು ಬಡಿದಿದೆ. ಸಿಡಿಲಿನ ಹೊಡೆತಕ್ಕೆ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮಾನ್ವಿ ತಾಲೂಕಿನ ಹಿರೇದಿನ್ನಿ ಗ್ರಾಮದಲ್ಲಿ ಸಿಡಿಲು ಬಡಿದು ತೆಂಗಿನ ಮರ ಹೊತ್ತಿ ಉರಿದಿದೆ. ಸಿಡಿಲು ಬಡಿದು ಮರ ಹೊತ್ತಿ ಉರಿಯುವುದು ಕಂಡು ಜನ ಆತಂಕಕ್ಕೊಳಗಾಗಿದ್ದರು. ರಾಯಚೂರು ನಗರದಲ್ಲೂ ಸುಮಾರು ಹೊತ್ತು ಮಳೆ ಸುರಿದಿದೆ.

## ಅಮೆರಿಕ ಮಹಿಳೆ ಮೇಲೆ ಅತ್ಯಾಚಾರ: ಇಬ್ಬರ ಬಂಧನ

**ಮಡಿಕೇರಿ:** ಕೊಡಗು ಜಿಲ್ಲೆಯ ಕುಟ್ಟ ವ್ಯಾಪ್ತಿಯ ಹೋಂ ಸ್ಟೇನಲ್ಲಿ ಅಮೆರಿಕದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ. ಹೋಂಸ್ಟೇ ಮಾಲೀಕ ವಿಶಾಲ್, ಕೆಲಸಗಾರ ವೃಜೇಶ್ ಕುಮಾರ್ ಎಂಬ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರವಾಸಕ್ಕೆ ಬಂದಿದ್ದ ವಿದೇಶಿ ಮಹಿಳೆ ಕುಟ್ಟ ಗ್ರಾಮದ ದೇವಿ ವಿಲ್ಲಾ ಹೋಂ ಸ್ಟೇನಲ್ಲಿ ತಂಗಿದ್ದರು. ಜಾರ್ಖಂಡ್ ಮೂಲದ ವ್ಯಕ್ತಿ ವೃಜೇಶ್ ಕುಮಾರ್ ಸಿಹಿ ಪಾನಕಕ್ಕೆ ಮತ್ತು ಬರುವ ಔಷಧಿ ಬೆರಸಿ ಮಹಿಳೆಗೆ ನೀಡಿದ್ದಾನೆ. ಆಕೆ ಪ್ರಜ್ಞೆ ತಪ್ಪಿದ ಬಳಿಕ ಅತ್ಯಾಚಾರ ಎಗಿದ್ದಾನೆ ಎಂದು ಸಂತ್ರಸ್ತೆ ನೀಡಿದ ದೂರಿನಲ್ಲಿ ಉಲ್ಲೇಖವಾಗಿದೆ.

ವಿಷಯ ತಿಳಿದ ಹೋಮ್‌ಸ್ಟೇ ಮಾಲೀಕ ವಿಶಾಲ್ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಿರೋದು ದೂರಿನಿಂದ ಗೊತ್ತಾಗಿದೆ. ಮೂರು ದಿನಗಳ ಕಾಲ ಸಂತ್ರಸ್ತೆ ಯಾರನ್ನೂ ಸಂಪರ್ಕ ಮಾಡದಂತೆ ತಡೆದಿದ್ದಾನೆ.



ಹೋಂ ಸ್ಟೇ ವೈಫೈ ಕೂಡ ಕಟ್ ಮಾಡಿದ್ದಾನೆ. 3 ದಿನದ ಬಳಿಕ ಸಂತ್ರಸ್ತೆ ಮೈಸೂರಿಗೆ ಹೋಗುವುದಾಗಿ ಹೇಳಿ ಹೊರಟಿದ್ದಾರೆ. ನಂತರ ಮೈಸೂರಿಗೆ ಬಂದ ವಿದೇಶಿ ಮಹಿಳೆ ಅಮೆರಿಕದ ರಾಯಭಾರ ಕಚೇರಿ ಸಂಪರ್ಕಿಸಿ ಮಾಹಿತಿ ನೀಡಿದ್ದಾರೆ. ಬಳಿಕ ಇ–ಮೇಲ್ ಮೂಲಕ ಮೈಸೂರಿನ ಅಧಿಕಾರಿಗಳನ್ನು ಸಂಪರ್ಕಿಸಿದ ಅಮೆರಿಕ ರಾಯಭಾರ ಕಚೇರಿ ಅಧಿಕಾರಿಗಳು ಪುಟ 2ಕ್ಕೆ

## ಕೊಲ್ಲಿ ಯುದ್ಧ: ಕದನ ವಿರಾಮ

### ಇರಾನ್ ಬಂದರುಗಳಿಗೆ ದಿಗ್ಬಂಧನ ತೆರವಿಲ್ಲ: ಟ್ರಂಪ್ ಹೇಳಿಕೆ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಾಕಿಸ್ತಾನದ ಮನವಿ ಮೇರೆಗೆ ಕದನ ವಿರಾಮ ವಿಸ್ತರಣೆ ಮಾಡುವುದಾಗಿ ಘೋಷಿಸಿದ್ದಾರೆ.

ಕದನ ವಿರಾಮಕ್ಕೆ ಈ ಹಿಂದೆ ಕೊಟ್ಟಿದ್ದ ಡೆಡ್ ಲೈನ್ ಮುಕ್ತಾಯವಾದ ಹಿನ್ನೆಲೆಯಲ್ಲಿ ಅಮೆರಿಕ ಮತ್ತೆ ಕೆಲ ದಿನಗಳ ಕಾಲ ಕದನ ವಿರಾಮ ಮುಂದುವರಿಸಿದೆ. ಆದರೆ ಹಾರ್ಮುಜ್ ಜಲ ಸಂಧಿ ದಿಗ್ಬಂಧನ ಮುಂದುವರಿಯಲಿದೆ ಎಂದು ಟ್ರಂಪ್ ತಿಳಿಸಿದ್ದಾರೆ.

ಪಾಕಿಸ್ತಾನದ ಮನವಿ ಸ್ವೀಕರಿಸಿ ಅದರ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆಸಲಾಗಿದೆ. ಇರಾನ್ ನಾಯಕರು ಒಪ್ಪಂದಕ್ಕೆ ಮುಂದೆ ಬರುವವರೆಗೂ ದಾಳಿಯನ್ನು ತಡೆಯಲಾಗುವುದು. ಅಂತಿಮ ಒಪ್ಪಂದ ಆಗುವವರೆಗೆ ಇರಾನ್ ಬಂದರುಗಳಿಗೆ ದಿಗ್ಬಂಧನ ಹಾಕಿರುವ ಅಮೆರಿಕದ ನೌಕಾ ಸೇನಾ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಒಂದು ವೇಳೆ ಸಂಧಾನ ಮಾತುಕತೆ ಮುರಿದು ಬಿದ್ದರೆ ಮರುಕ್ಷಣವೇ ಅಮೆರಿಕ ರಕ್ಷಣಾ ಪಡೆಗಳು ದೊಡ್ಡ ಮಟ್ಟದ ಕಾರ್ಯಾ



ಚರಣೆ ಆರಂಭಿಸಲಿವೆ. ಇರಾನ್ ಮೇಲೆ ಬಾಂಬ್‌ಗಳ ಸುರಿಮಳೆಯಾಗಲಿದೆ ಎಂದು ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಸಂಘರ್ಷ ಅಂತ್ಯಗೊಳಿಸುವ ನಿಟ್ಟಿನಲ್ಲಿ ಸಂಧಾನ ಮಾತುಕತೆ ಮೂಲಕ ಒಪ್ಪಂದಕ್ಕೆ ಬರುವುದನ್ನು ಬಿಟ್ಟು ಇರಾನ್‌ಗೆ ಬೇರೆ ಆಯ್ಕೆಯಿಲ್ಲ. ನಿಗದಿಯಂತೆ ಪಾಕಿಸ್ತಾನದಲ್ಲಿ ಮಾತುಕತೆ ನಡೆಯಲಿದೆ. ಉತ್ತಮ ಒಪ್ಪಂದ ಮೂಡುವ ಪುಟ 2ಕ್ಕೆ

## ಖರ್ಗೆಗೆ ಕಪ್ಪು–ಬಿಳುಪಿನ ವ್ಯತ್ಯಾಸ ಅರಿವಿಲ್ಲ

### ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಉಪರಾಷ್ಟ್ರಪತಿ ರಾಧಾಕೃಷ್ಣನ್ ತೀಕ್ಷ್ಣ ಪ್ರತಿಕ್ರಿಯೆ

**ಬೀದರ್:** ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಭಯೋತ್ಪಾದಕರು ಮತ್ತು ಭಯೋತ್ಪಾದಕರಿಗೆ ಭಯ ಎಂಬುದರ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಟೀಕಿಸಿದರು.

ಬೀದರ್‌ನ ಶ್ರೀ ಚೆನ್ನಬಸವಾಶ್ರಮದಲ್ಲಿ ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟದೇವರು ಶ್ರೀಗಳ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಬುಧವಾರ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು, ಮಲ್ಲಿಕಾರ್ಜುನ ಖರ್ಗೆ ಸಮ್ಮುಖದಲ್ಲೇ ಹೇಳಿಕೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಉಲ್ಲೇಖಿಸಿದ್ದ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಯಿಂದ ಉಂಟಾದ ವಿವಾದಕ್ಕೆ ಅವರು ಪ್ರತಿಕ್ರಿಯಿಸಿದ್ದಾರೆ. ನಮ್ಮ ಖರ್ಗೆಯವರ ಬಗ್ಗೆ ನನಗೆ ಸ್ವಲ್ಪ ಭಿನ್ನಾಭಿಪ್ರಾಯ ಇದೆ. ಅವರಿಗೆ ಕೆಲವೊಮ್ಮೆ ಕಪ್ಪು–ಬಿಳುಪಿನ ನಡುವಿನ ವ್ಯತ್ಯಾಸದ ಅರಿವಿರುವುದಿಲ್ಲ ಎಂದು ಲೇವಡಿ ಮಾಡಿದರು.



ಭಯೋತ್ಪಾದಕರು ಮತ್ತು ಭಯೋತ್ಪಾದಕರಿಗೆ ಭಯ ಎಂಬುದರ ನಡುವಿನ ವ್ಯತ್ಯಾಸವನ್ನೂ ಗುರುತಿಸಲು ಖರ್ಗೆ ಅವರಿಗೆ ಸಾಧ್ಯವಾಗುತ್ತಿಲ್ಲವೆಂದು ನನಗೆ ಅನಿಸುತ್ತದೆ. ಅದನ್ನು ಬಿಟ್ಟರೆ ನನಗೆ ಅವರ ಜೊತೆ ಯಾವುದೇ ಸಮಸ್ಯೆ ಇಲ್ಲ. ಅವರು ನನ್ನ ಉತ್ತಮ ಸ್ನೇಹಿತರು ಎಂದು ಕುಟುಕಿದರು.


ತಮಿಳುನಾಡು ವಿಧಾನಸಭಾ ಚುನಾವಣೆಗೆ ಮುನ್ನ ಎಡಿಎಂಕೆ ಮತ್ತು ಬಿಜೆಪಿ ಮೈತ್ರಿಯನ್ನು ಟೀಕಿಸುವ ವೇಳೆ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದಿದ್ದ ಹೇಳಿಕೆ ವಿವಾದಕ್ಕೆ ಕಾರಣವಾಗಿತ್ತು. ನಂತರ ಅವರು ಸ್ಪಷ್ಟನೆ ನೀಡಿದ ಖರ್ಗೆ, ಪ್ರಧಾನಿ ಜನರನ್ನು ಮತ್ತು ರಾಜಕೀಯ ಪಕ್ಷಗಳನ್ನು ಭಯಪಡಿಸುತ್ತಿದ್ದಾರೆ ಎಂಬ ಅರ್ಥದಲ್ಲಿ ಹೇಳಿದ್ದೇನೆ ಹೊರತು, ಅವರನ್ನು ಭಯೋತ್ಪಾದಕ ಎಂದು ಕರೆಯಲಿಲ್ಲ ಎಂದು ಹೇಳಿದರು.

## ಉಗ್ರನಿಗೆ 6 ವರ್ಷ ಜೈಲು

**ಬೆಂಗಳೂರು:** ಶಿವಮೊಗ್ಗದಲ್ಲಿ ಐಎಸ್ ಭಯೋತ್ಪಾದನಾ ಪಿತೂರಿ ಪ್ರಕರಣದ ಆರೋಪಿ ಅರಾಫತ್ ಅಲಿಗೆ ಎನ್‌ಐಎ ವಿಶೇಷ ನ್ಯಾಯಾಲಯ ಆರು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ 47 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ಎನ್‌ಐಎ ಅಧಿಕಾರಿಗಳು 12 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದ ಅರಾಫತ್ ಅಲಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

2022ರ ಆ.15ರಂದು ಸ್ವಾತಂತ್ರ್ಯ ದಿನಾಚರಣೆ ದಿನ ಶಿವಮೊಗ್ಗದಲ್ಲಿ ನಡೆದ ಗಲಾಟೆ ವೇಳೆ ದುಷ್ಕರ್ಮಿಗಳು ಪ್ರೇಮ್ ಸಿಂಗ್ ಅವರಿಗೆ ಚಾಕುವಿನಿಂದ ಇರಿದಿದ್ದರು. ಪ್ರಕರಣದಲ್ಲಿ ಜಬೀವುಲ್ಲಾ, ತನ್ವೀರ್ ಅಹಮ್ಮದ್, ನದೀಮ್ ಫೈಜಲ್ ಸೇರಿದಂತೆ ಕೆಲವರನ್ನು ಪೊಲೀಸರು ಬಂಧಿಸಿದ್ದರು. ತನಿಖೆ ವೇಳೆ, ಶಂಕಿತ ಉಗ್ರರ ಪಾತ್ರ ಇರುವುದು ಪತ್ತೆ ಆಗಿತ್ತು. ಆರೋಪಿ ಜಬೀವುಲ್ಲಾಗೆ ತೀರ್ಥಹಳ್ಳಿಯ




ಶಾರೀಕ್ ಗಲಾಟೆ ನಡೆಸಲು ಪ್ರಚೋದನೆ ನೀಡಿದ್ದ ವಿಚಾರ ಪೊಲೀಸ್ ತನಿಖೆಯಿಂದ ಗೊತ್ತಾಗಿತ್ತು.

ಶಿವಮೊಗ್ಗದ ಸೈಯದ್ ಯಾಸೀನ್, ಮಂಗಳೂರಿನ ಮಾಝ್, ತೀರ್ಥಹಳ್ಳಿಯ ಶಾರೀಕ್ ಜತೆಗೆ ಸೇರಿಕೊಂಡು ಬಾಂಬ್ ತಯಾರಿಸಿ ತುಂಗಾ ನದಿಯ ದಡದಲ್ಲಿ ಪ್ರಾಯೋಗಿಕವಾಗಿ ಬಾಂಬ್ ಸ್ಫೋಟಿಸಿದ್ದು, ಧ್ವಜ ಸುಟ್ಟಿರುವ ವಿಚಾರವು ಸ್ಥಳೀಯ ಪೊಲೀಸರು ನಡೆಸಿದ ತನಿಖೆಯಿಂದ ದೃಢಪಟ್ಟಿತ್ತು. ಬಳಿಕ ಎನ್‌ಐಎ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು. ಪುಟ 2ಕ್ಕೆ

# ಜಿಲ್ಲೆಯ ಬರ ನಿರ್ವಹಣೆಯಲ್ಲಿ ಲೋಪ ಕಂಡುಬಂದರೆ ಉಗ್ರಹೋರಾಟ

## ನವೀನ್ ಕುಮಾರ್ ಎಚ್ಚರಿಕೆ । ಜಿಲ್ಲಾ ರೈತಮೋರ್ಚಾದಿಂದ ಕೃಷಿ ಇಲಾಖೆ ಉಪನಿರ್ದೇಶಕರಿಗೆ ಮನವಿ । ಜಿಲ್ಲೆಯನ್ನು ಬರ ಎಂದು ಘೋಷಿಸಲು ಒತ್ತಾಯ



ಚಾಮರಾಜನಗರ: ಜಿಲ್ಲೆಯಲ್ಲಿ ಮುಂಗಾರು ಸಮಯದಲ್ಲಿ ಬರುವ ಸಮಸ್ಯೆಗಳಿಗೆ ಸ್ಪಂದಿಸುವಂತೆ ಒತ್ತಾಯಿಸಿ ಜಿಲ್ಲಾ ರೈತಮೋರ್ಚಾದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿರುವ ಕೃಷಿ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕಿ ಸುಷ್ಮಾ ಅವರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಮುಂಗಾರು ಮಳೆ ಅಭಾವದ ಮುನ್ಸೂಚನೆ ಹಾಗೂ ಅಂತರ್ಜಲ ಮಟ್ಟದ ತೀವು ಕುಸಿತದ ವರದಿಗಳು ಆತಂಕಕಾರಿಯಾಗಿದೆ. ಮುಂಗಾರು ಕೊರತೆಯ ದುಷ್ಪರಿಣಾಮಗಳು ರೈತರು ಹಾಗೂ ಸಾರ್ವಜನಿಕರನ್ನು ಸಂಕಷ್ಟಕ್ಕೆ ದೂಡುವ ಮುನ್ನ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮಳೆಯ ಅನಿಸ್ಥಿತೆಯ ಲಾಭ ಪಡೆದು ರೈತರನ್ನು ಲೂಟಿ ಮಾಡಲು ಕಾಳಸಂತೆಕೋರರು ಹೊಂಚುಹಾಕುತ್ತಿದ್ದಾರೆ. ಕೂಡಲೇ ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನು ಪಾರದರ್ಶಕವಾಗಿರುವಂತೆ ನೋಡಿಕೊಳ್ಳಬೇಕು. ಕೃತಕ ಅಭಾವ ಸೃಷ್ಟಿಯಾಗದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ತಕ್ಷಣವೇ ತಾಲ್ಲೂಕ ಮಟ್ಟದಲ್ಲಿ ಮೇವು ಬ್ಯಾಂಕ್ ಗಳನ್ನು ಸಕ್ರೀಯಗೊಳಿಸಬೇಕು. ರೈತರು ಅನಿವಾರ್ಯವಾಗಿ ತಮ್ಮ ಜಾನುವಾರುಗಳನ್ನು ಕಸಾಯಿಖಾನೆಗಳಿಗೆ ಮಾರಾಟಮಾಡುವಂತ ಸ್ಥಿತಿ ನಿರ್ಮಾಣವಾಗಬಾರದು. ಜಿಲ್ಲೆಯಲ್ಲಿ ವಿವಿಧ ಬೆಳೆಗಳ ಇಳುವರಿ ಕುಂಟಿತಗೊಳ್ಳುವ ಸಾಧ್ಯತೆ ಇದ್ದು ಸರ್ಕಾರ ಈಗಲೇ ಬೆಳೆ ವಿಮೆ ಹಾಗೂ ಬೆಳೆ ಪರಿಹಾರದ ಕ್ರಿಯಾ ಯೋಜನೆ ರೂಪಿಸಿ ಅನ್ನದಾತರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. ರೈತರಿಗೆ ಮಳೆ ಅಭಾವದಿಂದ ಯಾವ ರೀತಿಯೂ ತೊಂದರೆ ಆಗದ ರೀತಿಯಲ್ಲಿ ನೋಡಿಕೊಳ್ಳುವ ಜವಾಬ್ದಾರಿ ತಮ್ಮ ಇಲಾಖೆಗೆ ಗೊತ್ತಿರುವ ವಿಚಾರ. ಆದರೇ ಯಾವುದೇ ರೀತಿಯ ನಿರ್ಲಕ್ಷ್ಯ ಕಂಡುಬಂದರೆ ರಾಜ್ಯ ಬಿಜೆಬಿ ರೈತ ಮೋರ್ಚಾ ಹಾಗೂ ಜಿಲ್ಲಾ ಬಿಜೆಪಿ ರೈತ ಮೋರ್ಚಾ ವತಿಯಿಂದ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸಿರುವ ಮನವಿಯಲ್ಲಿ ರೈತ ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಕುಮಾರ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಮೋರ್ಚಾದ ಜಿಲ್ಲಾಧ್ಯಕ್ಷ ಬಿ.ಎಸ್.ಬಸವಣ್ಣ ಎಚ್ಚರಿಸಿದ್ದಾರೆ. ರೈತ ಮೋರ್ಚಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಕಾಂಗ್ರೆಸ್ ಶಾಸಕರು ಅದಷ್ಟುಬೇಗ ಅಧಿಕಾರಿಗಳ ಸಭೆ ಕರೆದು ಚರ್ಚಿಸಿ ಕ್ರಮಕೈಗೊಳ್ಳಬೇಕು. ರಾಜ್ಯದ ಕೃಷಿ ಸಚಿವರಾದ ಚೆಲುವನಾರಾಯಣಸ್ವಾಮಿ ಅವರು ಹೆಚ್ಚು ಜಾಗೃತಿಯಿಂದ ಕೆಲಸ ಮಾಡಬೇಕು. ಬರ, ರಸಗೊ ಬ್ಬರ... ಬಿತ್ತನೆಬೀಜ, ಬರದಿಂದಾಗುವ ಸಮಸ್ಯೆಗಳ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕು. ಜಿಲ್ಲೆಯನ್ನು ಬರಕ್ಕೊಳಗಾಗಿರುವ ಜಿಲ್ಲೆ ಎಂದು ಘೋಷಿಸಬೇಕು ಇಲ್ಲದಿದ್ದರೆ ರೈತಮೋರ್ಚಾ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ. ಎಸ್.ನಿರಂಜನ್‌ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಮಳೆ ವಿಳಂಬ ಆಗಿದೆ. ರೈತಾಪಿ ವರ್ಗ ಬಹಳ ಕಂಗಾಲಾಗಿದ್ದಾರೆ. ಈಗ ಬರಪರಿಸ್ಥಿತಿ ಬಂದಿದೆ. ಆಗಾಗಿ ಕೂಡಲೇ ಸರ್ಕಾರ ಕ್ರಮವನ್ನು ತೆಗೆದುಕೊಂಡು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಜಿಲ್ಲಾ ಮಂತ್ರಿಗಳಿಗಾಗಲಿ, ಶಾಸಕರಿಗಾಗಲಿ, ಬರದ ಬಗ್ಗೆ ಗಮನ ಇಲ್ಲ. ಯಾವುದೇ ತರದ ತಯಾರಿಗಳು ಆಗಿಲ್ಲ. ಅಧಿಕಾರಿಗಳಿಗೆ ಎಚ್ಚರಿಸುವ ಕೆಲಸ ಮಾಡುತ್ತಿಲ್ಲ ಈ ಕೂಡಲೇ ರೈತಪರವಾಗಿ ನಿಲ್ಲಬೇಕು. ಎಲ್ಲ ಕ್ರಮಗಳನ್ನು ಕೈಗೊಂಡು ರೈತರಿಗೆ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಮಲ್ಲಿಕಾರ್ಜುನಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳ ಕುಮಾರ್, ಜಿಲ್ಲಾ ರೈತ ಮೋರ್ಚಾದಿಂದ ಜಿಲ್ಲಾಧ್ಯಕ್ಷ ಬಿ.ಎಸ್.ಬಸವಣ್ಣ, ಪ್ರಧಾನ ಕಾರ್ಯದರ್ಶಿ ಗಳಾದ ಚಂದ್ರಶೇಖರ್, ಪುರುಷೋತ್ತಮ, ಉಪಾಧ್ಯಕ್ಷ ಎಂ.ಮಹಾದೇವಸ್ವಾಮಿ, ಚಂದ್ರಶೇಖರಪ್ಪ, ಬಸವಣ್ಣ, ಕಾರ್ಯದರ್ಶಿ ಮಹೇಶ್ ಮರಿಯಾಲ, ಮುಖಂಡರಾದ ರಮೇಶ್, ಸಿದ್ದರಾಜು, ಅಗರರಾಜು, ಶ್ರೀಕಂಠಪ್ಪ, ರಾಮಣ್ಣ ಹಾಜರಿದ್ದರು.

ಮೊದಲ ಪುಟದಿಂದ

## ಸಿಎಂಗೆ ರಾಜಣ್ಣನೇ ಮಾಟ ಮಾಡಿಸಿರಬಹುದು: ಬಾಲಕೃಷ್ಣ

ಮುಂದೆ ಹೇಳಿದ್ದರು. ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಾಲಕೃಷ್ಣ, ಸಿಎಂ ಸಿದ್ದರಾಮಯ್ಯನವರ ಮೇಲೆ ಮಾಟ ಮಂತ್ರ ಮಾಡಬೇಕೆಂದರೆ ಅವರ ಬಗ್ಗೆ ತಿಳಿದಿರಬೇಕು. ಬೇರೆಯವರು ಮಾಡಿದರೆ ಅವರು ಬಿಡುತ್ತಾರೆಯೇ? ರಾಜಣ್ಣ ಅವರೇ ಮಾಡಿರಬೇಕು. ಅವರೆಲ್ಲ ಮಾಡಿದರೆ ಕ್ಷಮೆ ಇರುತ್ತದೆ ಎಂದರು.

ರಾಜಣ್ಣನವರ ಮಾತುಗಳನ್ನು ಅಷ್ಟೊಂದು ಗಂಭೀರವಾಗಿ ನೀವು ಪರಿಗಣಿಸಿದ್ದರೆ ಅದಕ್ಕೆ ಉತ್ತರ ಕೊಡಲು ಸಾಧ್ಯವಿಲ್ಲ. ಮಾಟ-ಮಂತ್ರ ಎಂದು ರಾಜಣ್ಣ ಅವರು ಸಾಮಾನ್ಯವಾಗಿ ಹೇಳಿದ್ದಾರೆ ಅನಿಸುತ್ತದೆ. ಮಾಟ-ಮಂತ್ರ ಮಾಡಿ ಅಧಿಕಾರ ಕಸಿದುಕೊಳ್ಳುವ ಕಾಲ ಹೋಗಿದೆ ಎಂದರು.

## ಚಿನ್ನ ಕಳ್ಳಸಾಗಣೆ ಪ್ರಕರಣ: ರನ್ಯಾ ರಾವ್‌ಗೆ ಜಾಮೀನು

ಪ್ರಕರಣ ಸಂಬಂಧ ಹೈಕೋರ್ಟ್ ಏಕಸದಸ್ಯ ಪೀಠ ಜಾಮೀನು ಅರ್ಜಿ ವಜಾ ಮಾಡಿತ್ತು. ಹೀಗಾಗಿ ರನ್ಯಾ ರಾವ್ ಗೆ ಒಂದು ವರ್ಷ ಜಾಮೀನು ಸಿಕ್ಕಿರಲಿಲ್ಲ. ತನಿಖೆ ವೇಳೆ ಆಭರಣ ವ್ಯಾಪಾರಿ ಸಾಹಿಲ್ ಜೈನ್ ಸಹ ಈ ಜಾಲದಲ್ಲಿದ್ದು, ಸುಮಾರು 40 ಕೋಟಿ ರೂ. ಮೌಲ್ಯದ ಸುಮಾರು 49 ಕೆಜಿ ಚಿನ್ನವನ್ನು ಕಳ್ಳಸಾಗಣೆ ಮೂಲಕ ಮಾರಾಟ ಮಾಡಲು ರನ್ಯಾಗೆ ನೆರವಾಗಿದ್ದಾರೆ ಎನ್ನಲಾಗಿದೆ. ಅಲ್ಲದೇ ದೊಡ್ಡ ಮಟ್ಟದ ಹವಾಲಾ ವಹಿವಾಟು ನಡೆಸಿರುವುದು ಪತ್ತೆ ಆಗಿದ್ದು, ರನ್ಯಾ ಕಮಿಷನ್ ಪಡೆದಿದ್ದರು ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.

## ಜೆಡಿಎಸ್‌ಗೆ ಜಮೀರ್ ಅಗತ್ಯವಿಲ್ಲ: ನಿಖಿಲ್

ನಮ್ಮ ಪಾರ್ಟಿ ಕಟ್ಟೋಕೆ ಕಾರ್ಯಕರ್ತರಿದ್ದಾರೆ. ನಮ್ಮ ಕಾರ್ಯಕರ್ತರು ಹೋರಾಟಕ್ಕೆ ಸಿದ್ಧರಿದ್ದಾರೆ. ಪಕ್ಷ ಯಾರನ್ನೂ ನೆಚ್ಚಿಕೊಂಡಿಲ್ಲ ಅಂತ ಜಮೀರ್‌ಗೆ ತಿರುಗೇಟು ನೀಡಿದರು.

ಅಲ್ಪಸಂಖ್ಯಾತರು ಜೆಡಿಎಸ್ ಕಡೆಗೆ ಮುಖ ಮಾಡುವ ವಿಚಾರವಾಗಿ ಮಾತನಾಡಿ, ಸಿಎಂ ಅವರು ಯಾವಾಗಲೂ ಅಹಿಂದ ರಾಜಕಾರಣಿ ಅಂತ ಹೇಳ್ತಾರೆ. ಅಹಿಂದದಲ್ಲಿ ಅ ಮತ್ತು ದ ಅನ್ನೋದು ಉರುಳಿ ಹೋಗಿದೆ. ರಾಜಣ್ಣ, ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ಕೈಬಿಟ್ಟಾಗಿದೆ. ಜಬ್ಬಾರ್, ನಜೀರ್ ತಲೆದಂಡ ಆಗಿದೆ. ಅಹಿಂದದಲ್ಲಿ ಅಲ್ಪಸಂಖ್ಯಾತ, ದಲಿತ ಹೋಗಿದೆ. ಉಳಿದಿರೋದು ಹಿಂದುಳಿದ ಅನ್ನೋದು. ಅದು ಯಾವಾಗ ಹೋಗುತ್ತದೆ ಗೊತ್ತಿಲ್ಲ. ಸಂಪೂರ್ಣ ಅಹಿಂದ ಛಿದ್ರಗೊಳ್ಳುತ್ತದೆಯೋ ಗೊತ್ತಿಲ್ಲ ಎಂದು ಹೇಳಿದರು.

## ಕೊಲ್ಲಿ ಯುದ್ಧ: ಕದನ ವಿರಾಮ

ವಿಶ್ವಾಸವಿದೆ. ಇರಾನ್ ಜೊತೆಗಿನ ಸಂಘರ್ಷ ಉತ್ತಮ ಒಪ್ಪಂದದ ಜತೆ ಕೊನೆಯಾಗುವ ಭರವಸೆ ಇದೆ. ರಾಜತಾಂತ್ರಿಕ ಮಾತುಕತೆಗೆ ಮೂಲಕ ಪರಿಹಾರ ಕಂಡುಕೊಳ್ಳುವ ಬಯಕೆಯಿದೆ. ಇರಾನ್ ಮೊಂಡುತನದಿಂದ ಮಾತುಕತೆ ಮುರಿದು ಬಿದ್ದರೆ ಸಮರ ಮುಂದುವರಿಸಲು ನಮ್ಮ ರಕ್ಷಣಾ ಪಡೆಗಳು ಸನ್ನದ್ಧವಾಗಿವೆ ಎಂದು ಟ್ರಂಪ್ ಎಚ್ಚರಿಸಿದ್ದಾರೆ.

## ಅಮೆರಿಕ ಮಹಿಳೆ ಮೇಲೆ ಅತ್ಯಾಚಾರ: ಇಬ್ಬರ ಬಂಧನ

ಪ್ರಕರಣ ದಾಖಲಿಸುವಂತೆ ಸೂಚಿಸಿದ್ದಾರೆ. ಅಧಿಕಾರಿಗಳ ಸೂಚನೆ ಮೇರೆಗೆ ಮೈಸೂರಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಬೆಳಕಿಗೆ ಬಂದ ನಂತರ ದೆಹಲಿ ಹಾಗೂ ಚೆನ್ನೈ ಕಚೇರಿಗಳ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಕೊಡಗಿಗೆ ಭೇಟಿ ನೀಡಿ ತನಿಖೆ ನಡೆಸಿದ್ದಾರೆ. ಅತ್ಯಾಚಾರ ಆರೋಪಿ ಹಾಗೂ ಹೋಂ ಸ್ಟೇ ಮಾಲೀಕ ಇಬ್ಬರನ್ನೂ ಕೋರ್ಟ್ ಮೇ 3ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

## ಉಗ್ರನಿಗೆ 6 ವರ್ಷ ಜೈಲು

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಶಾರೀಕ್‌ಗೂ ಅರಾಫತ್ ಅಲಿಗೂ ನಂಟಿರುವುದು ಎನ್‌ಐಎ ತನಿಖೆಯಿಂದ ಪತ್ತೆಯಾಗಿತ್ತು. ಬಂಧನದ ಭೀತಿಯಿಂದ ಅರಾಫತ್ ಅಲಿ ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದ. 2023ರ ಸೆ.14ರಂದು ಕೀನ್ಯಾದಿಂದ ದೆಹಲಿಗೆ ಬಂದಾಗ ಅರಾಫತ್ ಅಲಿಯನ್ನು ಬಂಧಿಸಲಾಗಿತ್ತು.

# ಶಾಸಕರ ಸ್ವಾರ್ಥಕ್ಕಾಗಿ ರಿವರ್ ಫ್ರಂಟ್ ಯೋಜನೆ

## ಜಯಕರ್ನಾಟಕ ಕುಮಾರಸ್ವಾಮಿ ಆರೋಪ । ಏಕಾಏಕಿ ಅಧಿಸೂಚನೆ: ಡಿಸಿ ಬಗ್ಗೆಯೂ ಅಸಮಾಧಾನ



ರಾಮನಗರ: ದರ್ಗಾ, ದೇವಾಲಯ, ನಿವಾಸಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ, ಜನಪ್ರತಿನಿಧಿಗಳು, ನಗರಸಭಾ ಸದಸ್ಯರ ಸಭೆ ಕರೆಯಲಿಲ್ಲ. ತಮ್ಮ ಜಮೀನಿನ ಮೌಲ್ಯವನ್ನು ಹೆಚ್ಚಿಸಿಕೊಳ್ಳುವ ಸ್ವಾರ್ಥಕ್ಕಾಗಿ ಅರ್ಕಾವತಿ ರಿವರ್ ಫ್ರಂಟ್ ಯೋಜನೆಯನ್ನು ಜಾರಿಗೆ ತರಲು ಯತ್ನಿಸುತ್ತಿದ್ದಾರೆ ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ವಿರುದ್ದ ಜಯಕರ್ನಾಟಕ ಸಂಘಟನೆಯ ರಾಜ್ಯ ಸಲಹೆಗಾರ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ನಗರದ ಎಪಿಎಂಸಿ ಯಾರ್ಡ್‌ನಲ್ಲಿರುವ ರೈತ ಭವನದಲ್ಲಿ ಜಯ ಕರ್ನಾಟಕ ಸಂಘಟನೆ ಮತ್ತು ರಾಜ್ಯ ರೈತ ಸಂಘ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ತಮ್ಮ ಸ್ವಾರ್ಥಕ್ಕಾಗಿ ಶಾಸಕರು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅರ್ಕಾವತಿ ರಿವರ್ ಫ್ರಂಟ್ ಯೋಜನೆಯನ್ನು 157 ಕೋಟಿ ವೆಚ್ಚದಲ್ಲಿ ಜಾರಿಗೆ ತರುತ್ತಿದ್ದಾರೆ ಎಂದರು.

### ಶಾಸಕರ ವಿರುದ್ಧ ಆರೋಪ

ಈ ಯೋಜನೆಯ ವ್ಯಾಪ್ತಿಯಲ್ಲಿ ಶಾಸಕರ ಮಾಲೀಕತ್ವದಲ್ಲಿ 3 ಎಕರೆ ಭೂಮಿ ಇದೆ. ಅವರ ಜಮೀನಿನಲ್ಲಿ ಬರುವ ಖರಾಬು ಜಮೀನಿಂದಲೇ ಸುಮಾರು 28 ಕೋಟಿ ರೂ ಹಣ ಸಿಗುತ್ತದೆ. ಇದು ಯಾರ ಹಣಷ ನಮ್ಮ ತೆರಿಗೆ ಹಣವನ್ನು ಈ ರೀತಿ ವ್ಯಯ ಮಾಡುವುದು ಸರಿಯಲ್ಲ. ಈ ಯೋಜನೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯದಂತೆ ಶಾಸಕರು ಅವರ ಜಮೀನು ಮತ್ತು ಆಸ್ತಿಯನ್ನು ಬಫರ್ ಜಾಗದಲ್ಲಿ ವಾಕಿಂಗ್ ಪಾಥ್, ಪಾರ್ಕು ಮಾಡಿ, ಅವರ ಆಸ್ತಿ ಮೌಲ್ಯವನ್ನು ಹೆಚ್ಚಿಸಿಕೊಳ್ಳಲು ಕಾಂಪ್ಲೆಕ್ಸ್ ಮಾದರಿ ಕಟ್ಟಡ ಕಟ್ಟಲು ಅನುಕೂಲ ಮಾಡಿಕೊಡಲು ಈ ಯೋಜನೆಯನ್ನು ತಂದಿದ್ದಾರೆ ಎಂಬ ಸಂಶಯ ಇದೆ ಎಂದು ಹೇಳಿದರು.

### ಜಿಲ್ಲಾಧಿಕಾರಿ ವಿರುದ್ದವೂ ಅಸಮಾಧಾನ

ಜಿಲ್ಲಾಧಿಕಾರಿಗಳು ಹಾಗೂ ಶಾಸಕರು ಏಕಪಕ್ಷೀಯವಾಗಿ ಭೂಸ್ವಾಧೀನ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ರಾಘವೇಂದ್ರ ಕಾಲೋನಿ ನಿವಾಸಿಗಳು, ದರ್ಗಾ, ದೇವಾಲಯದವರು, ರೈತರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಾಏಕಿ ಭೂಸ್ವಾಧೀನ ಹೊರಡಿಸಿದ್ದಾರೆ ಎಂದು ದೂರಿದರು.

ದೇವಾಲಯ, ದರ್ಗಾ, ರಾಘವೇಂದ್ರ ಕಾಲೋನಿಯ ವಸತಿ ಕಟ್ಟಡಗಳ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ ನಂತರ ಭುಗಿಲೆದ್ದ ಅಸಮಾಧಾನದ ಹಿನ್ನೆಲೆಯಲ್ಲಿ ಶಾಸಕರು ದೇವಸ್ಥಾನ, ದರ್ಗಾ, ವಾಸದ ಮನೆಗಳನ್ನು ಯೋಜನೆಯಿಂದ ಕೈಬಿಡಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಸ್ವಾಧೀನದ ಅಧಿಸೂಚನೆ ಹೊರಡಿಸಿದ ನಂತರ ಅದನ್ನು ವಾಪಸ್ಸು ಪಡೆದಿರುವ ಪ್ರಕರಣಳ ಸಂಖ್ಯೆ ವಿರಳ ಎಂದರು.

ಅರ್ಕಾವತಿ ರಿವರ್ ಫ್ರಂಟ್ ಯೋಜನೆಯು ಅನುಷ್ಠಾನವಾದಲ್ಲಿ ರಾಘವೇಂದ್ರ ಬಡಾವಣೆಯ 90ಕ್ಕೂ ಮನೆಗಳು ನಿರ್ನಾಮವಾಗಲಿದೆ. ಸದರಿ ನಿವಾಸಿಗಳನ್ನು ಜಿಲ್ಲಾಧಿಕಾರಿಗಳು ಪರಿಗಣನೆಗೆ ತೆಗೆದುಕೊಂಡಿಲ್ಲ. ಅರ್ಕೇಶ್ವರ ದೇವಾಲಯ, ದರ್ಗಾದ ಅಧ್ಯಕ್ಷರು, ಪದಾಧಿಕಾರಿಗಳ ಗಮನಕ್ಕೆ ತಂದಿಲ್ಲ. ರಾಜ್ಯದಲ್ಲಿ ಧಾರ್ಮಿಕ ವಿಚಾರಗಳು ಬಹಳ ಗಂಭೀರವಾದ ವಿಷಯಗಳು. ಈ ಕಾಮಗಾರಿಗಳನ್ನು ಕೈಗೊಳ್ಳುವ ಮೊದಲು ಭಕ್ತಾದಿಗಳು ಹಾಗೂ ಸಂಬಂಧಪಟ್ಟ ಮುಖಂಡರನ್ನು ಕರೆದು ಸಭೆ ಮಾಡಬೇಕಾದದ್ದು ಜಿಲ್ಲಾಧಿಕಾರಿ ಜವಾಬ್ದಾರಿಯಾಗಿರುತ್ತದೆ ಎಂದರು.

### ಪ್ರಚಾರ ಪಡೆದ ಕಾಮಗಾರಿಗಳು ಎಷ್ಟು ಪ್ರಗತಿಯಾಗಿವೆ

ರಾಮನಗರ ವಿಧಾನಸಭಾ ಕ್ಷೇತ್ರದಾದ್ಯಂತ ಅಭಿವೃದ್ಧಿ ಮಾಡಲು ಅನೇಕ ಯೋಜನೆಗಳು ಇವೆ. ಆದರೆ ಶಾಸಕರು ಗುದ್ದಲಿ, ಹಾರೆ ಹಿಡಿದು ಮಾಧ್ಯಮದ ಮೂಲಕ ಪ್ರಚಾರ ಪಡೆದ ಆ ಕೆಲಸಗಳು ಎಲ್ಲಿಗೆ ಬಂದಿದೆಷ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಚಾಲನೆ ಕೊಟ್ಟ ಕಾಮಗಾರಿಗಳ ಬಗ್ಗೆ ಶಾಸಕರು ಶ್ವೇತಪತ್ರ ಹೊರಡಿಸಲಿ. ಇಲ್ಲವಾದರೆ ರಾಮನಗರ ಕ್ಷೇತ್ರ ಜನತೆಯನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂಬ ಭಾವನೆ ಎಲ್ಲರಿಗೂ ಬರುತ್ತದೆ. ಒಂದೂವರೆ ಸಾವಿರ ಕೋಟಿ ರೂ. ವೆಚ್ಚದಲ್ಲಿ ಕ್ಷೇತ್ರದ ಅಭಿವೃದ್ಧಿ ಮಾಡಿದ್ದೇವೆ ಎನ್ನುತ್ತಾರೆ ಶಾಸಕರು. ಆದರೆ ತಹಶೀಲ್ದಾರ್ ಕಛೇರಿಯಲ್ಲಿ ರೈತರಿಗೆ ಪಹಣಿ ನೀಡಲು ಕಂಪ್ಯೂಟರ್‌ನ ಬಿಳಿಹಾಳೆಗೆ ಹಣವಿಲ್ಲ. ಸುಳ್ಳು ಆಶ್ವಾಸನೆಗಳನ್ನು ನೀಡಿ ಜನರನ್ನು ತಪ್ಪು ದಾರಿಗೆ ತಳ್ಳಬೇಡಿ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಅರ್ಕಾವತಿ ರಿವರ್ ಫ್ರಂಟ್ ಯೋಜನೆ ವಿಚಾರದಲ್ಲಿ ನಗರಸಭೆಯಿಂದ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ. ಹೀಗಿದ್ದ ಮೇಲೆ ಅಧಿಸೂಚನೆಯ ಅವಶ್ಯಕತೆ ಏನಿತ್ತು ಈ ಕ್ಷೇತ್ರದ ಶಾಸಕರು ಪ್ರಮೋಷನ್ ಪಡೆದು ವರ್ಗಾವಣೆಗೊಂಡಿರುವ ಜಿಲ್ಲಾಧಿಕಾರಿಗಳನ್ನು ಇಟ್ಟುಕೊಂಡು ನಮ್ಮ ತೆರಿಗೆ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಈ ಯೋಜನೆಯಿಂದ 60 ಕುಟುಂಬಗಳು ಬೀದಿಪಾಲಾಗುತ್ತವೆ ಎಂಬ ವಿಚಾರ ಮೊದಲೇ ತಿಳಿದಿರಲಿಲ್ಲವೇ ಎಂದು ಪ್ರಶ್ನಿಸಿದರು.

ದೇವಾಲಯ, ದರ್ಗಾ, ಆಸ್ಪತ್ರೆ, ಸಾಯಿಬಾಬಾ ದೇವಾಲಯ ವ್ಯಾಪ್ತಿಯೊಳಗೆ ಬರುತ್ತವೆ. ಕೋಟ್ಯಾಂತರ ಬೆಲೆ ಬಾಳುವ ಈ ಜಾಗಗಳನ್ನು ಪಡೆದು ವಾಕಿಂಗ್ ಟ್ರಾಕ್ ಮಾಡುತ್ತಿರುವುದು ಯಾವ ಪುರುಷಾರ್ಥಕ್ಕೆಷ ನಿರಾಶ್ರಿತರಾಗುವ ಕುಟುಂಬಗಳಿಗೆ ನೀವು ನೀಡುವ ಪರಿಹಾರದ ಹಣದಿಂದ ಜಾಗ ಕೊಂಡುಕೊಳ್ಳಲು ಸಾಲುವುದೇಷ ಇವೆಲ್ಲವನ್ನು ಶಾಸಕರು ಮತ್ತು ಜಿಲ್ಲಾಧಿಕಾರಿಗಳು ಪೂರ್ವ ನಿಯೋಜಿತವಾಗಿ ಚರ್ಚಿಸಬೇಕಿತ್ತು ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತಸಂಘದ ಉಪಾಧ್ಯಕ್ಷ ಮಲ್ಲಯ್ಯ, ಜಿಲ್ಲಾಧ್ಯಕ್ಷ ಕೃಷ್ಣಯ್ಯ, ಸಂಚಾಲಕ ಮುನಿರಾಜು, ರೈತ ಮುಖಂಡರಾದ ರಮ್ಯ ರಾಜಣ್ಣ, ನಾಗರಾಜು, ಪುಟ್ಟಸ್ವಾಮಿ, ವಿಜಯಕುಮಾರ್ ಹಾಗೂ ಇನ್ನು ಮುಂತಾದ ರೈತ ಮುಖಂಡರು ಉಪಸ್ಥಿತರಿದ್ದರು.

## ನಾಳೆ ಕುಮಾರರಾಮ ನಾಟಕ

ಮೈಸೂರು: ರಂಗಾನಂದ ಕಲಾ ಸಂಘದ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಡಾ. ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಏ. 24 ರಂದು ಸಂಜೆ 5.30ಕ್ಕೆ ರಾಮಕೃಷ್ಣ ನಗರದ ರಮಾಗೋವಿಂದ ರಂಗಮಂದಿರದಲ್ಲಿ ಕುಮಾರರಾಮ ಐತಿಹಾಸಿಕ ನಾಟಕ ಹಾಗೂ ಡಾ.ರಾಜ್‌ಕುಮಾರ್ ಅವರ ಚಿತ್ರಗಳ ಅಪರೂಪದ ದೃಶ್ಯಗಳ ಪ್ರದರ್ಶನ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ರಂಗಸ್ವಾಮಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಆರ್. ರಘುಕೌಟಿಲ್ಯ ಉದ್ಘಾಟಿಸುವರು, ಮಾಜಿ ಮೇಯರ್ ಶಿವಕುಮಾರ್, ಡಾ.ಎಂ.ಡಿ.ಸುದರ್ಶನ್ ಅತಿಥಿಗಳಾಗಿರುವರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸುವರು, ಎಂ. ಯೋಗೇಂದ್ರ, ಎನ್.ಉದಯ್‌ಶಂಕರ್ ಉಪಸ್ಥಿತರಿರುವರು. ಎಲ್ಲರಿಗೂ ಉಚಿತ ಪ್ರವೇಶವಿದ್ದು, ಆಸಕ್ತಿ ಇದ್ದವರು ನೂರು ರೂ. ಸಹಾಯಧನ ನೀಡಬಹುದಾಗಿದೆ ಎಂದರು. ಜಿ.ಆರ್. ಗಣೇಶ್, ಪ್ರತಾಪ್, ಸುದರ್ಶನ್, ನಾಗಭೂಷಣ್ ಇದ್ದರು.



## ಏ.25ರಂದು ಉದ್ಯೋಗ ಮೇಳ

ಮೈಸೂರು: ಜೆ.ಪಿ. ನಗರದಲ್ಲಿನ ಹಿಂದುಸ್ತಾನ್ ಕಾಲೇಜಿನಲ್ಲಿ ಏ. 25 ರಂದು ಬೆಳಗ್ಗೆ 9.30 ರಿಂದ ಸಂಜೆ 5.30 ರವರೆಗೆ ಬೃಹತ್ ಕ್ಯಾಂಪಸ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು



ಪ್ರಾಚಾರ್ಯಾ ಸಿ.ಜೆ. ಪ್ರಿಯಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಉದ್ಯೋಗ ಮೇಳದಲ್ಲಿ ರಯಾಂಕ್ ಬುಕ್ ಸಾಫ್ಟ್‌ವೇರ್ ಸಲ್ಯೂಷನ್, ಕ್ರಿಯಾ ನೆಕ್ಸ್ ಟವೆಲ್ತ್, ಜಸ್ಟ್ ಡಯಲ್, ಆರ್‌ಪ್ರೊಸೆಸ್, ಟೀಂ ಲೀಸ್, ಟೆಕ್ನೋ ಟಾಸ್ಕ್ ಮೊದಲಾದ ಕಂಪನಿಗಳು ಪಾಲ್ಗೊಳ್ಳುತ್ತಿವೆ. 2022, 23, 24, 25 ನೇ ಸಾಲಿನ ಪದವಿ, ಸ್ನಾತಕೋತ್ತರ ಪದವೀಧರರು ಹಾಗೂ ಅಂತಿಮ ಸೆಮಿಸ್ಟರ್ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದೆ. ತಮ್ಮ ನವೀಕರಿಸಿದ ರೆಸ್ಯೂಮೆ, ಶೈಕ್ಷಣಿಕ ದಾಖಲೆ, ಗುರುತಿನ ಚೀಟಿ, ದಾಖಲೆ ಪತ್ರಗಳ ಝೆರಾಕ್ಸ್, ಇತ್ತೀಚಿನ ಪಾಸ್‌ಪೋರ್ಟ್ ಭಾವಚಿತ್ರಗಳೊಡನೆ ಆಗಮಿಸಬೇಕು. ಹೆಚ್ಚಿನ ಮಾಹಿತಿಗೆ ದೂ. 97311 45682 ನ್ನು ಸಂಪರ್ಕಿಸ ಬಹುದಾಗಿದೆ ಎಂದರು. ಪ್ಲೇಸ್ಮೆಂಟ್ ಸಂಯೋಜಕರಾದ ಸೌಮ್ಯ, ವಿ. ಈಶ್ವರ್, ವಿನಂತಿ ಇದ್ದರು.

## ಅಧಿಕಾರದ ವ್ಯಾಮೋಹ ಹೃದಯದಲ್ಲಿರಬೇಕು



**ಭಾರತೀನಗರ:** ಅಧಿಕಾರದ ಮದ ತಲೆಗತ್ತಬಾರದು, ಅಧಿಕಾರದ ವ್ಯಾಮೋಹ ಕೇಲವ ಹೃದಯದಲ್ಲಿರಬೇಕೆಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥಸ್ವಾಮೀಜಿ ಅವರು ತಿಳಿಸಿದರು.

ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿಕೆ

ಭಾರತೀನಗರದ ಬಿಇಟಿ ಸಿಇಓ ಆಶಯ್ ಜಿ ಮಧು ಅವರ 33 ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಸಮೀಪದ ಚಂದೂಪುರ ಗ್ರಾಮದ ಡಿ.ಕೆ. ಗೌಡ ಪ್ರೌಢಶಾಲೆ ಆವರಣದಲ್ಲಿ ಭಾರತೀ ಎಜುಕೇಷನ್ ಟ್ರಸ್ಟ್, ಭಾರತೀ ಹೆಲ್ತ್ ಸೈನ್ಸ್ ಕಾಲೇಜುಗಳು, ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆ ಭಾರತೀನಗರ, ಆಶಯ್ ಅಭಿಮಾನಿಗಳ ಬಳಗ, ಮಂಡ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಂದೂಪುರ ಪ್ರಾಥಮಿಕ ಆರೋಗ್ಯ ಕೇಂದ್ರ ಇವರುಗಳ ಸಂಯುಕ್ತಾಶ್ರಯದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿ.ಮಾದೇಗೌಡರು ಎಂದಿಗೂ ತಮ್ಮ ರಾಜಕೀಯ ಜೀವನದಲ್ಲಿ ದರ್ಪದಿಂದ ನಡೆದವರಲ್ಲ, ಸತ್ಯ, ನ್ಯಾಯ, ನಿಷ್ಠೆಯಿಂದ ಬದುಕಿದವರು. ಅವರ ಹಾದಿಯಲ್ಲೇ ಮಗ ಮಧುಜಿಮಾದೇಗೌಡ ಹಾಗೂ ಮೊಮ್ಮಗ ಆಶಯ್ ಮಧು ಅವರು ಸಹ ಸೌಮ್ಯಸ್ವಭಾವದಿಂದ ಬದುಕುತ್ತಿದ್ದಾರೆಂದರು.

**ಶೈಕ್ಷಣಿಕವಾಗಿ ಅಭಿವೃದ್ಧಿ:** ಕಾರ್ಯಕ್ರಮದಲ್ಲಿ ಬಿಇಟಿ ಸಿಇಓ ಆಶಯ್ ಜಿ ಮಧು ಅವರು ಮಾತನಾಡಿ, ದಿ.ಎಸ್.ಎಂ.ಕೃಷ್ಣ ರವರು ಮತ್ತು ನಮ್ಮ ತಾತ ಜಿ.ಮಾದೇಗೌಡರು ಶೈಕ್ಷಣಿಕವಾಗಿ, ಕೈಗಾರಿಕೆ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಸಾಕಷ್ಟು ಶ್ರಮಿಸಿದ್ದಾರೆ. ಇದು ಜನರಿಗೆ ಬಹಳಷ್ಟು ಉಪಯುಕ್ತವಾಗುವಂತಹ ಕೆಲಸವಾಗಿದೆ. ಪ್ರಸ್ತುತ ಬರುತ್ತಿರುವ ರಾಜಕಾರಣಿಗಳು ದೂರ ದೃಷ್ಠಿ ಇಟ್ಟುಕೊಂಡು ಕೆಲಸ ಮಾಡುವಂತಹದ್ದು ಕಡಿಮೆಯಾಗುತ್ತಿದೆ.

ಬಿಇಟಿ ಅಧ್ಯಕ್ಷ ಮಧುಜಿಮಾದೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 2006 ರಿಂದ ನಿರಂತರವಾಗಿ ಸುಮಾರು 15 ವರ್ಷಗಳ ಕಾಲ ಬಿಜಿಎಸ್ ಆಸ್ಪತ್ರೆ ವೈದ್ಯರ ಸಹಯೋಗದೊಂದಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಗ್ರಾಮೀಣ ರೈತರಿಗಾಗಿ ಆಯೋಜಿಸುತ್ತಾ ಬರಲಾಗುತ್ತಿತ್ತು. ಪ್ರತೀ ಶಿಬಿರದಲ್ಲೂ 8 ಸಾವಿರಕ್ಕೂ ಹೆಚ್ಚು ಜನರು ಶಿಬಿರದಲ್ಲಿ ಪಾಲ್ಗೊಂಡು ತಪಾಸಣೆಗೆ ಒಳಪಡುತ್ತಿದ್ದರು. ಇದನ್ನ ರಿತು ಈ ಭಾಗದಲ್ಲೊಂದು ನಮ್ಮ ತಂದೆಯ ಹೆಸರಿನಲ್ಲಿ ಆಸ್ಪತ್ರೆಯನ್ನು ತೆರೆದು ಹಳ್ಳಿಯ ಜನರಿಗೆ ಆರೋಗ್ಯ ಸೇವೆಯನ್ನು ಕಲ್ಪಿಸಿದ್ದೇನೆ ಎಂದರು.

ಚಂದೂಪುರ ರೇಣುಕಾಶ್ರಮದ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ದಿವ್ಯಸಾನ್ನಿಧ್ಯವನ್ನು ವಹಿಸಿದ್ದರು. ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆಯ ಮುಖ್ಯಸ್ಥ ಗಣೇಶ್ ಪ್ರಭು, ಡಿ.ಕೆ.ಗೌಡ ಪ್ರೌಢಶಾಲೆಯ ಅಧ್ಯಕ್ಷ ಶಿವಲಿಂಗೇಗೌಡ, ತಾಲ್ಲೂಕು ಆರೋಗ್ಯ ಆಡಳಿತಾಧಿಕಾರಿ ರವಿಶಂಕರ್, ಹೆಲ್ತ್‌ಸೈನ್ಸ್ ನಿರ್ದೇಶಕ ತಮಿಜ್ ಮಣಿ ಹಲವರಿದ್ದರು.

## ಹಿಂದಿಗೆ ಗ್ರೇಡ್ ಬದಲಿಗೆ ಅಂಕ: ಶಿಕ್ಷಣ ಸಚಿವ ಮಧು ಬಂಗಾರಪ್ಪ

ಬಂಗಾರಪ್ಪ ಅವರ ಪುಣ್ಯಸ್ಮರಣೆ ಅಂಗವಾಗಿ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಈ ಬಾರಿ ಹಿಂದಿ ವಿಷಯಕ್ಕೆ ಅಂಕಗಳನ್ನು ನೀಡಲಾಗುವುದು. ಮುಂದಿನ ವರ್ಷ ಗ್ರೇಡ್ ನೀಡುವ ಕುರಿತು ಸರ್ಕಾರ ನಿರ್ಧರಿಸಲಿದೆ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೃತಿಯ ಭಾಷೆಯಾದ ಹಿಂದಿ ಕಡ್ಡಾಯವಲ್ಲ ಎಂಬ ತೀರ್ಮಾನವನ್ನು ಸರ್ಕಾರ ಕೈಗೊಂಡಿತ್ತು. ಸರ್ಕಾರ ಹಿಂದಿ ವಿರೋಧಿಯಲ್ಲ. ಬದಲಾಗಿ ಕನ್ನಡವನ್ನು ಉಳಿಸುವ ಕೆಲಸ ಮಾಡುತ್ತಿದೆ. ಕನ್ನಡದ ಪರವಾಗಿ ನಿಲ್ಲಲು ನಮ್ಮ ಸರ್ಕಾರ ಈ ತೀರ್ಮಾನ ಕೈಗೊಂಡಿತ್ತು. ಆದರೆ ಹೈಕೋರ್ಟ್ ಆದೇಶವನ್ನು ಸರ್ಕಾರ ಸ್ವಾಗತಿಸುತ್ತದೆ ಎಂದು ಹೇಳಿದರು.

## ಬಾಸ್ಕೆಟ್ ಬಾಲ್ ತರಬೇತಿಗೆ ಚಾಲನೆ



**ಗೋಣಿಕೊಪ್ಪ:** ಗೋಣಿಕೊಪ್ಪ ಬಾಸ್ಕೆಟ್ ಬಾಲ್ ಕ್ಲಬ್ ವತಿಯಿಂದ ಕಾವೇರಿ ಕಾಲೇಜು ಚೆಕ್ಕೇರ ಮುತ್ತಣ್ಣ ಒಳಾಂಗಣ ಕ್ರೀಡಾಂಗಣದಲ್ಲಿ ಮಕ್ಕಳಿಗೆ ಬಾಸ್ಕೆಟ್ ಬಾಲ್ ತರಬೇತಿಗೆ ಚಾಲನೆ ನೀಡಲಾಯಿತು. ರಾಜ್ಯ ಮಟ್ಟದ ಬಾಸ್ಕೆಟ್ ಬಾಲ್ ಆಟಗಾರ್ತಿ ಚೇಂದ್ರಿಮಾಡ ಲತ ಸೋಮಣ್ಣ ಉದ್ಘಾಟಿಸಿ ಶುಭ ಕೋರಿದರು. ರಾಷ್ಟ್ರೀಯ ಆಟಗಾರ ಕೆಚ್ಚೆಟಿರ ರವಿ ದೇವಯ್ಯ ಸೂಕ್ತ ಮಾರ್ಗದರ್ಶನ ನೀಡಿದರು.

ಈ ವೇಳೆ ಗೋಣಿಕೊಪ್ಪ ಬಾಸ್ಕೆಟ್ ಬಾಲ್ ಕ್ಲಬ್ ಅಧ್ಯಕ್ಷ ಕರ್ನಲ್ ಬಾಳೆಯಡ ಸುಬ್ರಮಣಿ ಮಾತನಾಡಿ, ದೈಹಿಕ ಬಲಾಢ್ಯದಿಂದ ಸಾಧನೆಗೆ ಅವಕಾಶ ಹೆಚ್ಚಿರುತ್ತದೆ. ತರಬೇತಿಯಿಂದ ಕಲಿತ ಶಿಕ್ಷಣವನ್ನು ಕ್ರೀಡೆಗೆ ಧಾರೆ ಎರೆದು ವೃತ್ತಿಯಲ್ಲಿ ಕೂಡ ಸ್ಥಾನ ಪಡೆದುಕೊಳ್ಳಬಹುದಾಗಿದೆ. ಕ್ರೀಡೆಯೊಂದಿಗೆ ಮುನ್ನಡೆಯುವ ಹವ್ಯಾಸ ಉತ್ತಮ. ಬಿಬಿಸಿ ಕ್ಲಬ್ ಮೂಲಕ ಸಾವಿರಾರು ಕೀಡಾಪಟುಗಳು ಕಲಿತು ಬದುಕು ಕಂಡುಕೊಂಡಿದ್ದಾರೆ ಎಂದರು.

ಉಪಾಧ್ಯಕ್ಷೆ ಪಳಂಜಂಡ ವಾಣಿ ಚಂಗಪ್ಪ ಮಾತನಾಡಿ, 1973ರಲ್ಲಿ ಚೆಪ್ಪುಡೀರ ಶುಭಾಷ್ ಮುತ್ತಣ್ಣ ಸ್ಥಾಪಕ ಅಧ್ಯಕ್ಷರಾಗಿ ಆಟದ ಕೋರ್ಟ್ ಮೂಲಕ ಪರಿಚಯಿಸಿದರು. ಚೆಪ್ಪುಡೀರ ತಮ್ಮಿ ಮಾದಯ್ಯ, ಮನೆಯಪಂಡ ಸುಬ್ಬಯ್ಯ, ಮನೆಯಪಂಡ ಉತ್ತಪ್ಪ ಸಕಷ್ಟು ಶ್ರಮಿಸಿದ್ದಾರೆ. ಕಾರ್ಯದರ್ಶಿಯಾಗಿ ಚೆಪ್ಪುಡೀರ ಅಪ್ಪಣ್ಣ, ಪದಾಧಿಕಾರಿಗಳಾದ ಬುಟ್ಟಿಯಂಡ ಚೆಂಗಪ್ಪ, ಪಳಂಜಂಡ ಸುರೇಶ್ ಚಂಗಪ್ಪ, ಕುಪ್ಪಂಡ ನಾಚಪ್ಪ, ಕಂಜಿತಂಡ ಪೊನ್ನಪ್ಪ, ಬಾಳೆಯಡ ಗೌರಮ್ಮ, ಸೇರಿಕೊಂಡು ಚಿಂತನೆಯನ್ನು ಉಳಿಸಿಕೊಂಡು ಕ್ರೀಡೆಗೆ ಉತೇಜನ ನೀಡಲಾಗುತ್ತಿದೆ. ಜ್ಞಾನಾಭಿವೃದ್ಧಿಗೆ ಕೂಡ ಕ್ರೀಡೆ ಸಹಕಾರಿ ಎಂದರು. ಚೋಯಮಾಡಂಡ ಸನ್ನು ಗಣಪತಿ ತರಬೇತಿ ನೀಡಿದರು.

## 27ರವರೆಗೆ ತಾಪಮಾನ ಮತ್ತಷ್ಟು ಏರಿಕೆ

ಬೆಂಗಳೂರು: ರಾಜ್ಯದ ವಿವಿಧೆಡೆ ಏ.27ರವರೆಗೆ ತಾಪಮಾನ ಮತ್ತಷ್ಟು ಏರಿಕೆಯಾಗುವ ಜತೆಗೆ, ಬಿಸಿಗಾಳಿ ಬೀಸುವ ಸಾಧ್ಯತೆಯಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಗದಗ, ಧಾರವಾಡ, ಬಾಗಲಕೋಟೆ ಮತ್ತು ಕೊಪ್ಪಳ, ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಬಿಸಿಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬಿಸಿಲಿನಿಂದ ತೇವಾಂಶ ಹೆಚ್ಚಾಗುವುದರಿಂದ ರಾಜ್ಯದಾದ್ಯಂತ ಅಲ್ಲಲ್ಲಿ ಗುಡುಗು, ಸಿಡಿಲು ಸಹಿತ ಜೋರಾದ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಮುನ್ಸೂಚನೆ ಕೂಡ ನೀಡಲಾಗಿದೆ. ಜತೆಗೆ, ಬಿಸಿಗಾಳಿ ಅಥವಾ ವಿಪರೀತ ತಾಪಮಾನದಿಂದ ರಕ್ಷಿಸಿ ಕೊಳ್ಳಲು ಜಾಗೃತಿ ವಿಡಿಯೋಗಳನ್ನು ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಹವಾಮಾನ ಇಲಾಖೆ, ಸಾರ್ವಜನಿಕರು ಆರೋಗ್ಯ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದೆ.

# ಏ.24ಕ್ಕೆ ಎಲ್ರ ಕಾಲೆಳೆಯುತ್ತೇ ಕಾಲ




ಮೈಸೂರು: ಸಿನಿಮಾ ಪ್ರಿಯರನ್ನು 80– 90 ರ ದಶಕಕ್ಕೆ ಕರೆದೊಯ್ಯುವ ಗ್ರಾಮೀಣ ಜೀವನದ ಕಥಾ ಹಂದರವುಳ್ಳ ಎಲ್ರ ಕಾಲೆಳೆಯುತ್ತೆ ಕಾಲ ಚಲನಚಿತ್ರ ಇದೇ ಏ. 24 ರಂದು ರಾಜ್ಯಾದ್ಯಂತ ಸೇರಿದಂತೆ ವಿದೇಶಗಳಲ್ಲಿಯೂ ತೆರೆ ಕಾಣಲಿದೆ ಎಂದು ನಿರ್ದೇಶಕ ಸುಜಯ್ ಶಾಸ್ತ್ರಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಚಲನಚಿತ್ರದಲ್ಲಿ ಹಿರಿಯ ಕಲಾವಿದರಾದ ತಾರಾ, ದತ್ತಣ್ಣ, ಮಂಡ್ಯ ರಮೇಶ್ ಮೊದಲಾದ ವರಿದ್ದಾರೆ ಎಂದರು. ಹಿರಿಯ ಕಲಾವಿದರಾದ ತಾರಾ ಮಾತನಾಡಿ, ಈ ಚಿತ್ರದಲ್ಲಿರುವ ಹಳಬರೊಡನೆ ಹೊಸ ಮುಖಗಳು ಭರವಸೆ ಮೂಡಿಸುತ್ತವೆ. ಯಾವುದೇ ಚಿತ್ರ ಮೈಸೂರಿನಲ್ಲಿ ಯಶಸ್ಸು ಕಂಡರೆ ಇತರೆಡೆಯೂ ಯಶಸ್ವಿಯಾಗುತ್ತದೆ ಎಂಬ ಮಾತು ಸತ್ಯ. ಹಿರಿಯರು ಯಾವ ರೀತಿ ಕಾಲ ಅಳೆಯುತ್ತಿದ್ದರು ಎಂಬುದನ್ನು ಈ ಚಿತ್ರ ತಿಳಿಸುತ್ತದೆ. ಹೀಗಾಗಿಯೇ ಇರಬೇಕು ನಿರ್ದೇಶಕರು ಈ ಚಿತ್ರಕ್ಕೆ ಈ ಹೆಸರಿಟ್ಟಿದ್ದಾರೆ ಎನಿಸುತ್ತದೆ. ಎಲ್ಲರ ಕೈಗೆ ಮೊಬೈಲ್ ಬಂದಿದ್ದು, ಈ ಹಿಂದಿನಂತೆ ಮೂರು ಗಂಟೆ ಸಿನಿಮಾ ವೀಕ್ಷಿಸುತ್ತಿದ್ದ ಸಾಮರ್ಥ್ಯ ಎಲ್ಲರೂ ಕಳೆದುಕೊಂಡಿದ್ದಾರೆ ಎನಿಸುತ್ತದೆ. ಇದೇ ವೇಳೆ ಮಲೆಯಾಳಂನಲ್ಲಿನ ಈಚಿನ ಸಿನಿಮಾ ಪ್ರಯೋಗಗಳು ಹೆಚ್ಚು ಜನರನ್ನು ಆಕರ್ಷಿಸುತ್ತಿವೆ. ಇದೇ ಹಾದಿಯಲ್ಲಿನ ಚಿತ್ರ ಇದು ಸಹಾ ಆಗಿರುವುದರಿಂದ ಯಶಸ್ವಿಯಾಗುವ ಭರವಸೆ ಇದೆ ಎಂದರು. ನಟ ಚಂದನ್‌ಶೆಟ್ಟಿ, ನಟಿ ಅರ್ಚನಾ ಕೊಟ್ಟಿಗೆ, ನಿರ್ಮಾಪಕ ಗೋವಿಂದರಾಜು, ಇನ್ನಿತರರು ಇದ್ದರು.

# 29ರೊಳಗೆ ಬಾಕಿ ವಾಪಾಸ್‌ಗೆ ಡಿಸಿ ಭರವಸೆ: ಪ್ರತಿಭಟನೆ ವಾಪಾಸ್



ಮೈಸೂರು: ಕಬ್ಬಿಗೆ ಸರ್ಕಾರ ಘೋಷಣೆ ಮಾಡಿರುವ ಹೆಚ್ಚುವರಿ ನೂರು ರೂ. ಬಾಬ್ತು ಸರ್ಕಾರದ 50 ರೂ. ಗಳನ್ನು 29 ರ ಒಳಗಾಗಿ ರೈತರ ಖಾತೆಗೆ ಜಮಾ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷಿಕಾಂತ್ ರೆಡ್ಡಿ ಭರವಸೆ ನೀಡಿದ ಹಿನ್ನಲೆಯಲ್ಲಿ ಪ್ರತಿಭಟನೆ ತಾತ್ಕಾಲಿಕವಾಗಿ ಮುಂದೂಡಿದ್ದಾರೆ.

ಕಬ್ಬಿಗೆ ರಾಜ್ಯ ಸರ್ಕಾರ ಹೆಚ್ಚುವರಿ ನೂರು ರೂಪಾಯಿ ನಿಗದಿ ಮಾಡಿ ಸಕ್ಕರೆ ಕಾರ್ಖಾನೆಗಳು 50 ಸರ್ಕಾರದಿಂದ 50 ರೂಪಾಯಿ ಪಾವತಿಸ ಬೇಕೆಂದು ಆದೇಶ ಮಾಡಿತ್ತು. ಆದರೆ, ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟದವರು ಸರ್ಕಾರದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುವ ಕಾರಣ ಪ್ರಕರಣ ತೀರ್ಮಾನವಾಗುವವರೆಗೆ. ಹಣ ಪಾವತಿ ಸಾಧ್ಯವಿಲ್ಲ ಎಂದು ಕಾರ್ಖಾನೆಯವರು ತಿಳಿಸಿದ್ದಾರೆ. ಆದರೆ, ಸರ್ಕಾರದವತಿಯಿಂದ ಪಾವತಿಸಬೇಕಾದ ಟನ್ ಗೆ 50ರೂ. ರೈತರ ಖಾತೆಗೆ 29ರ ಒಳಗಾಗಿ ಜಮಾ ಮಾಡಲಾಗುವುದು ಚಳುವಳಿ ಕೈ ಬಿಡುವಂತೆ ಜಿಲ್ಲಾಧಿಕಾರಿ ತಿಳಿಸಿದರು.

ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ ಸರ್ಕಾರದ ಎಲ್ಲಾ ಆದೇಶಗಳಿಗೂ ಕಾರ್ಖಾನೆಯವರು ತಡೆಯಾಜ್ಞೆ ತರುತ್ತಾರೆ. ಈ ರೀತಿ ಆದರೆ ರೈತರಿಗೆ ನ್ಯಾಯ ಹೇಗೆ ಸಿಗುತ್ತದೆ. ಉಚ್ಚ ನ್ಯಾಯಾಲಯದಲ್ಲಿ ಒಬ್ಬರು ನ್ಯಾಯಾಧೀಶರು ಮೂರು ತಿಂಗಳ ಹಿಂದೆ ಇದೇ ಆದೇಶಕ್ಕೆ ಸಂಬಂಧಿಸಿದಂತೆ ತಡೆಯಜ್ಞೆ ನೀಡುವುದಿಲ್ಲ ಎಂದರು.

ಇದೇ ಉಚ್ಚ ನ್ಯಾಯಾಲಯ ಮತ್ತೊಬ್ಬ ನ್ಯಾಯಾಧೀಶರು ಈ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಈ ರೀತಿ ಆದರೆ ರೈತರಿಗೆ ನ್ಯಾಯ ಕೊಡುವವರು ಯಾರು ಎಂದು ಜಿಲ್ಲಾಧಿಕಾರಿಗಳನ್ನು ಪ್ರಶ್ನಿಸಿದರು. ಗುಜರಾತ್ ನಲ್ಲಿ ಒಂದು ಟನ್ ಕಬ್ಬಿಗೆ 5,000 ಪಾವತಿಸಿದ್ದಾರೆ. ಆದರೆ ಇಲ್ಲಿ ಬಳ್ಳಾರಿ ಕಾರ್ಖಾನೆಯವರು 3400 ಕೊಡಲು ಕಷ್ಟ ಎಂದು ಹೇಳುತ್ತಾರೆ. ಇದು ರೈತರಿಗೆ ಮಾಡುವ ಮೋಸ ಅಲ್ಲವೇ, ಎಲ್ಲರೂ ರೈತರ ಪರ ಎಂದು ಹೇಳುತ್ತಾರೆ. ಆದರೆ ಕಾನೂನಿನ ಅಡಿಯಲ್ಲಿ ರೈತರನ್ನ ನೋಯಿಸುತ್ತಿದ್ದಾರೆ. ಎಂದು ಬೇಸರ ವ್ಯಕ್ತಪಡಿಸಿದರು. ರಾಜ್ಯ ಸಂಘಟನಾ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಸೋಮಶೇಖರ್, ಮಾರ್ಬಳ್ಳಿ ನೀಲಕಂಠಪ್ಪ, ವರಕೋಡು ನಾಗೇಶ್, ಕುರುಬೂರು ಸಿದ್ದೇಶ್, ಲಕ್ಷ್ಮೀಪುರ ವೆಂಕಟೇಶ್, ಕೆಂಡಗಣಪ್ಪ, ಪ್ರಸಾದ್ ನಾಯಕ, ಮಹದೇವಸ್ವಾಮಿ, ನಾಗೇಶ್, ಬಸವರಾಜ, ಮಹಾದೇವು, ನಾಗೇಂದ್ರ, ಅಂಬಳೆ ಮಂಜುನಾಥ್, ಸುನೀಲ್, ಜಯರಾಮು, ನಂಜುಂಡಸ್ವಾಮಿ, ಶಿವಣ್ಣ, ಬಾಲು,ಸತೀಶ್, ಕಮಲಮ್ಮ ಸೇರಿ ಮತ್ತಿತ್ತರರು ಇದ್ದರು.

## ದತ್ತಾಂಶದ ಮೂಲಕ ಪರಿಹಾರ ಕಂಡುಕೊಳ್ಳಲು ಜಿಲ್ಲಾ ಮಟ್ಟದ

# ಕೆ–ಜಿಐಎಸ್ 2.0 ಕಾರ್ಯಾಗಾರ ಸಹಕಾರಿ

## ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ನಿರ್ದೇಶಕ ಡಾ.ಎಲ್.ಎನ್.ರಾಜೇಶ್ ಹೇಳಿಕೆ



ಮೈಸೂರು: ದತ್ತಾಂಶದ ಮೂಲಕ ಪರಿಹಾರ ಕಂಡುಕೊಳ್ಳಲು ಹಾಗೂ ವೆಬ್ ಮತ್ತು ಮೊಬೈಲ್ ಅನ್ವಯಿಕೆಗಳನ್ನು ತಯಾರಿಸಲು, ಈ ಜಿಲ್ಲಾ ಮಟ್ಟದ ಕೆ–ಜಿಐಎಸ್ 2.0 ಕಾರ್ಯಾಗಾರ ಸಹಕಾರಿ ಎಂದು ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ನಿರ್ದೇಶಕ ಡಾ.ಎಲ್.ಎನ್.ರಾಜೇಶ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ಥಳೀಯ ಆಡಳಿತಕ್ಕಾಗಿ ಜಿಐಎಸ್ ಆಧಾರಿತ ಮಾಹಿತಿಯನ್ನು ತಲುಪಿಸುವ ತಾಂತ್ರಿಕ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು. ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ), ಕರ್ನಾಟಕ ಸರ್ಕಾರ ವು ಸ್ಥಾಪನೆಗೊಂಡ ಬಗ್ಗೆ ಹಾಗೂ ನಂತರದ ದಿನಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಹಲವು ಮಹತ್ವದ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಬಗ್ಗೆ ವಿವರಿಸಿದರು. ಕೆ–ಜಿಐಎಸ್ ಆವೃತ್ತಿ 1.0 ಅನ್ನು 2016 ರಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಸುಮಾರು 600 ಜಿಐಎಸ್ ಪದರಗಳು ಮತ್ತು 20 ಲಕ್ಷ ಸರ್ಕಾರಿ ಆಸ್ತಿಗಳ ಮಾಹಿತಿಯನ್ನು ಕೆ–ಜಿಐಎಸ್ ಪೋರ್ಟಲ್‌ನಲ್ಲಿ ಒಂದೇ ಸೂರಿನಲ್ಲಿ ಲಭ್ಯವಾಗುವಂತೆ ತಂತ್ರಜ್ಞಾನವನ್ನು ಕೆಎಸ್‌ಆರ್‌ಎಸ್‌ಎಸಿ ಕೇಂದ್ರವು ಅಭಿವೃದ್ಧಿಪಡಿಸಿದೆ. ಇದರಲ್ಲಿ41 ಮೊಬೈಲ್ ಅನ್ವಯಿಕೆಗಳು ಮತ್ತು 60 ವೆಬ್ ಅನ್ವಯಿಕೆಗಳು ಲಭ್ಯವಿದ್ದು, ನಾಗರಿಕರು ಮತ್ತು ಇಲಾಖೆಗಳು ಬಳಸಿಕೊಳ್ಳುತ್ತಿರುವುದಾಗಿ ತಿಳಿಸಿದರು.



ದಿಶಾಂಕ್ ಆಪ್ಷಯಪ್ ನಲ್ಲಿ ಯಾವ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂಬುದನ್ನು ತಿಳಿಯಬಹುದಾಗಿದೆ. ಅದೇ ರೀತಿ ಎರಡು ಮೂರು ದಿನಗಳ ಮುಂಚೆ ಹವಾಮಾನದ ವರದಿಯನ್ನು ನಿರ್ದಿಷ್ಟ ಆಪ್ ಮೂಲಕ ಪಡೆಯಬಹುದಾಗಿದೆ. ಮೈಸೂರು ಮೂಡಾ ಗೆ 2009 ರಲ್ಲಿ ಮೂಡಾ ವ್ಯಾಪ್ತಿಯ ಆಸ್ತಿಗಳ ಬಗ್ಗೆ ಜಿಯೋ ಮ್ಯಾಪ್ ಮಾಡಿಕೊಡಲಾಗಿತ್ತು. 2016 ರಲ್ಲಿ ಕೆ ಜಿ ಐ ಎಸ್ 1.0 ಜಾರಿಗೆ ತರಲಾಗಿತ್ತು. 2024 ರಲ್ಲಿ ಕೆ ಜಿ ಐ ಎಸ್ 2.0 ಅನ್ನು ಅಭಿವೃದ್ಧಿ ಪಡಿಸಲಾಗಿದೆ. ಇದಕ್ಕೆ ಗೋಲ್ಡ್ ಅವಾರ್ಡ್ ದೊರೆತಿದೆ ಎಂದು ಮಾಹಿತಿ ನೀಡಿದರು.

ಕೆ–ಜಿಐಎಸ್ ಯೋಜನೆಗೆ 2024 ನೇ ಸಾಲಿನ ರಾಷ್ಟ್ರೀಯ ಇ–ಆಡಳಿತ ಚಿನ್ನದ ಪ್ರಶಸ್ತಿಯು ಕೇಂದ್ರಕ್ಕೆ ಲಭಿಸಿರುವುದನ್ನು ಉಲ್ಲೇಖಿಸಿದರು..


ಮುಂದುವರೆದು ಕೆ–ಜಿಐಎಸ್ 2.0 ಜಿಲ್ಲಾ ಮಟ್ಟದ ಕಾರ್ಯಾಗಾರದ ಮುಖ್ಯ ಉದ್ದೇಶಗಳ ಕುರಿತು ಮಾತನಾಡುತ್ತಾ, ಪ್ರತಿ ಜಿಲ್ಲೆ,ತಾಲ್ಲೂಕು, ಗ್ರಾಮ ಪಂಚಾಯಿತಿ ತನ್ನದೇ ಆದ ವೈಶಿಷ್ಟ್ಯಗಳ ಜೊತೆಗೆ ಸ್ಥಳೀಯ ಸಮಸ್ಯೆ ಹೊಂದಿದ್ದು, ಈ ಸಮಸ್ಯೆಗಳಿಗೆ ಭೂದೈಶಿಕ ದತ್ತಾಂಶದ ಮೂಲಕ ಪರಿಹಾರ ಕಂಡುಕೊಳ್ಳಲು ಹಾಗೂ ವೆಬ್ ಮತ್ತು ಮೊಬೈಲ್ ಅನ್ವಯಿಕೆಗಳನ್ನು ತಯಾರಿಸಲು, ಈ ಜಿಲ್ಲಾ ಮಟ್ಟದ ಕೆ–ಜಿಐಎಸ್ 2.0 ಕಾರ್ಯಾಗಾರವನ್ನು ಜಿಲ್ಲಾಡಳಿತದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಡಾ.ಪಿ.ಶಿವರಾಜು ಮಾತನಾಡಿ ತಾಂತ್ರಿಕತೆಗೆ ಎ ಐ ತಂತ್ರಜ್ಞಾನ ಬಂದು ಆವರಿಸಿಕೊಳ್ಳುತ್ತಿದೆ. ಕೆ ಎಸ್ ಆರ್ ಎಸ್ ಎ ಸಿ ಮಾಡಿಕೊಟ್ಟಿರುವ ಅಪ್ಲಿಕೇಶನ್ ಗಳು ಕರಾರವಕ್ಕಾಗಿ ಇವೆ. ಈ ಅಪ್ಲಿಕೇಶನ್ ಗಳು ಸುರಕ್ಷಿತವಾಗಿವೆ. ನೀವು ಈ ಕೇಂದ್ರಕ್ಕೆ ಭೇಟಿ ನೀಡಿ ಜ್ಞಾನವನ್ನು ಪಡೆದುಕೊಳ್ಳಿ. ಈ ಸಂಸ್ಥೆ ಇಂದಿಗೂ ನಂ ಒನ್ ಸ್ಥಾನವನ್ನು ಉಳಿಸಿಕೊಂಡಿದೆ ಎಂದರು. ಉಪ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್ ಮಾತನಾ ಡಿದರು. ಕಾರ್ಯಾಗಾರದಲ್ಲಿ ಸಿ ಸಿ ಎಫ್ ರವಿಶಂಕರ್, ಪೊಲೀಸ್ ಉಪ ಅಧೀಕ್ಷಕ ಮಲ್ಲಿಕ್, ಉಪ ಪೊಲೀಸ್ ಆಯುಕ್ತ ಕೆ.ಎಸ್. ಸುಂದರ್ ರಾಜ್ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸವಿತಾ ಅವರು ಸೇರಿ ಇತರರು ಉಪಸ್ಥಿತರಿದ್ದರು.

### ದಿಶಾಂಕ್ ಅಪ್‌ನಲ್ಲಿ ಭೂಮಿಯ ಮಾಲೀಕತ್ವ ತಿಳಿಯಬಹುದು

ಸಿ.ಸಿ.ಎಫ್ ರವಿಶಂಕರ್ ಮಾತನಾಡಿ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಾಗಿದೆ. ದಿಶಾಂಕ್ ಅಪ್‌ನಲ್ಲಿ ಭೂಮಿಯ ಮಾಲೀಕತ್ವ ತಿಳಿಯಬಹುದಾಗಿದೆ. ಅರಣ್ಯ ಇಲಾಖೆಯ ವಿಷಯಕ್ಕೆ ಬಂದಾಗ ನಮ್ಮ ಇಲಾಖೆಯ ಭೂಮಿಯ ಸಮಸ್ಯೆ ಬಂದಾಗ ನಾವು ಈ ಕೇಂದ್ರವನ್ನು ಸಂಪರ್ಕಿಸುತ್ತೇವೆ. ಈ ಸಂಸ್ಥೆಯು ನಮ್ಮ ಇಲಾಖೆಯ ಜೊತೆಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ ಎಂದು ಮಾಹಿತಿ ನೀಡಿದರು.

## ಕೃಷ್ಣ ವಂದನ





ಸ್ನೇಹಾ ಆನಂದ್

### ಹೇ ಕೃಷ್ಣಾ !

ರಾಧೆಯ ಕೂಗಿಗೆ ಕೃಷ್ಣನ ಕೊರಳು
ನುಡಿಸಿತು ಮುರಲಿಯ ಮುದದಿಂದ!
ರಾಧೆಯು ತನ್ನ ಕೃಷ್ಣನ ಧ್ವನಿಯರಸಿ
ಬಂದಳು ಬಯಲಿಗೆ ಭರದಿಂದ!

ಸಡಗರ ತಂದಿತು ಕೃಷ್ಣನ ಕೊಳಲು,
ರಾಧೆಯ ಮನವು ಕುಣಿಕುಣಿದಾಡಿತು!
ತನ್ನನಿಯನ ಧ್ವನಿಗೆ ರಾಧೆಯ ನಾಚಿ
ನಿಂತಳು ಮರದಡಿ ಮೈಮರೆತು !

ಗೋಗಳ ಹಿಂಡಲಿ ಕಂಡಳು ಕೃಷ್ಣನ
ಕಣ್ಣಲಿ ಪ್ರೀತಿಯ ಸೆಳೆಯುತಲಿ
ಮುರಲಿಯ ಮಧುರ ಗಾನವು ಆಯಿತು
ತುಂತುರು ಮಳೆಯನು ಹನಿಸುತಲಿ!

ಕೃಷ್ಣನು ರಮಣಿಯ ಕರವನು ಪಿಡಿದು
ಸೆಳೆದನು ತನ್ನಡೆ ಭರದಿಂದ
ರಾಧೆಯ ಕೊರಳು ತಟ್ಟನೆ ಬಾಗಿತು
ನಯನವು ನಾಚಿ ಪ್ರೀತಿಯಲಿ!


ಕಂದಾಯ ಇಲಾಖೆ

**ಪ್ರಾದೇಶಿಕ ಆಯುಕ್ತರ ಕಾರ್ಯಾಲಯ**

ಮೈಸೂರು ವಿಭಾಗ, ಮೈಸೂರು. "ಹೈವ್ಯೂ". ವಿನೋಬರಸ್ತೆ, ಮೈಸೂರು–570 005
ದೂರವಾಣಿ: 0821–2414088 ಇ–ಮೇಲ್: rc-kamy@kar.nic.in, rcmysuru@gmail.com

ಸಂ.: RCM-ACT(9) Procurement/01/2026 ದಿನಾಂಕ: 16.04.2026

**ಟೆಂಡರ್ ಪ್ರಕಟಣೆ**

ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿಗೆ ಅವಶ್ಯವಿರುವ **ಲೇಖನ ಸಾಮಗ್ರಿಗಳು/ಲೇಖನೇತರ ಸಾಮಾಗ್ರಿಗಳು ಮತ್ತು ಕಾಟ್ರಿಡ್ಜ್/ಟೋನರ್‌ಗಳನ್ನು ಸರಬರಾಜು ಮಾಡುವ ಬಗ್ಗೆ** ಆಸಕ್ತ ಸಂಸ್ಥೆಯವರಿಂದ ಒಂದು ವರ್ಷದ ಅವಧಿಗೆ ಇ–ಪ್ರೊಕ್ಯೂರ್‌ಮೆಂಟ್‌ನ K.P.P.P ಮೂಲಕ ಸ್ಪರ್ಧಾತ್ಮಕ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳನ್ನು ಕಚೇರಿಯ ವೆಬ್‌ಸೈಟ್ **rcmysore.gov.in** ಹಾಗೂ https://kppp.karnataka.gov.in ಅನ್ನು ನೋಡಬಹುದಾಗಿದೆ. ಇ.ಎಂ.ಡಿ. ಮೊತ್ತ **ರೂ. 15,000 /–ಗಳನ್ನು** ಹಾಗೂ ಇ–ಟೆಂಡರ್ ಪ್ರೊಸೆಸಿಂಗ್ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಾವತಿಸುವುದು.

ವಿವರಗಳು ಈ ಕೆಳಗಿನಂತಿದೆ

| | | |
|---|---|---|
| 1 | Tender Notification No. and date | **No.RCM-ACT(9) Procurement/ 01/2026 Dated: 16.04.2026** |
| 2 | Last Date for Uploading the filled Tender Document: (Receipt of Tender) | **Date: 27.04.2026 Time: 05.00 PM** |
| 3 | Time and Date of Opening of Technical Bid | **Date: 29.04.2026 Time: 11.30 AM** |
| 4 | Time and Date of Opening of Financial Bid | **Date: 02.05.2026 Time: 11.30 AM** |

ಸಹಿ/– ಹೆಚ್ಚುವರಿ ಆಯುಕ್ತರು
ಪ್ರಾದೇಶಿಕ ಕಚೇರಿ, ಮೈಸೂರು ವಿಭಾಗ, ಮೈಸೂರು

DIPR/MYS/79/SA/2026-27


# ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಕೊಳ್ಳೇಗಾಲ. ತಾಲ್ಲೂಕಿನ ತಿಮ್ಮರಾಜೀಪುರ ಗ್ರಾ.ಪಂ ಹಾಗೂ ಸಿದ್ದಯ್ಯನಪುರ ಗ್ರಾ.ಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 4.70 ಕೋಟಿ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬುಧವಾರ ಶಾಸಕ ಎ.ಆರ್.ಕೃಷ್ಣಮೂರ್ತಿ ಭೂಮಿಪೂಜೆ ನಡೆಸಿದರು.

ಕುರುಬನಕಟ್ಟೆ ದೇವಸ್ಥಾನದಲ್ಲಿ ಅಂದಾಜು 2.30 ಕೋಟಿ ವೆಚ್ಚದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ, ಜಕ್ಕಳ್ಳಿ ಗ್ರಾಮದಲ್ಲಿ 30 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಕೋಟೆಕೆರೆಯಲ್ಲಿ 30 ಲಕ್ಷ ರಸ್ತೆ ಅಭಿವೃದ್ಧಿ ಕಾಮಗಾರಿ, ತಿಮ್ಮರಾಜೀಪುರ ಗ್ರಾಮದ ಹೊರವಲಯದ ರಸ್ತೆ ಕಾಮಗಾರಿ 90 ಲಕ್ಷ, ಕೆಂಪನಪಾಳ್ಯ ಗ್ರಾಮದಲ್ಲಿ 90 ಲಕ್ಷ ವೆಚ್ಚದಲ್ಲಿ ರಸ್ತೆ ಕಾಮಗಾರಿ ಹಾಗೂ ಲಕ್ಕರಸಾನಪಾಳ್ಯ ಗ್ರಾಮದಲ್ಲಿ ಬಸವ ಭವನ 10 ಲಕ್ಷ ವೆಚ್ಚದಲ್ಲಿ ಮುಂದುವರಿದ ಕಾಮಗಾರಿ ಶಾಸಕರು ಗುದ್ದಲಿ ಪೂಜೆ ನಡೆಸಿದರು.

ಈ ಸಂಧರ್ಭದಲ್ಲಿ ಕುರುಬನಕಟ್ಟೆ ಧರ್ಮಾದಿಕಾರಿ ವರುಣಲಿಂಗರಾಜೆ ಅರಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ, ಸಾಹಿತಿ ಶಂಕನಪುರ ಮಹದೇವ, ನಾಗರೀಕ ಹಿತರಕ್ಷಣಾ ಸಮಿತಿಯ ನಟರಾಜು ಮಾಳಿಗೆ, ತಿಮ್ಮರಾಜೀಪ ಪುಟ್ಟಣ್ಣ, ಗ್ರಾ.ಪಂ ಮಾಜಿ ಅಧ್ಯಕ್ಷ ರಾಜು, ಮಾಜಿ ಉಪಾಧ್ಯಕ್ಷ ಕೆಂಪರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮಣ್ಣ, ಯುವಮುಖಂಡ ಚೇತನ್, ಶಾಂತರಾಜು, ಲೋಕೋಪಯೋಗಿ ಇಲಾಖೆಯ ಎಇಇ ಪುರುಷೋತ್ತಮ್, ಅರ್ಚಕ ಮಲ್ಲಣ್ಣ, ಗುತ್ತಿಗೆದಾರರು ಮಹೇಶ್, ಶಿವಕುಮಾರ್, ಮಲ್ಲು ಹಾಗೂ ಇತರರು ಇದ್ದರು.

# ಖರ್ಗೆ ವಿರುದ್ಧ ಬಿಜೆಪಿ ಪ್ರತಿಭಟನೆ




ಮೈಸೂರು: ಪ್ರಧಾನಿ ನರೇಂದ್ರ ಮೋದಿಯವರ ಕುರಿತು ಅವಹೇಳನಾಕಾರಿಯಾಗಿ ಹೇಳಿಕೆ ನೀಡಿದ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ನಗರದಲ್ಲಿ ಗ್ರಾಮಾಂತರ ಯುವ ಮೋರ್ಚಾ ಪ್ರತಿಭಟಿಸಿದರು.

ನಗರದ ರಾಮಸ್ವಾಮಿ ವೃತ್ತದಲ್ಲಿ ಯುವ ಮೋರ್ಚಾ ಅಧ್ಯಕ್ಷ ಅರ್ಜುನ್ ಪಾರ್ಥ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕುರಿತು ಉಗ್ರವಾದಿ ಎಂಬ ಪದವನ್ನು ಉಪಯೋಗಿಸಿದ್ದ ಖರ್ಗೆ ಹೇಳಿಕೆ ಖಂಡನೀಯ. ಈ ಕೂಡಲೇ ಖರ್ಗೆ ದೇಶದ ಜನರ ಕ್ಷಮೆಯಾಚಿಸಬೇಕೆಂದು ಹೇಳಿದರು. ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಅನಿಲ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸಚಿನ್ ಪ್ರವೀಣ್ ಇತರರು ಉಪಸ್ಥಿತರಿದ್ದರು.

# ಸುಡು ಬೇಸಿಗೆ ಹಿನ್ನಲೆ: ಸ್ಟ್ರೋಕ್ ವಾರ್ಡ್ ತೆರೆದ ಆಸ್ಪತ್ರೆ

ಮೈಸೂರು: ಬಿರು ಬೇಸಿಗೆ ಹಿನ್ನಲೆ ರಾಜ್ಯಾದ್ಯಂತ ತಾಪಮಾನದಲ್ಲಿ ಭಾರಿ ಏರಿಕೆ ಕಂಡು ಬಂದ ಹಿನ್ನಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ವಿಶೇಷ ಸನ್ ಸ್ಟ್ರೋಕ್ ವಾರ್ಡ್ ನಿರ್ಮಾಣ ಮಾಡಿದ್ದಾರೆ. ನಗರದ ಕೆ.ಆರ್. ಆಸ್ಪತ್ರೆಯಲ್ಲೂ ಪ್ರತ್ಯೇಕ ವಾರ್ಡ್ ವ್ಯವಸ್ಥೆ ನಿರ್ಮಾಣ ಮಾಡಲಾಗಿದೆ.



ಕೃಷ್ಣರಾಜ ಆಸ್ಪತ್ರೆಯ ಕಲ್ಲು ವಾರ್ಡ್ ಬಿಲ್ಡಿಂಗ್‌ನಲ್ಲಿ ಪ್ರತ್ಯೇಕ 30 ಬೆಡ್‌ಗಳ ವ್ಯವಸ್ಥೆ ಮಾಡಲಾಗಿದ್ದು, ಸನ್ ಸ್ಟ್ರೋಕ್‌ನಿಂದ ಬಂದವರಿಗೆ ತುರ್ತು ಚಿಕಿತ್ಸೆ ನೀಡಲು ವ್ಯವಸ್ಥೆ ಕಲ್ಪಿಸಲಾಗಿದೆ. ವೈದ್ಯರ ಜೊತೆ ಇಬ್ಬರು ನರ್ಸ್, ಒಬ್ಬ ಡಿ ಗ್ರೂಪ್ ನೌಕರನನ್ನು ವಿಶೇಷ ವಾರ್ಡ್ ಗೆ ನೇಮಕ ಮಾಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಕುರಿತು ಮಾತನಾಡಿದ ಕೆ.ಆರ್.ಆಸ್ಪತ್ರೆ ಅಧೀಕ್ಷಕಿ ಶೋಭಾ ಮಾತನಾಡಿ, ಸಾಮಾನ್ಯವಾಗಿ ಬೇಸಿಗೆಯ ತಾಪಮಾನದಲ್ಲಿ ಸುಮಾರು 5–6 ಲೀಟರ್ ನೀರು ಕುಡಿಯಬೇಕು. ಸುಸ್ತು ಆಗುವಾಗ ಹೆಚ್ಚು ನೀರು ಕುಡಿಯಬೇಕು. ಹಣ್ಣು ಹಂಪಲು, ಬೇಯಿಸಿದ ತರಕಾರಿ, ನೀರಿನಾಂಶವಿರುವ ಪದಾರ್ಥಗಳನ್ನು ಹೆಚ್ಚು ಸೇವಿಸಬೇಕು. ಆಹಾರ ಪದಾರ್ಥಗಳಲ್ಲಿ ಉಪ್ಪು, ಖಾರ ಹಾಗೂ ಸಕ್ಕರೆ ಅಂಶಗಳು ಕಡಿಮೆ ಇದ್ದರೆ ಒಳ್ಳೆಯದು. ಬಿಸಿಲು ಹೆಚ್ಚು ಇದ್ದಾಗ ಹೊರ ಬರಬೇಡಿ. ಅನಿವಾರ್ಯ ಇದ್ದಾಗ ಛತ್ರಿ ಬಳಸಿ ಓಡಾಡಬೇಕು. ಎಂದು ಹೇಳಿದರು.

## ನಗರಸಭೆ ಅಧಿಕಾರಿ ಮತ್ತು ಗುತ್ತಿಗೆದಾರರ ವಿರುದ್ಧ ಕ್ರಮಕ್ಕಾಗಿ ಬಿಜೆಪಿ ದೂರು

# ಜೋಡಿ ರಸ್ತೆ ಪುಟ್‌ಪಾತ್ ಅಭಿವೃದ್ಧಿ ನೆಪ: ಸಾಲು ಸಸಿಗಳಿಗೆ ಹಾನಿ



ಚಾಮರಾಜನಗರ, ನಗರದ ರಾಚಯ್ಯ ಜೋಡಿ ರಸ್ತೆಯಲ್ಲಿ ನಗರಸಭೆಯು ಎರಡು ಬದಿಯ ಪುಟ್‌ಪಾತ್ ಅಭಿವೃದ್ಧಿ ನೆಪದಲ್ಲಿ ಸಾಲು ಮರ ಹಾಗೂ ಸಸಿಗಳಿಗೆ ಹಾನಿ ಮಾಡುವ ಜೊತೆಗೆ, ಬೆಳೆದು ನಿಂತ ಸಸಿಗಳು ಜೆಸಿಬಿ ಆರ್ಭಟಕ್ಕೆ ನೆಲಕ್ಕುಲಿದೆ.ನಗರಸಭೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ಯುವ ಮೋರ್ಚಾದಿಂದ ಪಟ್ಟಣ ಠಾಣೆ ಪೊಲೀಸರಿಗೆ ದೂರು ನೀಡಲಾಗಿದೆ.

ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಿ. ಬಿ. ಸೂರ್ಯಕುಮಾರ್ ನೇತೃತ್ವದ ತಂಡ ಪಟ್ಟಣ ಠಾಣೆಗೆ ತೆರಳಿ ಸಹಾಯಕ ಇನ್ಸ್‌ಪೆಕ್ಟರ್ ಅವರಿಗೆ ದೂರು ನೀಡಿ ಪ್ರಕರಣ ದಾಖಲು ಮಾಡಿಸಿದ್ದಾರೆ.

ಚಾಮರಾಜನಗರ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿ ನಗರಸಭೆ ವತಿಯಿಂದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಗುತ್ತಿಗೆದಾರರು ಹಾಗೂ ನಗರಸಭೆ ಅಧಿಕಾರಿಗಳ ಬೇಜವಾಬ್ದಾರಿತನದಿಂದ, ಸಾರ್ವಜನಿಕರು ಸಂಘ ಸಂಸ್ಥೆಯಿಂದ ಮತ್ತು ತಮ್ಮ ಸ್ವಂತ ಖರ್ಚಿನಿಂದ ನಗರದ ಜನಸೇವೆ ಮತ್ತು ಪ್ರಾಣ ಪಕ್ಷಿಗಳ ಉಪಯೋಗಕ್ಕಾಗಿ ಸಾಲುಮರದ ವೆಂಕಟೇಶ್ ಸಸಿಗಳನ್ನು ನೆಟ್ಟು ಸಂರಕ್ಷಣೆ ಮಾಡಿರುವ ಮರಗಳ ಬೇರುಗಳಿಗೆ ಜೆಸಿಬಿ ಬಿಟ್ಟು ಬೇರನ್ನು ಸಡಿಲಗೊಳಿಸಿ, ಮರವೇ ಉರಳು ಬೀಳುವಂತೆ ಮಾಡಿದ್ದಾರೆ. ಅಲ್ಲದೇ ಕಳೆದ ಮೂರ್ನಾಲ್ಕು ವರ್ಷಗಳಿಂದ ಬೆಳೆದ ಮರಗಳಿಗೆ ಬೇಸಿಗೆ ಜೊತೆಗೆ ಬೇರು ಕತ್ತರಿಸಿದ ಪರಿಣಾಮ ಇಡೀ ಮರವೇ ಒಣಗುತ್ತಿದೆ.

ಇನ್ನು ಗುತ್ತಿಗೆದಾರರು ಹಾಗೂ ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಒಂದು ಮರ ಬೇರು ಸಮೇತ ನೆಲಕ್ಕೆ ಬಿದ್ದಿದೆ. ಬಿ. ರಾಚಯ್ಯ ಜೋಡಿ ರಸ್ತೆ ಎರಡು ಬದಿಯಲ್ಲಿ ಸಸಿಗಳನ್ನು ನೆಟ್ಟು ಪೋಷಣೆ ಮಾಡಿ, ಸಾರ್ವಜನಿಕರು, ಪ್ರಾಣ , ಪಕ್ಷಿಗಳಿಗೆ ನೆರಳು ಮತ್ತು ಉತ್ತಮ ಗಾಳಿ ದೊರೆಯುವಂತೆ ವೆಂಕಟೇಶ್ ಮಾಡಿದ್ದರು. ಆದರೆ, ಇದ್ಯಾವುದನ್ನು ಲೆಕ್ಕಿಸದೇ ನಗರಸಭೆ ಅಧಿಕಾರಿಗಳು ಹಾಗು ಗುತ್ತಿಗೆದಾರರ ಜೆಸಿಬಿ ಮೂಲಕ ಅಗೆಯುವ ಮೂಲಕ ಮರಗಳಿಗೆ ಹಾನಿ ಮಾಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಂಡು, ಇನ್ನುಳಿದ ಗಿಡಗಳಿಗೆ ಹಾನಿಯಾಗದಂತೆ ಕ್ರಮ ವಹಿಸಬೇಕು ಕೂಡಲೇ ಮಣ್ಣು ಹಾಕಿಸಿ, ನೀರು ಹಾಯಿಸಿ, ಗಿಡಗಳ ಪೋಷಣೆಗೆ ಮುಂದಾಗಬೇಕು ಎಂದು ಮನವಿ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾದ ಸೋಮವಾರಪೇಟೆ ಗುರು, ಮಹೇಶ್, ನಗರ ಘಟಕದ ಯುವ ಮೋರ್ಚಾ ಅಧ್ಯಕ್ಷ ಪ್ರವೀನ್ ನಾಯಕ್, ಗ್ರಾಮಾಂತರ ಮಂಡಲ ಅಧ್ಯಕ್ಷ ಹರದನಹಳ್ಳಿ ಪ್ರದೀಪ್ ಇದ್ದರು.

## 27ರಿಂದ ಕಾವೇರಿ ಕೊಳದ ಅಧ್ಯಯನ



ಮೈಸೂರು: ಕಾವೇರಿ ಕುರಿತಂತೆ ರಾಜ್ಯಕ್ಕೆ ಸತತ ಅನ್ಯಾಯವಾಗುತ್ತಿದೆ. ಹೀಗಾಗಿ ಮುಂದಿನ ತಿಂಗಳು ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲು ಪೂರ್ವಭಾವಿ ತಯಾರಿಗಾಗಿ ಏ. 27 ರಿಂದ 29ರವರೆಗೆ ಕಾವೇರಿ ಕೊಳ್ಳದಲ್ಲಿ ಪರಿಸ್ಥಿತಿ ಅಧ್ಯಯನ ಮಾಡಲು ಕಾವೇರಿ ನದಿ ರಕ್ಷಣಾ ಸಮಿತಿ ಪ್ರವಾಸ ಕೈಗೊಳ್ಳಲಿದೆ ಎಂದು ಸಮಿತಿ ಅಧ್ಯಕ್ಷ ಎಚ್.ಕೆ.ರಾಮು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಎನ್. ಗೋಪಾಲಗೌಡರ ನೇತೃತ್ವದಲ್ಲಿ ಈ ಸಮಿತಿ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ. ಈ ವೇಳೆ ಕಾವೇರಿ ಕೊಳ್ಳದ ರೈತರು, ಕಾರ್ಮಿಕರು, ರೈತ ಸಂಘಟನೆಗಳವರೊಡಗೂಡಿ ಜಲಾಶಯಗಳ ವೀಕ್ಷಣೆ, ರೈತರ ಜಮೀನಿನ ವೀಕ್ಷಣೆ ಮತ್ತು ಸಭೆ ನಡೆಸಿ ಮಾಹಿತಿ ಸಂಗ್ರಹಿಸಲಾಗುವುದು. ಇವುಗಳ ಛಾಯಾಚಿತ್ರ ಮತ್ತು ವಿಡಿಯೋ ಸಂಗ್ರಹಿಸಿ ರಿಟ್ ವೇಳೆ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದೆಂದರು.

ಏ. 27 ರಂದು ಮಧ್ಯಾಹ್ನ 12.30ಕ್ಕೆ ಬೆಂಗಳೂರಿನಿಂದ ಹೊರಟು ದುಬಾರೆ, ಪ್ರಕೃತಿಧಾಮ, ಕುಶಾಲನಗರ ಮಾರ್ಗವಾಗಿ ವೀಕ್ಷಿಸಿ, ಸಂಜೆ 6ಕ್ಕೆ ಮಡಿಕೇರಿ ತಲುಪಲಾಗುವುದು. ಏ. 28 ರಂದು ಬೆಳಗ್ಗೆ ಬೆಳಗ್ಗೆ 8ಕ್ಕೆ ತಲಕಾವೇರಿಯಲ್ಲಿ ಪೂಜೆ ಮಾಡಿ ಕುಶಾಲನಗರ ಅಥವ ಹಾರಂಗಿಯಲ್ಲಿ ಸಾರ್ವಜನಿಕ ಸಭೆ ನಡೆಸಿ, ಸಂಜೆ 4ಕ್ಕೆ ಗುರುರು ಹೇಮಾವತಿ ಡ್ಯಾಂ ವೀಕ್ಷಣೆ, ರೈತ ಮುಖಂಡರೊಡನೆ ಸಭೆ, ಕೆ.ಆರ್.ವೀಕ್ಷಣೆ, ಜಲದರ್ಶಿನಿ ಅತಿಥಿ ಗೃಹದಲ್ಲಿ ಸಭೆ ನಡೆಸಲಾಗುವುದು. ಏ. 29 ರಂದು ಬೆಳಗ್ಗೆ 9.30ಕ್ಕೆ ಕಬಿನಿ ಅಣೆಕಟ್ಟು ವೀಕ್ಷಣೆ, ಅಲ್ಲಿನ ರೈತ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಕೂಲಿ ಕಾರ್ಮಿಕರೊಡನೆ ಸಭೆ ನಡೆಸಿ, ನಂಜನಗೂಡು, ಟಿ. ನರಸೀಪುರ, ಶಿಂಷಾ ನೋಡಿಕೊಂಡು ಮೇಕೆ ದಾಟುವಿಗೆ ಪ್ರಯಾಣಿಸಿ ಸಂಜೆ ಬೆಂಗಳೂರಿಗೆ ವಾಪಸಾಗಲಾಗುವುದು. ಕಾವೇರಿ ನೀರು ಕುರಿತಂತೆ ರಾಜ್ಯಕ್ಕೆ ಸದಾ ಅನ್ಯಾಯ ಆಗುತ್ತಲೇ ಇದೆ. ಹೀಗಾಗಿ ರಾಜ್ಯದ ಹಿತ ರಕ್ಷಿಸಲು ಈ ಅಧ್ಯಯನ ಪ್ರವಾಸ ನಡೆಸಿ ನ್ಯಾಯಾಲಯಕ್ಕೆ ಸೂಕ್ತ ದಾಖಲಾತಿ ಸಲ್ಲಿಸಿ ವಾದಿಸಲಾಗುವುದೆಂದರು. ಎಂ. ಚಂದ್ರಶೇಖರ್, ಎಚ್.ಎಲ್.ಯಮುನಾ, ಕೆ.ಸಿ. ಮಾದೇಶ್, ಗಂಗಾಧರಗೌಡ, ಬ್ರಿಜೇಶ್ ಕಾರಿಯಪ್ಪ, ಪ್ರಕಾಶ್, ಕೆ.ವಿ.ಮಲ್ಲೇಶ್ ಇನ್ನಿತರರು ಇದ್ದರು.

## ಸಮುದಾಯ ಭವನ ಸಾಂಸ್ಕೃತಿಕ ಕೇಂದ್ರಗಳಾಗಲಿ

**ಡಾ.ಯತೀಂದ್ರ ಸಿದ್ದರಾಮಯ್ಯ ಆಶಯ**



ಮೈಸೂರು: ಸಮುದಾಯ ಭವನಗಳು ಗ್ರಾಮೀಣ ಜನರ ಸಾಂಸ್ಕೃತಿಕ ಕೇಂದ್ರಗಳಾಗುವುದರ ಜೊತೆಗೆ ಎಲ್ಲಾ ತಳ ಸಮುದಾಯದ ಜನರು ಸಭೆ, ಸಮಾರಂಭ, ನಿಶ್ಚಿತಾರ್ಥ, ಮದುವೆಗಳನ್ನು ಮಾಡಲು ಅನುಕೂಲವಾಗಿವೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವರುಣಾ ಕ್ಷೇತ್ರದ ನಗರ್ಲೆ ಗ್ರಾಮದಲ್ಲಿ 80 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ವಾಲ್ಮೀಕಿ ಸಮುದಾಯ ಭವನದ ಉದ್ಘಾಟನೆ ಹಾಗೂ 40 ಲಕ್ಷ ವೆಚ್ಚದ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಗುದ್ದಲಿಪೂಜೆ ಹಾಗೂ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯರವರು ವರುಣಾ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿಯೂ ಸಮುದಾಯ ಭವನಗಳನ್ನು ನಿರ್ಮಾಣ ಮಾಡಿ ಬಡಜನರು ಸಣ್ಣಪುಟ್ಟ ಸಮಾರಂಭಗಳನ್ನು ಮಾಡಿಕೊಂಡು ಹಣ ಉಳಿತಾಯ ಮಾಡಿಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ. ಇದರ ಸದುಪಯೋಗವನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕು. ಅದೇ ರೀತಿ ಪ್ರತಿ ಗ್ರಾಮಗಳಲ್ಲಿಯೂ ರಾಮಮಂದಿರ, ದೇವಸ್ಥಾನಗಳನ್ನು ನಿರ್ಮಿಸಿ ಜನರು ನೆಮ್ಮದಿಯಿಂದ ಪೂಜೆ, ಧ್ಯಾನ ಮಾಡಿಕೊಂಡಿರಲು ಅನುಕೂಲವಾಗಲಿದೆ ಎಂದರು. ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ನಾರಾಯಣನಾಯ್ಕ, ನರಸಿಂಹಮೂರ್ತಿ, ಅಲ್ತಾಫ್‌ಪಾಷಾ, ಆಪ್ತ ಸಹಾಯಕ ಪ್ರದೀಪ್‌ಕುಮಾರ್, ಮಹೇಶ್ ಹಾಜರಿದ್ದರು.

## ಏ.25ಕ್ಕೆ ಎಸ್ ಜೆಸಿಇ ನಲ್ಲಿ ಉದ್ಯೋಗ ಮೇಳ

ಮೈಸೂರು: ಸಿಐಐ ಯಂಗ್ ಇಂಡಿಯನ್ಸ್ ವಿಭಾಗದ ವತಿಯಿಂದ



ಏ.25ರಂದು ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಪ್ರಿಯಾಂಕಾ ಶ್ರೀಧರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ವೇಳೆ ಸುಮಾರು 3500 ಉದ್ಯೋಗಾವಕಾಶಗಳು ಇದ್ದು, ವಿಶೇಷ ಚೇತನರು, ಮಹಿಳೆಯರಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಎಂಜಿನಿಯರಿಂಗ್, ಕಲೆ, ಆತಿಥ್ಯ, ಅರೆ ವೈದ್ಯಕೀಯ, ಕೈಗಾರಿಕೆ ಮೊದಲಾದ ಕ್ಷೇತ್ರಗಳಲ್ಲಿ ಇರುವ ವಿಪುಲ ಅವಕಾಶವನ್ನು ಇಲ್ಲಿ ಪಾಲ್ಗೊಳ್ಳುವ ಮೂಲಕ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. 50 ಕ್ಕೂ ಹೆಚ್ಚು ಪ್ರಮುಖ ಕಂಪನಿಗಳು ಇಲ್ಲಿ ಪಾಲ್ಗೊಂಡು ತಮಗೆ ಅಗತ್ಯವಾದ ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಳ್ಳಲಿವೆ. ಮಾಹಿತಿಗೆ ದೂ. 95356 39537 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುಜಯ್, ಚರಣ್ ಇದ್ದರು.

## ಅಟ್ಟಾಡಿಸಿದ ಆನೆ ಹಿಂಡು: ವನರಕ್ಷಕ ನೀರು ಪಾಲು



ಎಚ್.ಡಿ.ಕೋಟೆ: ಕಾಡಾನೆಗಳ ಹಿಂಡಿನಿಂದ ತಪ್ಪಿಸಿಕೊಳ್ಳಲು ಹೋದ ಕರ್ತವ್ಯ ನಿರತ ಅರಣ್ಯ ರಕ್ಷಕ ಕಬಿನಿ ಹಿನ್ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ನಡೆದಿದೆ.

ಅರಣ್ಯ ರಕ್ಷಕ ಸುಪ್ರೀತ್(36) ನೀರು ಪಾಲಾಗಿ ಸಾವನಪ್ಪಿರುವ ನೌಕರ. ತಾಲೂಕಿನ ಅಂಕನಾಥಪುರ ಗ್ರಾಮದ ಸುಪ್ರೀತ್ ಹತ್ತು ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಗಾರ್ಡ್ ಆಗಿ ಸೇವೆ ಸಲ್ಲಿಸುತ್ತಿದ್ದರು. ನಾಗರಹೊಳೆ ಅರಣ್ಯ ವ್ಯಾಪ್ತಿಯ ಅಂತರಸಂತೆ ವಲಯದ, ಕಾರಾಪುರ ಸಮೀಪದ ಉದ್ಬೂರು ಕ್ಯಾಂಪ್ ನಲ್ಲಿ ಕಳ್ಳಬೇಟೆ ತಡೆಯಲ್ಲಿ ಮಂಗಳವಾರ ರಾತ್ರಿ ಕರ್ತವ್ಯಕ್ಕೆ ನಿಯೋಜನೆ ಗೊಂಡಿದ್ದರು.

ಬುಧವಾರ ಮುಂಜಾನೆ ಕಾಡಾನೆಗಳ ಹಿಂಡು ಕರ್ತವ್ಯ ನಿರತರನ್ನು ಅಟ್ಟಾಡಿಸಿವೆ. ಸಹದ್ಯೋಗಿ ವನರಕ್ಷಕರಾದ ಅಯ್ಯಪ್ಪ ಹಾಗೂ ಅಮನ್ ದಿಕ್ಕಾಪಾಲಾಗಿ ಓಡಿದರೆ, ಹತ್ತಿರದಲ್ಲಿದ್ದ ಕಬಿನಿ ಹಿನ್ನೀರಿಗೆ ಸುಪ್ರೀತ್ ಹಾರಿದ್ದು, ಈಜು ಬಾರದ ಕಾರಣ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಸಹದ್ಯೋಗಿಗಳ ಚೀರಾಟದ ನಂತರ ವಿಷಯ ಬೆಳಕಿಗೆ ಬಂದಿದೆ.

ಘಟನಾಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕದಳದ ಸಹಾಯಕ ಠಾಣಾಧಿಕಾರಿ ಎಂ.ಜಿ ಸೋಮಣ್ಣ, ಸಿಬ್ಬಂದಿಗಳಾದ ಪುಂಡಲೀಕ ಲಮಾಣಿ, ಮುನಿಸಿದ್ದ ನಾಯಕ, ರಾಹುಲ್ ಪಾಟೀಲ್, ಹೇಮಂತ ಕುಮಾರ್ ಹಾಗೂ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಪೊಲೀಸ್ ಇಲಾಖೆ ಸಿಬ್ಬಂದಿಗಳು, ಕಾರಾಪುರ, ಕಬಿನಿ ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ನ ಸಿಬ್ಬಂದಿಗಳು, ಇಟ್ನ ಗ್ರಾಮದ ನುರಿತ ಈಜುಗಾರರು, ಮಧ್ಯಾಹ್ನ ಕೇರಳದಿಂದ ಆಗಮಿಸಿದ್ದ ಮುಳುಗು ತಜ್ಞರು ಮೃತದೇಹಕ್ಕಾಗಿ ತೀವ್ರ ಹುಡುಕಾಟ ನಡೆಸಿದರು. ಸ.7ರ ನಂತರವೂ ಮೃತರ ಸುಳಿವು ಸಿಕ್ಕಿರಲಿಲ್ಲ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಾದಕ ವ್ಯಸನದ ಬಗ್ಗೆ ಅರಿವು ಮೂಡಿಸಿ




ಮೈಸೂರು: ಮಾದಕ ವ್ಯಸನದ ದುಷ್ಪರಿಣಾಮಗಳ ಬಗ್ಗೆ ಯುವ ಜನತೆಯಲ್ಲಿ ಅರಿವು ಮೂಡಿಸಿ ಎಂದು ಉಪ ಪೊಲೀಸ್ ಅಧೀಕ್ಷಕ ಸಿ.ಮಲ್ಲಿಕ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ನಾರ್ಕೋ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜನರಿಗೆ ಡ್ರಗ್ಸ್ ಬಳಕೆ ಅಪರಾದ ಎಂಬುದರ ಬಗ್ಗೆ ಅರಿವು ಮೂಡಿಸಬೇಕು. ಯಾರು ಮತ್ತಿನಲ್ಲಿ ಇರುವ ಬಗ್ಗೆ ಅನುಮಾನ ಬಂದಲ್ಲಿ ಅವರನ್ನು ಪರೀಕ್ಷೆಗೆ ಒಳಪಡಿಸಬೇಕು ಎಂದು ಸೂಚನೆ ನೀಡಿದರು. ಅಬಕಾರಿ ಇಲಾಖೆಯವರು ನಿಯಮಿತವಾಗಿ ರೈಡ್‌ಗಳನ್ನು ಮಾಡಬೇಕು. ಕೃಷಿ ಜಮೀನಿನಲ್ಲಿ, ಮನೆಯ ಹಿತ್ತಲಿನ ಪರದೇಶಗಳಲ್ಲಿ ಗಾಂಜಾ ಗಿಡಗಳನ್ನು ಬೆಳೆಯುವ ಸಂಭವ ಇರುತ್ತದೆ. ನಿಯಮಿತವಾಗಿ ರೈಡ್ ಮಾಡುವ ಮೂಲಕ ಬೆಳೆಯದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಬೀಡಿ ಸಿಗರೇಟು ಸೇವನೆ ನಿಷಿದ್ದ, ತಾವು ಸೇವನೆ ಮಾಡುವುದಲ್ಲದೆ ಪಕ್ಕದಲ್ಲಿ ಇರುವವರಿಗೂ ಬೀಡಿ ಸಿಗರೇಟು ಹೊಗೆ ಸೇವನೆ ಮಾಡಿ ಆರೋಗ್ಯ ಹಾಳಾಗುತ್ತದೆ. ಆದ್ದರಿಂದ ಸಾರ್ವಜನಿಕ ಸ್ಥಳದಲ್ಲಿ ಬೀಡಿ ಸಿಗರೇಟು ಸೇವನೆ ಕಂಡು ಬಂದರೆ ದಂಡ ವಿಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.ಮದ್ಯವ್ಯಸನಿಗಳನ್ನು ಅದರಿಂದ ಹೊರತರಲು ರಿ ಹ್ಯಾಬಿಟೇಷನ್ ಸೆಂಟರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಎಷ್ಟೋ ವ್ಯಸನಿಗಳು ಈ ಸೆಂಟರ್ ಗೆ ಸೇರಿ ವ್ಯಸನವನ್ನು ತ್ಯಜಿಸಿದ್ದಾರೆ.

ಕಳೆದ ಮಾಹೆಯಲ್ಲಿ 71 ಪ್ರಕರಣಗಳಲ್ಲಿ 80 ಜನರ ಮೇಲೆ ಎನ್ ಡಿ ಪಿ ಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಉಪ ಪೊಲೀಸ್ ಆಯುಕ್ತ ಸುಂದರ್ ರಾಜ್ ಸೇರಿ ಅನೇಕರು ಉಪಸ್ಥಿತರಿದ್ದರು.

# ಹೆಣ್ಣು ಮಕ್ಕಳು ವೈಚಾರಿಕ ಶಿಕ್ಷಣ ಪಡೆಯಿರಿ

### ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿಕೆ | ಮಹಾರಾಣಿ ಕಾಲೇಜು ಸಾಂಸ್ಕೃತಿಕ ವೇದಿಕೆ

ಮೈಸೂರು: ಹೆಣ್ಣು ಮಕ್ಕಳು ವೈಜ್ಞಾನಿಕ ಮತ್ತು ವೈಚಾರಿಕ ಶಿಕ್ಷಣವನ್ನು ಪಡೆದು ದೇಶಕ್ಕೆ ಒಳ್ಳೆಯ ಪ್ರಜೆಗಳಾಗಬೇಕು ಎಂದು ಸಮಾಜ ಕಲ್ಯಾಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹಾದೇವಪ್ಪ ಹೇಳಿದರು.

ನಗರದ ಮಹಾರಾಣಿ ಮಹಿಳಾ ಮತ್ತು ನಿರ್ವಹಣಾ ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ ಸಾಂಸ್ಕೃತಿಕ ವೇದಿಕೆ 2025–26 ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂತಹ ಮಹಾನ್ ಚೇತನಗಳ ದೂರದೃಷ್ಟಿಯೇ ಮೂಲ ಕಾರಣ. ಅವರ ಕೊಡುಗೆಯಿಂದಾಗಿ ಇಂದು ಮೈಸೂರು ಮಾದರಿ ನಗರವಾಗಿ ಬೆಳೆದಿದೆ. ಇಂದು ನಾವು ಸ್ವತಂತ್ರವಾಗಿ ವ್ಯವಹರಿಸಲು ಮತ್ತು ಮಾತನಾಡಲು ಶಕ್ತಿ ನೀಡಿದವರು ಡಾ. ಬಿ. ಆರ್. ಅಂಬೇಡ್ಕರ್. ಅವರು ನಮಗೆ ನೀಡಿದ ಬೃಹತ್ ಸಂವಿಧಾನವೇ ನಮ್ಮೆಲ್ಲರ ಶಕ್ತಿ. ಇಂದು ಸರ್ವೋಚ್ಚ ನ್ಯಾಯಾಲಯದಿಂದ ಹಿಡಿದು ಸಾಮಾನ್ಯ ಮಠಗಳ ವರೆಗೆ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಂವಿಧಾನದ ಪ್ರಸ್ತಾವನೆಯನ್ನು ಓದುವುದು ಕಡ್ಡಾಯವಾಗಿದೆ. ಇದು ನಮ್ಮ ಸಂವಿಧಾನಕ್ಕಿರುವ ಅಪ್ರತಿಮ ಮೌಲ್ಯವನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪರವಾಗಿ ಮಾತ್ರವಲ್ಲದೆ, ಮಹಿಳೆಯರ ಮೇಲಿನ ಶೋಷಣೆಯ ವಿರುದ್ಧವೂ ನಿರಂತರವಾಗಿ ಹೋರಾಡಿದವರು. ಸತಿ ಪದ್ಧತಿಯಂತಹ ಕ್ರೂರ ಸಂಪ್ರದಾಯಗಳನ್ನು ವಿರೋಧಿಸಿದರ, ಮನುಸ್ಮೃತಿಯಲ್ಲಿದ್ದ ಅಸಮಾನತೆಯ ವ್ಯವಸ್ಥೆಗಳನ್ನು ಖಂಡಿಸಿದರು, ಮಹಿಳಾ ಶಿಕ್ಷಣ ಮತ್ತು ಹಕ್ಕುಗಳಿಗಾಗಿ ಪ್ರಬಲವಾಗಿ ಧ್ವನಿ ಎತ್ತಿದರು. ಇಂದು ಬಹುತೇಕ ಪರೀಕ್ಷೆಗಳ ಫಲಿತಾಂಶದಲ್ಲಿ ಹೆಣ್ಣುಮಕ್ಕಳು ಮೇಲುಗೈ ಸಾಧಿಸುತ್ತಿರುವುದಕ್ಕೆ ಮತ್ತು ಸಬಲೆಯರಾಗಿರುವುದಕ್ಕೆ ಅಂಬೇಡ್ಕರ್ ಅವರು ಅಂದು ನಡೆಸಿದ




ಹೋರಾಟಗಳೇ ಕಾರಣ ಎಂದು ತಿಳಿಸಿದರು.

ಶಾಸಕ ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಮಹಾರಾಣಿ ಕಾಲೇಜಿನಂತಹ ಬೃಹತ್ ಶಿಕ್ಷಣ ಸಂಸ್ಥೆಯಲ್ಲಿ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಈ ಸಂಸ್ಥೆಯು ನಮಗೆ ದೊರೆಯಲು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯೇ ಮೂಲ ಕಾರಣ," ಎಂದು ಸ್ಮರಿಸಿದರು.

"ನಮ್ಮ ಸರ್ಕಾರವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಗ್ರಾಮೀಣ ಭಾಗದಿಂದ ಬರುವ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣದ ಜೊತೆಗೆ, ಸುಮಾರು 2,900 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಮಹಿಳೆಯರು ಸಬಲರಾಗಬೇಕು ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಕಂಡ ಕನಸನ್ನು ಇಂದು ನಮ್ಮ ಸರ್ಕಾರವು ನನಸು ಮಾಡುತ್ತಿದೆ. ಇದರ ಜೊತೆಗೆ ಮೈಸೂರು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವರ ಕೊಡುಗೆ ಅಪಾರವಾಗಿದೆ," ಎಂದು ತಿಳಿಸಿದರು.

ಜಯದೇವ್ ಆಸ್ಪತ್ರೆಯ ಪ್ರಾಧ್ಯಾಪಕ ಹಾಗೂ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಮಾತನಾಡಿ ಈ ರೋಮಾಂಚಕ ಸಂಸ್ಥೆಯಾದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ಕಲಾ ಕಾಲೇಜಿನ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲು ನನಗೆ ಅಪಾರ ಸಂತೋಷವಾಗುತ್ತಿದೆ. ಇಂದಿನ ಕಾರ್ಯಕ್ರಮವು ಕೇವಲ ಚಟುವಟಿಕೆಗಳ ಸಮಾರೋಪವಲ್ಲ, ಬದಲಾಗಿ ಸಮರ್ಪಣೆ, ತಂಡದ ಕೆಲಸ, ಶಿಸ್ತು ಮತ್ತು ಯುವಶಕ್ತಿಯ ಚೈತನ್ಯದ ಆಚರಣೆಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಭಾಗದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಪ್ರೊ.ಡಿ.ಎಸ್. ಪ್ರತಿಭಾ, ರಂಗಾಯಣದ ಮಾಜಿ ನಿರ್ದೇಶಕ ಎಚ್. ಜನಾರ್ಧನ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಪಿ.ಶಿವಣ್ಣ, ಐಕ್ಯೂಎಸಿ ನ ಸಂಚಾಲಕ ಡಾ.ಎಸ್. ಮುತ್ತುರಾಜ್ ಉಪಸ್ಥಿತರಿದ್ದರು.



## ಬಿಜೆಪಿ ಪಕ್ಷದಿಂದ ಪುರಸಭಾ ಮಾಜಿ ಅಧ್ಯಕ್ಷ ಪಿ.ಗಿರೀಶ್ ಉಚ್ಚಾಟನೆ

ಗುಂಡ್ಲುಪೇಟೆ; ಭಾರತೀಯ ಜನತಾ ಪಾರ್ಟಿ ವತಿಯಿಂದ



ಗುಂಡ್ಲುಪೇಟೆ ಪುರಸಭಾ ಮಾಜಿ ಅಧ್ಯಕ್ಷರಾದ ಪಿ.ಗಿರೀಶ್ ರವರು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಪಕ್ಷಕ್ಕೆ ಮತ್ತಷ್ಟು ಹಾನಿ ತಪ್ಪಿಸಲು ಇವರನ್ನು ಶಿಸ್ತು ಸಮಿತಿಯ ಸೂಚನೆಯ ಮೇರೆಗೆ ಪಕ್ಷದಿಂದ 6 ವರ್ಷಗಳ ಕಾಲ ತಕ್ಷಣದಿಂದಲೇ ಜಾರಿಗೆ ಬರುವಂತೆ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ನಿಲುವಿಗೆ ಸಂಸದರ ಖಂಡನೆ

ರಾಮನಗರ: ಎನ್.ಡಿ.ಎ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದ ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಹಾಗೂ ಇಂಡಿ ಒಕ್ಕೂಟ ನಿರ್ಲಕ್ಷ ಮತ್ತು ದ್ವಂದ್ವ ನಿಲುವ ತೋರಿಸಿವೆ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಖಂಡಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಮಹಿಳಾ ಮೀಸಲಾತಿ ಮಸೂದೆಯನ್ನು ವಿಫಲಗೊಳಿಸಿರುವ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ನಾರಿ ಶಕ್ತಿಗೆ ಮಾಡಿದ ಮಹಾ ಅನ್ಯಾಯ ಮತ್ತು ಅವಮಾನ ಎಂದು ಸಂಸದರು ಜರಿದರು.

ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು ಕೇವಲ ಚುನಾವಣಾ ಘೋಷಣೆಗಳಲ್ಲದೇ, ಅದು ಸಾಮಾಜಿಕ ನ್ಯಾಯದ ಮೂಲಭೂತ ಅಂಶವಾಗಿರಬೇಕು. ಆದರೆ, ಕಾಂಗ್ರೆಸ್ ಪಕ್ಷವು ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಮಹಿಳಾ ಮೀಸಲಾತಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗಿದೆ ಎಂಬುದನ್ನು ಅವರು ಉಲ್ಲೇಖಿಸಿದರು. ಇಂತಹ ದ್ವಂದ್ವ ನೀತಿಗಳು ಮಹಿಳೆಯರ ವಿಶ್ವಾಸಕ್ಕೆ ಧಕ್ಕೆ ತರುವುದಲ್ಲದೆ,



ದೇಶದ ಪ್ರಗತಿಗೆ ಅಡ್ಡಿಯಾಗುತ್ತವೆ ಎಂದರು.

**ಮಹಿಳೆಯರಿಗೆ ಹಕ್ಕು ಮತ್ತು ಅವಕಾಶ ಒದಗಿಸುವುದು ಬಿಜೆಪಿ ಆದ್ಯತೆ**

ಮಹಿಳಾ ಸಬಲೀಕರಣದ ವಿಚಾರದಲ್ಲಿ ಪ್ರಧಾನಿ ನೇತೃತ್ವದ ಸರ್ಕಾರ ಕೈಗೊಂಡಿರುವ ದಿಟ್ಟ ನಿರ್ಧಾರಗಳು ಹಾಗೂ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಬದ್ಧತೆ ದೇಶದ ಮಹಿಳೆಯರಿಗೆ ಹೊಸ ಆಶಾಭಾವನೆ ಮೂಡಿಸಿದೆ ಎಂದು ಅವರು ಶ್ಲಾಘಿಸಿದರು. ಮಹಿಳೆಯರ ಗೌರವ ಮತ್ತು ಹಕ್ಕುಗಳ ರಕ್ಷಣೆಯಲ್ಲಿ ಯಾವುದೇ ರಾಜಕೀಯ ಲಾಭ–ನಷ್ಟಗಳನ್ನೂ ಪರಿಗಣಿಸದೇ, ನಾರಿ ಶಕ್ತಿಯ ಸಬಲೀಕರಣವೇ ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವೆಂದು ಮಾನ್ಯ ಸಂಸದರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ಒಬಿಸಿ ಮೋರ್ಚಾದ ಉಪಾಧ್ಯಕ್ಷರು ಹಾಗೂ ರಾಜ್ಯ ಬಿಜೆಪಿ ವಕ್ತಾರರಾದ ಅಶ್ವಿನಿ ಶಂಕರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದ್ ಸ್ವಾಮಿ, ರಾಮನಗರ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಬಿಜೆಪಿಯ ಜಿ.ವಿ.ಪದ್ಮನಾಭ, ಜೆಡಿಎಸ್‌ನ ಸುಗ್ಗನಹಳ್ಳಿ ರಾಮಕೃಷ್ಣಯ್ಯ, ಜಯಕುಮಾರ್ ಹಾಗೂ ಹಲವು ಮಹಿಳಾ ಮುಖಂಡರು ಉಪಸ್ಥಿತರಿದ್ದರು.

**ಅಕ್ರಮ ಸಿ.ವಿ.ರಾಮನ್ ಲೇಔಟ್ ಅನ್ನು ವಜಾ ಮಾಡಲು ಒತ್ತಾಯ**

# ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆ, ನಗರಸಭೆ ವಿರುದ್ದ ಕ್ರಮಕ್ಕೆ ಆಗ್ರಹ

ಚಾಮರಾಜನಗರ: ನಗರದ ಲೇಔಟ್ ಗಳ ನಿರ್ಮಾಣದಲ್ಲಿ ಸರ್ಕಾರದ ನಿಯಮ ಉಲ್ಲಂಘಿಸಿರುವ ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆ, ನಗರಸಭೆಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳನ್ನು ಯುವ ಸೇನೆ ಕರ್ನಾಟಕ ಸೇವಾ ಸಂಘದ ಅಧ್ಯಕ್ಷ ನಮ್ಮನೆ ಪ್ರಶಾಂತ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನಗರದ ಸಿ.ವಿ.ರಾಮನ್ ಲೇಔಟ್ ನಿರ್ಮಾಣದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆ, ನಗರಸಭೆಯು ಸಾಕಷ್ಟು ಸರ್ಕಾರಿ ನಿಮಯವನ್ನು ಗಾಳಿ ತೂರಿದ್ದು ಅಕ್ರಮಗಳಿಗೆ ದಾರಿ ಮಾಡಿಕೊಟ್ಟಿವೆ .ಲೇಔಟ್ ನಿರ್ಮಾಣ ಮಾಡಬೇಕಾದರೆ ಸಾಕಷ್ಟು ಷರತ್ತುಗಳಿರುತ್ತವೆ. ಮುಖ್ಯವಾಗಿ ಭೂ ಪರಿವರ್ತನೆ, ವಿವಿಧ ಕಾಮಗಾರಿಗಳ ಅಂದಾಜು ಪಟ್ಟಿಗಳು ಸಂಬಂಧಪಟ್ಟ ಇಲಾಖೆಯಿಂದ ನೀಡಬೇಕು. ಮತ್ತು ಇದಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮತ್ತು ಜಮೀನಿನ ವಿಚಾರದಲ್ಲಿ ಹಾಗೂ ರಸ್ತೆಯ ವಿಚಾರಗಳಲ್ಲಿ ಯಾವ ತಂಟೆ–ತಕರಾರು ವ್ಯಾಜ್ಯಗಳು ಇಲ್ಲದರ ಬಗ್ಗೆ ಪ್ರಮಾಣ ಪತ್ರ ನೀಡಬೇಕು ಮತ್ತು ಭೂ ದಾಖಲೆಗಳ ಸಹಾಯ ನಿರ್ದೇಶಕರು ದೃಢೀಕರಿಸಿ ಸಲ್ಲಿಸಲಾದ ಸರ್ವೇ ನಕ್ಷೆ ಇತ್ಯಾದಿಗಳು ಪ್ರಾಧಿಕಾರದವರು ನಕ್ಷೆಯಲ್ಲಿ ತೋರಿಸಿರುವ ಎಲ್ಲೆಯ ಬಾಂದೂ



ಕಲ್ಲುಗಳು ಸರಿಯಾಗಿ ಇದಿಯೇ ಎಂಬುದನ್ನು ಸ್ಥಳದಲ್ಲಿ ಪರಿಶೀಲಿಸಿದ ನಂತರ ಸಿಮಾ ರವರು ಆಯುಕ್ತರು ನಗರಾಭಿವೃದ್ಧಿ ಇಲಾಖೆ ಆಯುಕ್ತ ಸೀಮಾ,ಮತ್ತು ನಗರ ಯೋಜಕ ಸದಸ್ಯರಾದ ಎಂ.ಹೆಚ್.ರಿತೇಶ್ ರವರು ವಿನ್ಯಾಸ ಕರಡು ನಕ್ಷೆಯನ್ನು ಮಾಡಿಕೊಡಬೇಕಾಗಿರುತ್ತದೆ.ನಾವು ಪ್ರಶ್ನಿಸಿರುವ ಸಿ.ವಿ.ರಾಮನ್ ಲೇಔಟ್‌ನ ದಕ್ಷಿಣ ಭಾಗಕ್ಕೆ ಸಂಪರ್ಕ ರಸ್ತೆಯು ಈ ಲೇಔಟ್ ಮಾಲೀಕರಾದ ಆರ್.ವೆಂಕಣ್ಣ ಮತ್ತು ಮಕ್ಕಳಿಗೆ ಸೇರಿದ ಸರ್ವೆ ನಂ.443/2 ರಲ್ಲಿ 0.2ಎ–33ಗುಂ ಪೈಕಿ 260*120 ಜಾಗಕ್ಕೆ 2007 ಜೂ.16 ರಂದು ಲೇಔಟ್ ಗಾಗಿ ಅನುಮೋದನೆ ಪಡೆದುಕೊಂಡು ಈ ಹಿಂದೆಯೇ ಮಾರಾಟ ಮಾಡಿರುತ್ತಾರೆ. ಖರೀದಿ ಮಾಡಿದ ಸಾರ್ವಜನಿಕರು ಕಳೆದ 12 ,13 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಿರುತ್ತಾರೆ.

ಇವಾಗ ಇದೇ ಸಿ.ಆರ್.ವೆಂಕಣ್ಣ ರವರು ಅವರಿಗೆ ಸೇರಿದ ಸರ್ವೆ ನಂ.443/1 ರಲ್ಲಿ 02ಎ–443/2 ರಲ್ಲಿ 25.12 ಗುಂಟೆ ವಿಸ್ತೀರ್ಣ ಜಮೀನನ್ನು ಹೊಸದಾಗಿ ಲೇಔಟ್ ನಿರ್ಮಾಣ ಮಾಡಿರುವ ಸಿ.ವಿ.ರಾಮನ್ ಬಡಾವಣೆಗೆ ಅನುಮೋದನೆಯ ಕರಡು ನಕ್ಷೆಯಲ್ಲಿ ಅನುಮೋದನೆಗೊಂಡು ಬಿಟ್ಟಿರುವ 9ಮೀ ರಸ್ತೆಯನ್ನು ಈಗಿನ ಲೇಔಟ್ ಗೆ ಸಂಪರ್ಕ ರಸ್ತೆಯೆಂದು ಕರಡು ನಕ್ಷೆಯಲ್ಲಿ ತೋರಿಸಿರುತ್ತಾರೆ. ಲೇಔಟ್‌ನ ಕಾಮಗಾರಿ ವೇಳೆ 2 ಮೀ ಗಳಷ್ಟು ರಸ್ತೆಯನ್ನು ಒತ್ತುವರಿ ಮಾಡಿಕೊಂಡ ಕಾರಣ 9ಮೀ ರಸ್ತೆಯು ಇರುವುದಿಲ್ಲ. ಇದನ್ನು ಪ್ರಶ್ನಿಸಿ ನಾನು ಅಲ್ಲಿ ನಡೆದಿರುವ ಕಳಪೆ ಕಾಮಗಾರಿ, ಉದ್ಯಾನವನ ಅಭಿವೃದ್ಧಿಪಡಿಸದೇ ಇರುವುದು ಇನ್ನೂ ಹಲವಾರು ತಪ್ಪುಗಳನ್ನು ಒಳಗೊಂಡಂತೆ ಪ್ರಾಧಿಕಾರಕ್ಕೆ ದೂರು ಅರ್ಜಿಯ ಮುಖಾಂತರ ತಕರಾರು ಸಲ್ಲಿಸಿ ಅನುಮೋದನೆ ನೀಡಬಾರದೆಂದು ತಿಳಿಸಿರುತ್ತೇನೆ.

ಪ್ರಾಧಿಕಾರದ ಆಯುಕ್ತರು ಸ್ಥಳ ಪರಿಶೀಲಿಸಿ ರಸ್ತೆ ಕಡಿಮೆ ಇರುವುದರ ಬಗ್ಗೆ 2025 ಸೆ.1 ರಂದು ನಮಗೆ ಹಿಂಬರಹ ನೀಡಿರುತ್ತಾರೆ. ಇದೇ ಪ್ರತಿಯನ್ನು ನಗರಸಭೆಗೆ ತಿಳಿಸುತ್ತಾ ಖಾತೆಗಳನ್ನು ತಡೆಯಲು ಸೂಚಿಸಿರುತ್ತಾರೆ. ಈ ವಿಚಾರವನ್ನು ಪ್ರಶ್ನಿಸಿ ಸಿ.ಆರ್. ವೆಂಕಣ್ಣ ರವರು ಸಲ್ಲಿಸಿದ ಅರ್ಜಿಯ ಮೇರೆಗೆ ಒಂದು ಸರ್ವೆ ಮಾಡಿಸುವ ನೆಪ ಮಾಡಿ 2025 ಡಿ12 ರಂದು ನನ್ನ ಗಮನಕ್ಕೆ ತಂದಿರುತ್ತಾರೆ. ಆದರೆ ನಾನು ಈ ಸರ್ವೆ ಮಾಡಿಸುವುದು ಈವಾಗ ಬೇಕಿತ್ತಾ ಎಂದು ಪ್ರಶ್ನೆ ಮಾಡಿರುತ್ತೇನೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯಾಧ್ಯಕ್ಷ ಮೋಹನ್,ಉಪಾಧ್ಯಕ್ಷ ನಾಸೀರ್ ಖಾನ್, ಪ್ರಧಾನ ಕಾರ್ಯದರ್ಶಿ ನಾಗರಾಜು ಕಾರ್ಯದರ್ಶಿ ಇನಾಯತ್ ವುಲ್ಲಾ, ಖಜಾಂಚಿ ಶಿವಶಂಕರ ಚೆಟ್ಟು, ಚಾ.ಸಿ.ಸಿದ್ದರಾಜು ಹಾಜರಿದ್ದರು.

# ಶ್ರೀ ಬಾಣೇಶ್ವರ ಸಮುದಾಯ ಭವನ ಉದ್ಘಾಟನೆ



**ಎಚ್.ಡಿ.ಕೋಟೆ:** ತಾಲೂಕಿನ ಮಗ್ಗೆ ಗ್ರಾಮದಲ್ಲಿ ದಿ.ವಿ.ಶ್ರೀನಿವಾಸ್ ಪ್ರಸಾದ್ ಅವರ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅನುದಾನದಲ್ಲಿ ನಿರ್ಮಿಸಲಾಗಿರುವ ಶ್ರೀ ಬಾಣೇಶ್ವರಸ್ವಾಮಿ ಸಮುದಾಯ ಭವನವನ್ನು ಭಾಗ್ಯಲಕ್ಷ್ಮಿ ವಿ.ಶ್ರೀನಿವಾಸ್ ಪ್ರಸಾದ್ ಅವರು ಇತ್ತೀಚೆಗೆ ಉದ್ಘಾಟಿಸಿದರು.

ನಂತರ ಅವರು ಮಾತನಾಡಿ, ನಮ್ಮ ಪತಿ ಶ್ರೀನಿವಾಸ್ ಪ್ರಸಾದ್ ಅವರಿಗೆ ತಮ್ಮ ಕ್ಷೇತ್ರ ವ್ಯಾಪ್ತಿಯ ಎಚ್.ಡಿ.ಕೋಟೆ ತಾಲೂಕಿನ ಬಗ್ಗೆ ವಿಶೇಷ ಕಾಳಜಿ ಇತ್ತು. ಅದರಂತೆ ತಾಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ನೆರವಾಗುತ್ತಿದ್ದರು. ಸಮುದಾಯ ಭವನದ ನಿರ್ಮಾಣಕ್ಕೆ ಅವರು ನೀಡಿದ ಅನುದಾನವನ್ನು ಶ್ರೀ ಬಾಣೇಶ್ವರ ಸ್ವಾಮಿ ದೇವಸ್ಥಾನ ಸಮಿತಿಯವರು ಸದುಪಯೋಗ ಪಡಿಸಿಕೊಂಡು ನಿರ್ಮಿಸಿರುವ ಭವನ ದೇವಸ್ಥಾನದ ಭಕ್ತರ ಉಪಯೋಗಕ್ಕೆ ಬರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಹಾಜರಿದ್ದ ದಿವಂಗತ ವಿ.ಶ್ರೀನಿವಾಸ ಪ್ರಸಾದ್ ಅವರ ಪುತ್ರಿ ಪ್ರತಿಮಾ ಪ್ರಸಾದ್ ಮಾತನಾಡಿ, ನಮ್ಮ ತಂದೆ ಜನರ ನಡುವೆಯೇ ಬೆಳೆದು ಜನ ನಾಯಕರಾದರು. ಅರ್ಪಣಾ ಮನೋಭಾವದ ಸ್ವಾಭಿಮಾನಿ ರಾಜಕಾರಣಿಯಾಗಿ ನಾಡಿನಾದ್ಯಂತ ಗುರುತಿಸಿಕೊಂಡಿದ್ದರು ಎಂದು ಸ್ಮರಿಸಿದರು.

ಇದೇ ಸಂದರ್ಭ ಭರತ್ ರಾಮಸ್ವಾಮಿ, ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ ನಂದಕುಮಾರ್ ಮಾತನಾಡಿದರು.

ದೇವಸ್ಥಾನ ಟ್ರಸ್ಟ್ ಅಧ್ಯಕ್ಷರಾದ ಡಿ.ಸುಂದರ್ ದಾಸ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಎಂ.ಎನ್. ಜಗದೀಶ್, ಪಿಎಲ್ ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ್, ವೈ.ಪಿ. ನಾಗರಾಜ್, ರಾಗಲಕುಪ್ಪೆ ವಿನೋದ್, ಬಾಣೇಶ್ವರ ಸ್ವಾಮಿ ದೇವಸ್ಥಾನದ ಸಮಿತಿ ಕಾರ್ಯದರ್ಶಿ ವಿ.ರಾಜಪ್ಪ, ಎಚ್.ಡಿ.ರತ್ನಯ್ಯ, ನಂದೀಶ್, ಸರಗೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪಿ.ನೇಮಿಚಂದ್ರ, ಬೀರಂಬಳ್ಳಿ ರಾಮಣ್ಣ, ನಂದಕುಮಾರ್, ನವೀನ್ ದಾಸ್, ಎ.ಪಿ.ಕೃಷ್ಣ, ಕೆ.ಸುಬ್ಬೇಗೌಡ, ಎಂ.ಜಯಣ್ಣ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ಜನ ಪಾಲ್ಗೊಂಡಿದ್ದರು. ಗ್ರಾಪಂ ಮಾಜಿ ಅಧ್ಯಕ್ಷ ಕೆ.ಮಹೇಶ್ ಸ್ವಾಗತಿಸಿ, ಎಂ.ಎನ್. ನಟರಾಜ್ ನಿರೂಪಿಸಿದರು.

## ಬಾಣೇಶ್ವರಸ್ವಾಮಿ ಟ್ರಸ್ಟ್ ಗೆ ಎಂ.ಎನ್.ನಟರಾಜ್ ಅಧ್ಯಕ್ಷ



ವೇದಿಕೆ ಕಾರ್ಯಕ್ರಮದ ನಂತರ ನಡೆದ ಶ್ರೀ ಬಾಣೇಶ್ವರ ಸ್ವಾಮಿ ಟ್ರಸ್ಟ್ ನ(ರಿ) ಸರ್ವ ಸದಸ್ಯರ ಸಭೆಯಲ್ಲಿ ಟ್ರಸ್ಟ್ ನ ನೂತನ ಅಧ್ಯಕ್ಷರಾಗಿ ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯದ ವಿಶ್ರಾಂತ ರಾಜ್ಯ ಹಾಗೂ ಪ್ರಾದೇಶಿಕ ನಿರ್ದೇಶಕ ಎಂ.ಎನ್. ನಟರಾಜ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಳಿದಂತೆ ಉಪಾಧ್ಯಕ್ಷರಾಗಿ ರಾಗಲಕುಪ್ಪೆ ವಿನೋದ್, ಅಂತರಸಂತೆ ಸುಬ್ರಹ್ಮಣ್ಯ, ಕಾರ್ಯದರ್ಶಿಯಾಗಿ ಹುಣಸೇಕುಪ್ಪೆ ಸುಬ್ರಹ್ಮಣ್ಯ, ಖಜಾಂಚಿಯಾಗಿ ಮೈಸೂರಿನ ಎಂ.ವಿ. ನಂದಕುಮಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಇದೇ ವೇಳೆ ನೂತನ ಅಧ್ಯಕ್ಷ ಎಂ.ಎನ್.ನಟರಾಜ್ ಮಾತನಾಡಿ, ಕಪಿಲಾ ಜಲಾಶಯದ ಹಿನ್ನೀರಿನಲ್ಲಿ ಬರುವ ಮಗ್ಗೆ ಬಾಣೇಶ್ವರ ಸ್ವಾಮಿ, ಭೀಮನಕೊಲ್ಲಿ ಮಹದೇಶ್ವರ ಸ್ವಾಮಿ ಹಾಗೂ ಕಿತ್ತೂರಿನ ತೆರಣಿ ಮಂಟಿಯಲ್ಲಿರುವ ವರಿರಾಮೇಶ್ವರ ದೇವಸ್ಥಾನಗಳನ್ನೊಳಗೊಂಡ ಮೂರು ಐತಿಹಾಸಿಕ ಸ್ಥಳಗಳನ್ನು ಕಬಿನಿ ಹಿನ್ನೀರಿನಲ್ಲಿ ಬೋಟ್ ಮೂಲಕ ಧಾರ್ಮಿಕ ಪ್ರವಾಸಿ ಕೇಂದ್ರ (Religious tourism center) ಮಾಡಲು ಶ್ರಮಿಸುವುದಾಗಿ ಭರವಸೆ ನೀಡಿದರು.



# ಕಾಂಗ್ರೆಸ್ ಸರ್ಕಾರವು ನುಡಿದಂತೆ ನಡೆದು ಜನಪರ ಹೆಮ್ಮೆ ಪಡೆದಿದೆ: ಸಿದ್ದರಾಮಯ್ಯ

**ಪಿರಿಯಾಪಟ್ಟಣ:** ಕಾಂಗ್ರೆಸ್ ಸರ್ಕಾರವು ನುಡಿದಂತೆ ನಡೆದು ಜನಪರ ಹೆಮ್ಮೆ ಪಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಮಾತನಾಡಿದವರು ಕಾಂಗ್ರೆಸ್ ಸರ್ಕಾರ ಅವರು ಚುನಾವಣಾ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಸಂಪೂರ್ಣವಾಗಿ ಈಡೇರಿಸುವುದರ ಮೂಲಕ ರಾಜ್ಯದ ಜನತೆಯ ಹಿತವನ್ನು ಕಾಪಾಡುತ್ತಿದೆ ಆದರೆ ಅಭಿವೃದ್ಧಿಯನ್ನು ಸಹಿಸದ ಬಿಜೆಪಿ ಮತ್ತು ಜೆಡಿಎಸ್ ಪಕ್ಷವು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾ ಕಾಲಹರಣ ಮಾಡುತ್ತಿದೆ ಇದಕ್ಕೆ ಯಾರು ಕಿವಿಗೊಡಬಾರದು ಹಾಗೆಯೇ ತಾಲೂಕಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಅನುದಾನ ನೀಡಿದ್ದು ಕುವೆಂಪು ಭವನ ನಿರ್ಮಾಣ ಕೂಡ ಅನುದಾನವನ್ನು ನೀಡಿ ಸಹಕಾರ ನೀಡುತ್ತೇನೆ . ತಾಲೂಕಿನ ಜನತೆ ಕೆ ವೆಂಕಟೇಶ್ ರವರ ಪರವಾಗಿ ನಿಲ್ಲಬೇಕು ಎಂದರು. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಾತನಾಡಿ ತಾಲೂಕಿನ ಅಭಿವೃದ್ಧಿಯ ಪರವಾಗಿ ಈ ವೆಂಕಟೇಶ್ ರವರು ಸರ್ಕಾರವನ್ನು ಬೆನ್ನು ಹತ್ತಿ ಸಾಕಷ್ಟು ಅಭಿವೃದ್ಧಿ ಯೋಜನೆಗಳಿಗೆ ಅನುದಾನವನ್ನು ತಂದಿದ್ದಾರೆ ಕುವೆಂಪು ಭವನ ನಿರ್ಮಾಣಕ್ಕೂ ಕೂಡ ಅನುದಾನವನ್ನು ನೀಡುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ.

ರಾಜ್ಯದ ಜನತೆಗೆ ನೀಡಿದ ಗ್ಯಾರಂಟಿ ಯೋಜನೆಗಳು ಇಂದು ಅವರ ಬದುಕನ್ನು ಹಸನಾಗಿಸುವ ಕೆಲಸ ಮಾಡುತ್ತಿದೆ ಆದ್ದರಿಂದ ಅಭಿವೃದ್ಧಿ ಸಹಿಸದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ಮಾಡುತ್ತಿರುವ ಟೀಕೆಗಳಿಗೆ ಯಾರು ಮಣ್ಣನೇ ನೀಡಬಾರದು ಎಂದರು. ಕಾರ್ಯಕ್ರಮದಲ್ಲಿ ಸಚಿವ ಕೆ ವೆಂಕಟೇಶ್, ಸಾರಿಗೆ ಸಚಿವ ರಾಮಲಿಂಗರೆಡ್ಡಿ,ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ,ಕೃಷಿ ಸಚಿವ ಎನ್. ಚೆಲುವರಾಯ ಸ್ವಾಮಿ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್,ಶಾಸಕರಾದ ಕೆ.ಹರೀಶ್ ಗೌಡ,ಡಿ. ರವಿ ಶಂಕರ್,ದರ್ಶನ್ ಧ್ರುವ ನಾರಾಯಣ,,ನಿಗಮ ಮಂಡಳಿ ಅಧ್ಯಕ್ಷ ಗಣೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್,ಜಿಲ್ಲಾಧಿಕಾರಿ ಲಕ್ಷ್ಮಿ ಕಾಂತ ರೆಡ್ಡಿ,ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಕಾಧಿಕಾರಿ ಯುಕೇಶ್ ಕುಮಾರ್,ಪೊಲೀಸ್ ಅಧೀಕ್ಷಕರಾದ ಮಲ್ಲಿಕಾರ್ಜುನ ಬಾಲದಂಡಿ,ಹುಣಸೂರು ಉಪ ವಿಭಾಗಧಿಕಾರಿ ಕಾವ್ಯ, ತಹಸೀಲ್ದಾರ್ ನಿಸರ್ಗ ಪ್ರಿಯಾ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಕಾಧಿಕಾರಿ ಸುನೀಲ್ ಕುಮಾರ್, ಮುಖಂಡರಾದ ಲಕ್ಷ್ಮಣ್, ನಿತೀನ್ ವೆಂಕಟೇಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಜನ ಜಾನುವಾರುಗಳಿಗೆ ಮೇವು ನೀರು ಒದಗಿಸುವಲ್ಲಿ ಆಡಳಿತ ವರ್ಗ ವಿಫಲ: ರೈತರ ಆರೋಪ ಪ್ರತಿಭಟನೆ




**ಹನೂರು :** ಬೇಸಿಗೆಯಲ್ಲಿ ಬರ ಆವರಿಸಿದ್ದರು ನಾಗರಿಕರಿಗೆ ನೀರು ಹಾಗೂ ಜಾನುವಾರುಗಳಿಗೆ ನೀರು ಹಾಗೂ ಮೇವನ್ನು ಒದಗಿಸುವುದರಲ್ಲಿ ವಿಫಲವಾಗಿರುವ ತಾಲ್ಲೂಕು ಅಡಳಿತದ ವಿರುದ್ಧ ಮಾರ್ಟಳ್ಳಿ ಗ್ರಾಮ ಪಂಚಾಯಿತಿ ಕಚೇರಿ ಮುಂದೆ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಶೈಲೇಂದ್ರ ನೇತೃತ್ವದಲ್ಲಿ ಇಂದು ಶುಕ್ರವಾರ ಪ್ರತಿಭಟನೆ ನಡೆಯಿತು.

ಮಾರ್ಟಳ್ಳಿ ಗ್ರಾಮ ಪಂ. ಕಚೇರಿ ಮುಂದೆ ಜಮಾಯಿಸಿದ ಕರ್ನಾಟಕ ರಾಜ್ಯ ರೈತ ಸಂಘದ ರೈತರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದು ಖಾಲಿ ಬಿಂದಿಗೆಗಳನ್ನು ಹಿಡಿದು ಅಧಿಕಾರಿಗಳು ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು.

ಕಳೆದ ಹಲವಾರು ವರ್ಷಗಳಿಂದ ಮಾರ್ಟಳ್ಳಿ ವ್ಯಾಪ್ತಿಯಲ್ಲಿ ಬರ ಆವರಿಸಿ ಕುಡಿಯುವ ನೀರಿಗೆ ಹಾಕಾರ ಉಂಟಾಗಿದೆ ಸರ್ಕಾರ ಬೇಸಿಗೆಯಲ್ಲಿ ಜನರಿಗೆ ಹಾಗೂ ಜಾನುವಾರುಗಳಿಗೆ ಮೇವು ಹಾಗೂ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ ಜಿಲ್ಲಾಡಳಿತ ನೀರಿನ ಸಮಸ್ಯೆ ಹಾಗೂ ಜಾನುವಾರುಗಳಿಗೆ ನೀರು ಮತ್ತು ಮೇವಿನ ಸಮಸ್ಯೆ ಬಗೆಹರಿಸುವುದರಲ್ಲಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಾಲೂಕು ಪಂ.ಇ.ಓ ಉಮೇಶ್ ಅವರು ರೈತರ ಸಮಸ್ಯೆಗಳ ಬಗ್ಗೆ ಆಲಿಸಿದರು. ಈ ಭಾಗದಲ್ಲಿ ಕುಡಿಯುವ ನೀರಿಗೆ ಅಹಾಕಾರ ಉಂಟಾಗಿದ್ದು ನೀರು ಪೂರೈಕೆ ಮಾಡುವಲ್ಲಿ ಗ್ರಾಮ ಪಂ ಪಿ.ಡಿ.ಓ ಚೆನ್ನೇಶ್ ವಿಫಲರಾಗಿದ್ದಾರೆ. ಇವರು ಸಾರ್ವಜನಿಕರು ಮಹಿಳೆಯರ ಜೊತೆ ಅಸಭ್ಯವಾಗಿ ಮಾತನಾಡುತ್ತಾರೆ ಮೊದಲು ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ರೈತರು ಮಹಿಳೆಯರು ದೂರಿದರು.

ಹಲವುಗ್ರಾಮಗಳಿಗೆ ಟ್ಯಾಂಕರ್ ಗಳ ಮೂಲಕ ನೀರು ಪೂರೈಕೆ ಮಾಡುತ್ತಾರೆ ಅದು ನಾಮಕಾವಸ್ಥೆಗೆ ವಾರಕ್ಕೊಮ್ಮೆ ಟ್ಯಾಂಕರ್ ಮೂಲಕ ಬಿಡುತ್ತಾರೆ ಇದು ಇಲ್ಲಿನ ಜನರಿಗೆ ದಿನನಿತ್ಯದ ಬಳಕೆಗೆ ಸಾಕಾಗುವುದಿಲ್ಲ. ದೊಡ್ಡ ದೊಡ್ಡ ಲಾರಿ ಟ್ಯಾಂಕರ್ ಗಳ ಮೂಲಕ ಜನರಿಗೆ ಕುಡಿಯಲು ಶುದ್ಧ ನೀರನ್ನು ಪೂರೈಸಬೇಕು. ಹಾಗೂ ಜಾನುವಾರುಗಳಿಗೂ ಕುಡಿಯುವ ನೀರನ್ನು ಒದಗಿಸಬೇಕು ಎಂದು ಆಗ್ರಹಿಸಿ ಪಟ್ಟು ಹಿಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಇ.ಓ ಉಮೇಶ್ ಅವರು ಮೂರು ದಿನಗಳ ಕಾಲಾವಕಾಶವನ್ನು ಪಡೆದುಕೊಂಡು ನೀರು ಒದಗಿಸುವುದಾಗಿ ಭರವಸೆಯನ್ನು ನೀಡಿದ್ದಾರೆ. ಜೊತೆಗೆ ತಾಲೂಕು ಉಪ ತಹಶೀಲ್ದಾರ್ ಸುರೇಖಾ ಅವರು ಜಾನುವಾರುಗಳಿಗೆ ಮೇವು ಒದಗಿಸುವ ಸಂಬಂಧ ಮೇಲಾಧಿಕಾರಿಗಳಿಗೆ ತಿಳಿಸಿ ಆದಷ್ಟು ಬೇಗ ಅಗತ್ಯ ಕ್ರಮ ಕೈಗೊಳ್ಳುವಂತೆ ರೈತರ ಸಮಸ್ಯೆಗೆ ಸ್ಪಂದಿಸಲು ತಿಳಿಸಲಾಗುವುದು ಎಂದು ತಿಳಿಸಿದ್ದಾರೆ.

ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಸಾರಿಗೆ ಇಲಾಖೆ, ಅಬಕಾರಿ ಇಲಾಖೆ, ತಣ್ಣ ನೀರಾವರಿ, ಸಹಕಾರಿ, ರೇಷ್ಮೆ ಇಲಾಖೆ, ಪೊ?ಲಿಸ್ ಇಲಾಖೆಯವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ತಮ್ಮ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳಿಗೆ ಪರಿಹಾರಗಳು ಹಾಗೂ ಉಪಯೋಗಗಳ ಬಗ್ಗೆ ಮಾಹಿತಿಯನ್ನು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿಗಳು ಸೇರಿದಂತೆ ರೈತ ಸಂಘದ ಎಂ.ಇ ಬಸವರಾಜು, ಮಾರ್ಟಳ್ಳಿ ಘಟಕ ರೈತ ಸಂಘದ ಅಧ್ಯಕ್ಷ ಅರ್ಪುದರಾಜ್, ವಸಂತ ಕುಮಾರ್, ಪುಟ್ಟಸ್ವಾಮಿ, ಡೇವಿಡ್, ಸಗಾಯರಾಜ್, ಲಾರೆನ್ಸ್, ರಾಜ, ಲೂರ್ದುಸ್ವಾಮಿ, ವಲ್ಲಭದಾಸ್, ಪೀಟರ್, ಸಂದನಮೇರಿ, ಜೆಸ್ಸಿಂತ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸೇರಿದಂತೆ ಇನ್ನಿತರರು ಇದ್ದರು.



# ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶ ವಚನಗಳು ಇಂದಿನ ಯುವ ಸಮುದಾಯಕ್ಕೆ ಅತ್ಯ ಅಮೂಲ್ಯ

**ಕೆ ಆರ್ ನಗರ:** ವಿಶ್ವ ಜ್ಞಾನಿ ಅಂಬೇಡ್ಕರ್ ಅವರ ಆದರ್ಶ ವಚನಗಳು ಇಂದಿನ ಯುವ ಸಮುದಾಯಕ್ಕೆ ಅತ್ಯ ಅಮೂಲ್ಯವಾಗಿ ಬೇಕಾಗಿದ್ದು ಇದನ್ನು ಪಾಲಿಸುವ ಮೂಲಕ ಅವರ ಹಾದಿಯಲ್ಲಿ ನಾವು ನೀವೆಲ್ಲ ಸಾಗೋಣ ಎಂದು ಅಂಬೇಡ್ಕರ್ ಸಮುದಾಯದ ಯಜಮಾನ ಗಾಡಿ ಸಿದ್ದಯ್ಯ ತಿಳಿಸಿದರು. ಹನಸೋಗೆ ಗ್ರಾಮದ ಅಂಬೇಡ್ಕರ್ ಸಂಘದ ವತಿಯಿಂದ ಆಯೋಜಿಸಿದ 135 ನೇ ಅಂಬೇಡ್ಕರ್ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಅಂಬೇಡ್ಕರ್ ರವರು ಒಂದು ಸಮುದಾಯದ ವಿಶ್ವಜ್ಞಾನಿ ಅಲ್ಲ. ಜಗತ್ತೇ ಮೆಚ್ಚುವಂತಹ ಮಹಾನ್ ವ್ಯಕ್ತಿ. ಶೋಷಿತ ವರ್ಗಗಳಿಂದ ರಾಜಮನೆತನದ ವರ್ಗದವರಿಗೆ ಸಮಾಜದಲ್ಲಿ ಬದುಕು ನಡೆಸುವುದು ಹೇಗೆ ಎಂಬುವುದನ್ನು ಅರ್ಥಪೂರ್ಣವಾಗಿ ಸಂವಿಧಾನದಲ್ಲಿ ತಿಳಿಸಿಕೊಟ್ಟಂತಹ ಮಹಾನ್ ನಾಯಕ ಡಾಕ್ಟರ್ ಅಂಬೇಡ್ಕರ್ ಅವರು. ಶೋಷಿತರ ಬಗ್ಗೆ ಸಂವಿಧಾನದಲ್ಲಿ ಅಳವಡಿಸಿರುವ ಮೀಸಲಾತಿ ಮತ್ತು ಇನ್ನಿತರ ಸೌಲಭ್ಯಗಳನ್ನು ಅರ್ಥ ಮಾಡಿಕೊಂಡಿರುವ ದಲಿತ ಸಮಾಜ ಅಂಬೇಡ್ಕರ್ ಅವರನ್ನು ಹೆಚ್ಚು ಪ್ರೀತಿಸುವ ಮೂಲಕ ಅವರ ಆದರ್ಶ ಗುಣಗಳನ್ನು ಜಗತ್ತಿಗೆ ಸಾರಥಿದ್ದಾರೆ.

ಆದರೆ ಅದೇ ಸಂವಿಧಾನದಲ್ಲಿ ಮಧ್ಯಮ ವರ್ಗದ ಮತ್ತು ಮೇಲ್ವರ್ಗದ ಜನರಿಗೂ ಉತ್ತಮ ಬದುಕು ಕಟ್ಟಿಕೊಳ್ಳುವುದರ ಬಗ್ಗೆ ಮತ್ತು ಅನೇಕ ಸೌಲಭ್ಯಗಳ ಬಗ್ಗೆ ಸಂವಿಧಾನ ದಲ್ಲಿ ಇದ್ದಾರೆ ಆದರೆ ಅವರುಗಳು ಇವರ ಆಚರಣೆಗೆ ಸ್ವಲ್ಪ ಹಿಂದೆಟು ಹಾಕುತ್ತಾರೆ ಏಕೆ ಎಂಬುವುದು ನಮಗೆ ಅರ್ಥವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಮಹಾತ್ಮ ಗಾಂಧೀಜಿ ಅಂಬೇಡ್ಕರ್ ವಾಲ್ಮೀಕಿ ಕೆಂಪೇಗೌಡರು ಕನಕದಾಸರು ಬಸವಣ್ಣನವರು ಬುದ್ಧ ತೀರಿದಂತೆ ಇನ್ನಿತರ ಮಹನೀಯರ ಜಯಂತಿಯನ್ನು ಎಲ್ಲಾ ಸಮಾಜದ ಮುಖಂಡರು ಸೇರಿ ಒಗ್ಗಟ್ಟಿನಿಂದ ಆಚರಿಸಿದರೆ ಅವರಿಗೆ ಕೊಡುವ ಗೌರವವಾಗುತ್ತದೆ ಎಂದು ಹೇಳಿದರು.

ಯಜಮಾನ್ ಮಹದೇವ್ ಮಾತನಾಡಿ ಅನಸೋಗೆ ಗ್ರಾಮದ ಅಂಬೇಡ್ಕರ್ ಸಂಘದಿಂದ ಪ್ರತಿವರ್ಷ ವಿಶೇಷ ವಿಭಿನ್ನವಾಗಿ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಿಕೊಂಡು ಬರುತ್ತಿದ್ದೇವೆ ಇದರಲ್ಲಿ ಯಾವುದೇ ರಾಜಕೀಯ ಅಥವಾ ಜಾತಿ ಇಲ್ಲದೆ ಎಲ್ಲಾ ಸಮಾಜದ ಜನರು ನಮಗೆ ಸಹಕಾರ ನೀಡುತ್ತಾರೆ. ಹಾಗಾಗಿ ಈ ವರ್ಷವೂ ಜಯಂತಿಯಲ್ಲಿ ಸಾಕಷ್ಟು ಕೆಳ ಮತ್ತು ಮೇಲ್ವರ್ಗದ ಜನರು ಆಚರಣೆಗೆ ಭಾಗವಹಿಸಿದ್ದು ಕಾರ್ಯಕ್ರಮ ಯಶಸ್ವಿಗೆ ಕಾರಣವಾಗಿದೆ ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

# ಜಾತ್ರಾ ಮಹೋತ್ಸವಕ್ಕೆ ಮುಂಜಾಗ್ರತಾ ಕ್ರಮಕ್ಕೆ ಡೀಸಿ ಸೂಚನೆ

## ಸಾವನದುರ್ಗ ಬ್ರಹ್ಮರಥೋತ್ಸವಕ್ಕೆ ಭರದ ಸಿದ್ಧತೆ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲೂಕಿನ ಸಾವನದುರ್ಗದ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ 2026ನೇ ಸಾಲಿನ ಜಾತ್ರಾ/ಬ್ರಹ್ಮರಥೋತ್ಸವ ಕಾರ್ಯಕ್ರಮಗಳು ಏಪ್ರಿಲ್ 30 ರಿಂದ ಮೇ 04 ರವರೆಗೆ ನಡೆಯಲಿದ್ದು, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳೊಂದಿಗೆ ಯಾವುದೇ ಲೋಪವಾಗದಂತೆ ಜಾತ್ರಾ ಮಹೋತ್ಸವದ ಯಶಸ್ಸಿಗಾಗಿ ವ್ಯವಸ್ಥಿತ ಸಿದ್ಧತೆಗಳನ್ನು ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಅವರು ಸೂಚಿಸಿದರು. ಅವರು ಏ.22 ರಂದು ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಸಾವನದುರ್ಗ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಜಾತ್ರಾ ಬ್ರಹ್ಮರಥೋತ್ಸವ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬ್ರಹ್ಮರಥವು ಸುಸ್ಥಿತಿಯಲ್ಲಿರುವುದನ್ನು ಲೋಕೋಪಯೋಗಿ ಇಲಾಖೆಯವರು ಪರಿಶೀಲಿಸಿ ದೃಢೀಕರಣ ನೀಡಬೇಕು. ಜಾತ್ರಾ ದಿನಗಳಲ್ಲಿ ಆಗಮಿಸುವ ವಾಹನಗಳಿಗೆ ಮಾಗಡಿ ಆರಕ್ಷಕ ವೃತ್ತ ನಿರೀಕ್ಷಕರು ವ್ಯವಸ್ಥಿತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ರಥೋತ್ಸವದ ದಿನ ಹೆಚ್ಚುವರಿ ಆರಕ್ಷಕ ಸಿಬ್ಬಂದಿಯನ್ನು ನಿಯೋಜಿಸಿ ಭದ್ರತೆ ಒದಗಿಸಬೇಕು. ಹೆಚ್ಚಿನ ಜನಸಂದಣಿ ನಿರೀಕ್ಷೆಯಿರುವುದರಿಂದ ನೂಕುನುಗ್ಗಲು ಉಂಟಾಗದಂತೆ ಸರತಿಸಾಲಿನಲ್ಲಿ ಭಕ್ತರಿಗೆ ಪ್ರವೇಶ ವ್ಯವಸ್ಥೆ ಮಾಡಬೇಕು ಎಂದರು.

ಜಾತ್ರಾ ಅವಧಿಯಲ್ಲಿ ನಿರಂತರ ವಿದ್ಯುತ್ ಸರಬರಾಜು ಇರಬೇಕು. ಬ್ರಹ್ಮರಥೋತ್ಸವದ ದಿನ ಅಗ್ನಿಶಾಮಕ ವಾಹನ ಸಿದ್ಧವಾಗಿರಬೇಕು. ಜಾತ್ರಾ ಮೈದಾನದಲ್ಲಿರುವ ಒಣ ಮರದ ಕೊಂಬೆಗಳನ್ನು ತೆರವುಗೊಳಿಸಬೇಕು ಎಂದು ಸೂಚಿಸಿದರು.

ಅರವಂಟಿಗೆಗಳಲ್ಲಿ ಪ್ರಸಾದ ವಿತರಣೆ ಮತ್ತು ಅನ್ನದಾನ ನಡೆಯುವ ಸ್ಥಳಗಳಲ್ಲಿ ಸುರಕ್ಷತೆ ಹಾಗೂ ಸ್ವಚ್ಛತೆ ಕಾಪಾಡಬೇಕು. ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ಜಾಗೃತಿ ಮೂಡಿಸಬೇಕು. ಜಾತ್ರಾ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮೂಡಿಸಿ, 108 ಆಂಬುಲೆನ್ಸ್ ವ್ಯವಸ್ಥೆ ಕಲ್ಪಿಸಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಮನಗರ ಹಾಗೂ ಮಾಗಡಿಯಿಂದ ಹೆಚ್ಚುವರಿ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ದೇವಸ್ಥಾನ ಆವರಣದಲ್ಲಿರುವ ಹೈಮಾಸ್ಟ್ ದೀಪಗಳು ಹಾಗೂ ಬೀದಿ ದೀಪಗಳನ್ನು ದುರಸ್ಥಿ ಮಾಡಬೇಕು. ಕುಡಿಯುವ ನೀರು ಮತ್ತು ಜಾತ್ರಾ ಮೈದಾನದ ಸ್ವಚ್ಛತೆ ಕಾಪಾಡಲು ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಸೂಚಿಸಿದರು.

ಧಾರ್ಮಿಕ ದತ್ತಿ ಇಲಾಖೆಯಿಂದ ಭಕ್ತರಿಗೆ ಮೊಬೈಲ್ ಶೌಚಾಲಯಗಳ ವ್ಯವಸ್ಥೆ ಮಾಡಬೇಕು. ರಥ ಸಾಗುವ ಮಾರ್ಗದಲ್ಲಿ ಹೆಚ್ಚುವರಿ ಸಿಸಿಟಿವಿ ಅಳವಡಿಸಬೇಕು. ದೇವಸ್ಥಾನಕ್ಕೆ ವಿಶೇಷ ದೀಪಾಲಂಕಾರ ಹಾಗೂ ಹೂವಿನ ಅಲಂಕಾರ ಮಾಡುವಂತೆ ತಿಳಿಸಿದರು.

ಈ ಸಭೆಯಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಎಸ್.ನಾಗರಾಜು, ಅರ್ಚಕ ವಿಷ್ಣುಮೂರ್ತಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಯ ತಹಶೀಲ್ದಾರ್ ರಮ್ಯಾ, ಕಾರ್ಯನಿರ್ವಾಹಕ ಅಧಿಕಾರಿ ರಘು ಹಾಗೂ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಸಮಿತಿ ಸದಸ್ಯರು ಉಪಸ್ಥಿತರಿದ್ದರು.



# ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗೆ ಚೀಟಿ ಕೊಡಬೇಡಿ: ಜಿಲ್ಲಾಧಿಕಾರಿ ಪ್ರಭು

ಸರ್ಕಾರಿ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಬರುವ ಒಳರೋಗಿಗಳು ಹಾಗೂ ಹೊರರೋಗಿಗಳಿಗೆ ಔಷಧಿಗಳನ್ನು ಹೊರಗಡೆ ಖರೀದಿಸಲು ವೈದ್ಯಾಧಿಕಾರಿಗಳು ಚೀಟಿ ನೀಡಬಾರದು ಎಂದು ಜಿಲ್ಲಾಧಿಕಾರಿ ಜಿ. ಪ್ರಭು ಕಟ್ಟುನಿಟ್ಟಿನ ಸೂಚನೆ ನೀಡಿದರು.



ಗೌರಿಬಿದನೂರು ತಾಲೂಕಿನ ತಾಯಿ–ಮಕ್ಕಳ ಆಸ್ಪತ್ರೆಗೆ ಬುಧವಾರ ಭೇಟಿ ನೀಡಿ ಆರೋಗ್ಯ ಸೇವೆಗಳ ಪರಿಶೀಲನೆ ನಡೆಸಿದ ಅವರು, ಸರ್ಕಾರದಿಂದ ಉಚಿತವಾಗಿ ದೊರೆಯಬೇಕಾದ ಪರೀಕ್ಷೆ, ಚಿಕಿತ್ಸೆ ಹಾಗೂ ಔಷಧಿಗಳು ರೋಗಿಗಳಿಗೆ ಸಂಪೂರ್ಣವಾಗಿ ಸಿಗುವಂತೆ ಅಧಿಕಾರಿಗಳು ನಿಗಾ ವಹಿಸಬೇಕು ಎಂದು ಹೇಳಿದರು.

ನಾಯಿಕಡಿತ, ಹಾವು ಕಡಿತ ಸೇರಿದಂತೆ ಅಗತ್ಯ ಔಷಧಿಗಳ ಪೂರೈಕೆ ಜಿಲ್ಲೆಯಲ್ಲಿ ಸಾಕಷ್ಟು ಲಭ್ಯವಿದ್ದು, ಯಾವುದೇ ರೋಗಿಗೆ ಹೊರಗಡೆ ಔಷಧಿ ಖರೀದಿ ಮಾಡುವ ಪರಿಸ್ಥಿತಿ ಬರಬಾರದು ಎಂದರು. ಗೌರಿಬಿದನೂರು ತಾಯಿ–ಮಕ್ಕಳ ಆಸ್ಪತ್ರೆಗೆ ತಿಂಗಳಿಗೆ ಸರಾಸರಿ 15 ಸಾವಿರ ಹೊರರೋಗಿಗಳು ಮತ್ತು 500 ಒಳರೋಗಿಗಳು ಚಿಕಿತ್ಸೆ ಪಡೆಯುತ್ತಿರುವುದರಿಂದ, ಎಲ್ಲರಿಗೂ ಸಮಯೋಚಿತ ಮತ್ತು ಸಮರ್ಪಕ ಸೇವೆ ಒದಗಿಸುವಂತೆ ಸೂಚಿಸಿದರು.

ಇನ್ನೂ ಜಿಲ್ಲೆಯಲ್ಲಿ ಶೀಘ್ರದಲ್ಲೇ ಮನೆಮನೆಗೆ ಆರೋಗ್ಯ ತಪಾಸಣೆ ಅಭಿಯಾನ ಆರಂಭಿಸಿ, 30 ವರ್ಷ ಮೇಲ್ಪಟ್ಟವರಿಗೆ ವಿವಿಧ ಕಾಯಿಲೆಗಳ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿದರು. ಭ್ರೂಣ ಲಿಂಗ ಪತ್ತೆ ಮಾಡುವ ಅಕ್ರಮ ಚಟುವಟಿಕೆಗಳನ್ನು ತಡೆಯಲು ಕಠಿಣ ಕಣ್ಗಾವಲು ಇಡಲಾಗಿದೆ ಎಂದು ಹೇಳಿದರು.

ಜಿಲ್ಲಾ ಆಸ್ಪತ್ರೆಗೆ ಅಗತ್ಯವಾದ ಸ್ಕ್ಯಾನಿಂಗ್ ಯಂತ್ರ ಖರೀದಿಗೆ ಸುಮಾರು 7 ಕೋಟಿ ರೂಪಾಯಿ ವೆಚ್ಚದಲ್ಲಿ ಕ್ರಮ ಕೈಗೊಳ್ಳಲಾಗಿದ್ದು, ಕಿಡ್ನಿ, ಹೃದಯ, ಮೆದುಳು ಸೇರಿದಂತೆ ವಿವಿಧ ಕಾಯಿಲೆಗಳಿಗೆ ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು ಉಚಿತವಾಗಿ ನೀಡುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಹೇಶ್ ಕುಮಾರ್ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೆಣ್ಣು ಮಕ್ಕಳಿಗೆ ವೈಚಾರಿಕ ಶಿಕ್ಷಣ ಸಿಗಲಿ: ಡಾ.ಹೆಚ್.ಸಿ.ಮಹದೇವಪ್ಪ

**ಮೈಸೂರು:** ಹೆಣ್ಣು ಮಕ್ಕಳು ವೈಜ್ಞಾನಿಕ ಹಾಗೂ ವೈಚಾರಿಕ ಶಿಕ್ಷಣ ಪಡೆದು ದೇಶಕ್ಕೆ ಜವಾಬ್ದಾರಿಯುತ ಪ್ರಜೆಗಳಾಗಬೇಕು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.



ನಗರದ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ವೇದಿಕೆ 2025–26ರ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ ಮೈಸೂರು ಮಾದರಿ ನಗರವಾಗಿ ಬೆಳೆಯಲು ಸಾಧ್ಯವಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ದೇಶದ ಬಲವಾಗಿದ್ದು, ಮಹಿಳಾ ಶಿಕ್ಷಣ ಮತ್ತು ಹಕ್ಕುಗಳಿಗಾಗಿ ಅವರು ನಡೆಸಿದ ಹೋರಾಟವೇ ಇಂದಿನ ಮಹಿಳಾ ಸಬಲೀಕರಣಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಶಿಕ್ಷಣವೇ ಯಾರೂ ಕದಿಯಲಾಗದ ಆಸ್ತಿ. ಅದನ್ನು ಪಡೆದು ಅಸಮಾನತೆ ನಿವಾರಿಸಿ ಸಮಸಮಾಜ ನಿರ್ಮಾಣ ಮಾಡುವುದು ಅಗತ್ಯವೆಂದು ಅವರು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶಾಸಕ ಹರೀಶ್ ಗೌಡ ಮಾತನಾಡಿ, ಮಹಿಳಾ ಶಿಕ್ಷಣಕ್ಕೆ ಸರ್ಕಾರ ಆದ್ಯತೆ ನೀಡುತ್ತಿದ್ದು, ಗ್ರಾಮೀಣ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ ಒದಗಿಸಲಾಗುತ್ತಿದೆ ಎಂದರು.

ಜಯದೇವ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ ಮಾತನಾಡಿ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಸೇವಾ ಕಾರ್ಯಕ್ರಮಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ.ಪ್ರತಿಭಾ ಡಿ.ಎಸ್., ಎಚ್.ಜನಾರ್ಧನ್, ಪ್ರೊ.ಪಿ.ಶಿವಣ್ಣ, ಡಾ.ಮುತ್ತುರಾಜ್ ಎಸ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಗಾಂಧಾರಿ ವಿದ್ಯೆ ? ನಿಜವ್ರೋ, ವ್ಯಾಪಾರವ್ರೋ?



| ರೂಪ ಮಂಜುನಾಥ ಹೊಳೆನರಸೀಪುರ

ಮಹಾಭಾರತದ ಅತ್ಯಂತ ಅಸಾಧಾರಣ ಹಾಗೂ ಮುಖ್ಯ ಪಾತ್ರಗಳಲ್ಲಿ ಗಾಂಧಾರಿಯೂ ಒಬ್ಬಳು. ಗಾಂಧಾರ ದೇಶದ ರಾಜಕುಮಾರಿಯಾಗಿ ಹುಟ್ಟಿ, ಅಂಧ ರಾಜ ಧೃತರಾಷ್ಟ್ರನನ್ನು ವರಿಸಿದ ಆ ಕ್ಷಣದಿಂದಲೇ ತನ್ನ ಪತಿಗೆ ಇಲ್ಲದ ಭಾಗ್ಯ ತನಗೂ ಬೇಡವೆಂದು ಆಕೆಯೇ ಸ್ವಯಂ ತನ್ನ ಕಣ್ಣಿಗೆ ಪಟ್ಟಿ ಕಟ್ಟಿಕೊಂಡಳು. ಇದು ಕೇವಲ ಪಾತಿವ್ರತ್ಯದ ಸಂಕೇತ ಮಾತ್ರವಲ್ಲ ? ಇದು ಇಂದ್ರಿಯ ನಿಗ್ರಹದ ಮಹಾ ಸಂಕಲ್ಪ! ಬಾಹ್ಯ ದೃಷ್ಟಿಯನ್ನು ತ್ಯಜಿಸಿದ ಆಕೆ ದಶಕಗಳ ತಪಸ್ಸಿನಲ್ಲಿ ಅಂತರ್ದೃಷ್ಟಿಯನ್ನು ಸಾಧಿಸಿದಳು.ಮಹಾಭಾರತದಲ್ಲಿ ಗಾಂಧಾರಿ ಕೇವಲ ಧೃತರಾಷ್ಟ್ರನ ಪತ್ನಿಯಾಗಿ ಮಾತ್ರವಲ್ಲ, ಅದ್ಭುತ ತಪಸ್ಸಿನ ಮಹಿಮೆಯುಳ್ಳ ಸ್ವಾಮಿನಿಯಾಗಿಯೂ ಚಿತ್ರಿತಳಾಗಿದ್ದಾಳೆ. ಜೀವನವಿಡೀ ತ್ಯಾಗ ಮತ್ತು ಪತಿವ್ರತಾ ನಿಷ್ಠೆಯನ್ನು ಪಾಲಿಸಿದಳು. ಈ ಅಖಂಡ ತಪಸ್ಸಿನಿಂದ ಆಕೆಯಲ್ಲಿ ಅಪರಿಮಿತ ಆಧ್ಯಾತ್ಮಿಕ ಶಕ್ತಿಯು ಸಂಚಿತವಾಯಿತು.

ಮಹಾಭಾರತದ ಪ್ರಮುಖ ಪಾತ್ರಗಳಲ್ಲಿ ಒಬ್ಬಳಾದ ಗಾಂಧಾರಿಯು ತನ್ನ ಪಾತಿವ್ರತ್ಯ ಮತ್ತು ತಪಃಶಕ್ತಿಯಿಂದ ಗಳಿಸಿದ ಅಪಾರ ಸಾಮರ್ಥ್ಯವನ್ನೇ 'ಗಾಂಧಾರಿ ವಿದ್ಯೆ' ಅಥವಾ ಅವಳ ದೃಷ್ಟಿ ಶಕ್ತಿ ಎಂದು ಕರೆಯಲಾಗುತ್ತದೆ. ಗಾಂಧಾರಿ ವಿದ್ಯೆಯ ಬಗ್ಗೆ ಪುರಾಣಗಳಲ್ಲಿ ಮತ್ತು ಮಹಾಭಾರತದಲ್ಲಿ ಬಹಳ ವಿಶೇಷವಾದ ಉಲ್ಲೇಖಗಳಿವೆ. ಇದನ್ನು ಮುಖ್ಯವಾಗಿ ನೇತ್ರಗಳಿಗೆ ಸಂಬಂಧಿಸಿದ ಅದ್ಭುತ ಶಕ್ತಿ ಎಂದು ಗುರುತಿಸಲಾಗುತ್ತದೆ. ಈ ವಿದ್ಯೆಯಲ್ಲಿ ಒಂದು ವಿಶೇಷ ತಾಂತ್ರಿಕ ಮತ್ತು ಯೋಗ ಶಕ್ತಿಯ ಗಮ್ಮತ್ತಿದೆ. ಇದು ಗಾಂಧಾರಿಯ ಹೆಸರಿನಲ್ಲಿ ಪ್ರಚಲಿತಗೊಂಡ ಒಂದು ಸಿದ್ಧ ವಿದ್ಯೆ. ಇದರ ಮುಖ್ಯ ಲಕ್ಷಣಗಳು:ದೃಷ್ಟಿಯನ್ನು ಮುಚ್ಚಿ, ಅಂತರ್ದೃಷ್ಟಿಯನ್ನು ತೆರೆಯುವ ಸಾಧನೆ ? ಬಾಹ್ಯ ದೃಷ್ಟಿಯನ್ನು ಉಪಯೋಗಿಸದೇ, ಒಳದೃಷ್ಟಿಯಿಂದ ಹೊರಪ್ರಪಂಚವನ್ನು ಕಾಣುವ ಯೋಗ.ಈ ವಿದ್ಯೆ ಅಚಾನಕ್ಕಾಗಿ ಬರುವುದಲ್ಲ. ಇದು ಸಂಚಿತ ತಪಸ್ಸಿನ ಶಕ್ತಿ. ವರ್ಷಗಟ್ಟಲೆ ಇಂದ್ರಿಯ ನಿಗ್ರಹದಿಂದ ಗಳಿಸಿದ ಅಸಾಧಾರಣ ತೇಜಸ್ಸು.

ದೃಷ್ಟಿ ಶಕ್ತಿಯ ಪ್ರಭಾವ:ಗಾಂಧಾರಿಯ ಕಣ್ಣಿನ ಪಟ್ಟಿಯನ್ನು ತೆಗೆದಾಗ ಅವಳ ದೃಷ್ಟಿ ಯಾರ ಮೇಲೆ ಬೀಳುತ್ತದೆಯೋ, ಅವರ ದೇಹವು ವಜ್ರದಂತೆ ಕಠಿಣವಾಗುವ ಸಾಮರ್ಥ್ಯವನ್ನು ಈ ವಿದ್ಯೆ ಹೊಂದಿತ್ತು. ಇದು ಕೇವಲ ಮಂತ್ರವಲ್ಲ, ಬದಲಿಗೆ ಅವಳು ಪಾಲಿಸಿಕೊಂಡು ಬಂದ ನಿಷ್ಠೆಯ ಶಕ್ತಿಯಾಗಿತ್ತು.

ದುರ್ಯೋಧನನಿಗೆ ನೀಡಿದ ರಕ್ಷಣೆ:ಕುರುಕ್ಷೇತ್ರ ಯುದ್ಧದ ಅಂತ್ಯಕಾಲದಲ್ಲಿ, ತನ್ನ ಮಗನಾದ ದುರ್ಯೋಧನನನ್ನು ಮರಣದಿಂದ ಉಳಿಸಲು ಗಾಂಧಾರಿಯು ಈ ಶಕ್ತಿಯನ್ನು ಬಳಸಲು ನಿರ್ಧರಿಸುತ್ತಾಳೆ. ಅವಳು ದುರ್ಯೋಧನನಿಗೆ ಗಂಗಾನದಿಯಲ್ಲಿ ಸ್ನಾನ ಮಾಡಿ ಅತೀ ದಿವ್ಯವಾದ ರೂಪದಲ್ಲಿ (ನಿರ್ವಸ್ತ್ರನಾಗಿ) ತನ್ನ ಮುಂದೆ ಬರಲು ಸೂಚಿಸುತ್ತಾಳೆ. ಅವಳು ಕಣ್ಣಿನ ಪಟ್ಟಿಯನ್ನು ಬಿಚ್ಚಿದಾಗ ಬೀಳುವ ಮೊದಲ ದೃಷ್ಟಿಯು ಮಗನ ಇಡೀ ದೇಹವನ್ನು 'ವಜ್ರಕಾಯ'ವನ್ನಾಗಿ ಮಾಡಲಿ ಎಂಬುದು ಅವಳ ಉದ್ದೇಶವಾಗಿತ್ತು.

ಕೃಷ್ಣನ ತಂತ್ರ:ದುರ್ಯೋಧನನು ಬೆತ್ತಲಾಗಿ ತಾಯಿಯ ಬಳಿಗೆ ಹೋಗುವಾಗ ದಾರಿಯಲ್ಲಿ ಶ್ರೀಕೃಷ್ಣನು ಎದುರಾಗುತ್ತಾನೆ. ಕೃಷ್ಣನು ನಗುನಗುತ್ತಲೇ ಅವನನ್ನು ಕೆಣಕುತ್ತಾ, "ದುರ್ಯೋಧನ, ನೀನು ಈಗ ಬೆಳೆದವನು. ಈ ವಯಸ್ಸಿನಲ್ಲಿ ತಾಯಿಯ ಮುಂದೆ ಹೀಗೆ ಸಂಪೂರ್ಣ ಬೆತ್ತಲಾಗಿ ಹೋಗುವುದು ನಿನಗೆ ನಾಚಿಕೆ ಎನಿಸುವುದಿಲ್ಲವೇ? ಕನಿಷ್ಠ ಪಕ್ಷ ನಿನ್ನ ಗುಪ್ತಾಂಗವನ್ನಾದರೂ ಮುಚ್ಚಿಕೋ," ಎಂದಾಗ, ದುರ್ಯೋಧನನು ತನ್ನ ಸೊಂಟದ ಭಾಗಕ್ಕೆ ಎಲೆಗಳನ್ನು ಸುತ್ತಿಕೊಂಡು ಹೋಗುತ್ತಾನೆ. ಗಾಂಧಾರಿಯು ಕಣ್ಣಿನ ಪಟ್ಟಿಯನ್ನು ತೆಗೆದಾಗ ಅವಳ ದೃಷ್ಟಿ ದುರ್ಯೋಧನನ ದೇಹದ ಮೇಲೆ ಬೀಳುತ್ತದೆ.

ಪರಿಣಾಮ:ಗಾಂಧಾರಿಯ ದೃಷ್ಟಿ ಹರಿಸಿದ ಶಕ್ತಿಯಿಂದಾಗಿ ದುರ್ಯೋಧನನ ದೇಹದ ಎಲ್ಲ ಭಾಗಗಳು ವಜ್ರದಂತೆ ಬಲವಾಗಿ ಬದಲಾದವು. ಆದರೆ, ಎಲೆಗಳಿಂದ ಮುಚ್ಚಿಕೊಂಡ ಆ ಸೊಂಟದ ಭಾಗ ಮಾತ್ರ ಮೊದಲಿನಂತೆಯೇ ಉಳಿಯಿತು.ಮುಂದೆ ಭೀಮನೊಂದಿಗಿನ ಯುದ್ಧದಲ್ಲಿ ಆ ಸೊಂಟದ ಭಾಗಕ್ಕೇ ಗದಾಘಾತವಾಗಿ ಅವನ ಮೃತ್ಯುವಿಗೆ ಕಾರಣವಾಗುತ್ತದೆ.

ಗಾಂಧಾರಿ ವಿದ್ಯೆಯು ಭಾರತೀಯ ಪುರಾಣಗಳಲ್ಲಿ ಸಂಯಮ, ನಿಷ್ಠೆ ಮತ್ತು ತಾಯಿಯ ಹಾರೈಕೆ ಎಷ್ಟು ಶಕ್ತಿಶಾಲಿ ಎಂಬುದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ.

ಇತ್ತೀಚಿನ ದಿನಗಳಲ್ಲಿ 'ಗಾಂಧಾರಿ ವಿದ್ಯೆ' ಅಥವಾ 'ಕಣ್ಣಿಗೆ ಬಟ್ಟೆ ಕಟ್ಟಿ



ಓದುವ ಕಲೆ' (ಬಜಥಡಿಚಿಟಿ ಂಥಿಣುತಚಿಣುಂಟಿ/ಃಟುಟಿಜಜಿಂಟಜ ಖಜಚಿಜುಟಿರ) ಎಂಬ ಹೆಸರಿನಲ್ಲಿ ನಡೆಯುತ್ತಿರುವ ತರಬೇತಿಗಳ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳಿವೆ. ಈ ವಿಷಯದ ಬಗ್ಗೆ ವೈಜ್ಞಾನಿಕ ಮತ್ತು ಸಾಮಾಜಿಕ ದೃಷ್ಟಿಕೋನದಿಂದ ಕೆಲವು ಪ್ರಮುಖ ಅಂಶಗಳು ಇಲ್ಲಿವೆ:

ಪುರಾಣ ಗಿಖ ಆಧುನಿಕ ತಂತ್ರ:ಪುರಾಣದಲ್ಲಿ ಗಾಂಧಾರಿಯ ಶಕ್ತಿಯು ದಶಕಗಳ ಕಾಲದ ಇಂದ್ರಿಯ ನಿಗ್ರಹ ಮತ್ತು ತಪಸ್ಸಿನ ಫಲವಾಗಿತ್ತು. ಆದರೆ ಇಂದು ಕೆಲವೇ ದಿನಗಳ ವರ್ಕ್‌ಶಾಪ್‌ಗಳಲ್ಲಿ ಈ ವಿದ್ಯೆಯನ್ನು ಕಲಿಸುತ್ತೇವೆ ಎಂಬ ವಾದವು ಪುರಾಣದ ಮೂಲ ಆಶಯಕ್ಕಿಂತ ಭಿನ್ನವಾಗಿದೆ. ಇವುಗಳನ್ನು ಹೆಚ್ಚಾಗಿ 'ಮಿಡ್‌ಬ್ರೈನ್ ಆಕ್ಟಿವೇಷನ್' ಎಂಬ ಹೆಸರಿನಲ್ಲಿ ಮಾರ್ಕೆಟಿಂಗ್ ಮಾಡಲಾಗುತ್ತಿದೆ.ಇಂದ್ರಿಯಗಳ ತೀಕ್ಷ್ಣತೆ (ಖಜಟಿಂಡಿಥಿ ಅಂಟಿಠಿಜಟಿಚಿಣುಂಟಿ):ನಮ್ಮ ಒಂದು ಇಂದ್ರಿಯ (ಕಣ್ಣು) ಕೆಲಸ ಮಾಡದಿದ್ದಾಗ, ಉಳಿದ ಇಂದ್ರಿಯಗಳು (ಕೇಳುವಿಕೆ, ವಾಸನೆ, ಸ್ಪರ್ಶ) ಹೆಚ್ಚು ಜಾಗೃತಗೊಳ್ಳುತ್ತವೆ. ಕೆಲವು ತರಬೇತಿಗಳಲ್ಲಿ ಮಕ್ಕಳಿಗೆ ವಾಸನೆಯ ಮೂಲಕ (ಔಟಜಿಚಿಛಿಣಂಡಿಥಿ ಜಟಿಜ) ಅಥವಾ ಬಣ್ಣದ ಕಾರ್ಡ್‌ಗಳ ವಿನ್ಯಾಸದ ಸ್ಪರ್ಶದ ಮೂಲಕ ಗುರುತಿಸಲು ಕಲಿಸಲಾಗುತ್ತದೆ. ಆದರೆ ಇದು ಅಕ್ಷರಗಳನ್ನು ಓದುವಷ್ಟು ನಿಖರವಾಗಿರಲು ಸಾಧ್ಯವಿಲ್ಲವೆಂದು ಮೂಲಗಳು ತಿಳಿಸುತ್ತವೆಯಾದರೂ ಮಕ್ಕಳ ಮನಸ್ಸು ಶುದ್ದವಾಗಿರುವುದರಿಂದ ಅವರಿಗೆ ಈ ವಿದ್ಯೆ ಬಹು ಬೇಗ ದಕ್ಕಬಹುದಾಗಿರುವ ವಿಚಾರ ಕೂಡಾ ಕಂಡಿದ್ದೇವೆ.

ವೈಜ್ಞಾನಿಕ ದೃಷ್ಟಿಕೋನ:ವಿಜ್ಞಾನದ ಪ್ರಕಾರ, ಮನುಷ್ಯನ ಮೆದುಳು ಕಣ್ಣಿನ ಸಹಾಯವಿಲ್ಲದೆ ಬಣ್ಣಗಳನ್ನು ಗುರುತಿಸಲು ಅಥವಾ ಅಕ್ಷರಗಳನ್ನು ಓದಲು ಸಾಧ್ಯವಿಲ್ಲ. ಅನೇಕ ತರ್ಕವಾದಿಗಳು ಮತ್ತು ವಿಜ್ಞಾನಿಗಳು ಈ ತರಬೇತಿಗಳನ್ನು ಪರೀಕ್ಷಿಸಿದಾಗ, ಮಕ್ಕಳು ಕಣ್ಣಿನ ಪಟ್ಟಿಯ ಕೆಳಗಿನ ಸಣ್ಣ ಸಂದಿನ ಮೂಲಕ (ಕಜಜಞ-ಚಿ-ಭಂಂ) ನೋಡುತ್ತಿರುವುದು ಪತ್ತೆಯಾಗಿದೆ. ಇಂದ್ರಿಯಾತೀತ ಶಕ್ತಿ (ಇಥಣಡಿಚಿ ಖಜಟಿಂಡಿಥಿ ಕಜಡಿಛಿಜಠಿಣುಂಟಿ – ಇಖಕ) ಇರಬಹುದು ಎಂದು ನಂಬುವ ಒಂದು ವರ್ಗವಿದ್ದರೂ, ಅದಕ್ಕೆ ಈವರೆಗೆ ಯಾವುದೇ ಬಲವಾದ ವೈಜ್ಞಾನಿಕ ಪುರಾವೆಗಳು ಸಿಕ್ಕಿಲ್ಲ.

ಮಕ್ಕಳ ಮೇಲಿನ ಪ್ರಭಾವ:ಮಕ್ಕಳಲ್ಲಿ ಏಕಾಗ್ರತೆ ಮತ್ತು ನೆನಪಿನ ಶಕ್ತಿ ಹೆಚ್ಚಿಸಲು ಯೋಗ, ಪ್ರಾಣಾಯಾಮ ಅಥವಾ ಧ್ಯಾನದಂತಹ ಪದ್ಧತಿಗಳು ಖಂಡಿತಾ ಸಹಕಾರಿ. ಆದರೆ, ಇಂತಹ 'ಪವಾಡ' ಸದೃಶ ವಿದ್ಯೆಗಳನ್ನು ಕಲಿಸುವ ಭರದಲ್ಲಿ ಮಕ್ಕಳಿಗೆ ಸುಳ್ಳು ಹೇಳುವುದನ್ನು ಅಥವಾ ಮೋಸ ಮಾಡುವುದನ್ನು ಕಲಿಸಿದಂತಾಗಬಾರದು ಎಂಬುದು ಶಿಕ್ಷಣ ತಜ್ಞರ ಕಳಕಳಿಯಾಗಿದೆ.

ವಾಣಿಜ್ಯೀಕರಣದ ಎಚ್ಚರಿಕೆ:ಇಂದು ನೂರಾರು 'ಗುರುಗಳು' ಹುಟ್ಟಿಕೊಂಡಿರುವುದು ಈ ಕ್ಷೇತ್ರ ಎಷ್ಟು ವಾಣಿಜ್ಯೀಕರಣಗೊಂಡಿದೆ ಎಂಬುದನ್ನು ತೋರಿಸುತ್ತದೆ. ಪೋಷಕರು ತಮ್ಮ ಮಕ್ಕಳು ಅಸಾಧಾರಣ ಪ್ರತಿಭೆಗಳಾಗಬೇಕು ಎಂಬ ಹಂಬಲದಲ್ಲಿ ದೊಡ್ಡ ಮೊತ್ತದ ಹಣವನ್ನು ಇಂತಹ ತರಗತಿಗಳಿಗೆ ವ್ಯಯಿಸುತ್ತಿದ್ದಾರೆ.

ನಮ್ಮ ಪ್ರಾಚೀನ ವಿದ್ಯೆಗಳಲ್ಲಿ ಅಡಗಿರುವ ಏಕಾಗ್ರತೆ (ಈಂಛಿಣ) ಮತ್ತು ಅಂತಃಪ್ರಜ್ಞೆ (ಖಟಿಣಣುಣುಂಟಿ) ಖಂಡಿತವಾಗಿಯೂ ಗೌರವಾರ್ಹ. ಆದರೆ ಅದನ್ನು ಪವಾಡದಂತೆ ಬಿಂಬಿಸಿ ಹಣ ಮಾಡುವ ದಂದೆಗಳ ಬಗ್ಗೆ ಪೋಷಕರು ಜಾಗರೂಕರಾಗಿರಬೇಕು. ಮಕ್ಕಳಲ್ಲಿ ನೈಸರ್ಗಿಕವಾದ ಸೃಜನಶೀಲತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಇಂತಹ ಅತೀಂದ್ರಿಯ ಶಕ್ತಿಗಳ ಬೆನ್ನತ್ತಿ ಹೋಗುವುದಕ್ಕಿಂತ ಹೆಚ್ಚು ಪ್ರಯೋಜನಕಾರಿ.ಇಂತಹ ವಿಷಯಗಳಲ್ಲಿ 'ನಂಬಿಕೆ' ಮತ್ತು 'ಮೂಢನಂಬಿಕೆ' ನಡುವಿನ ತೆಳುವಾದ ಗೆರೆಯನ್ನು ಗುರುತಿಸುವುದು ಮುಖ್ಯ ಎಂದು ನನಗನ್ನಿಸುತ್ತದೆ.

ಮಕ್ಕಳು ಕಣ್ಣಿಗೆ ಪಟ್ಟಿ ಕಟ್ಟಿದರೂ ಬಣ್ಣಗಳನ್ನು ಗುರುತಿಸುವುದು ಅಥವಾ ಸಂಖ್ಯೆಗಳನ್ನು ಹೇಳುವುದನ್ನು ನೋಡಿದಾಗ ಅದು ಪವಾಡದಂತೆ ಭಾಸವಾಗುವುದು ಸಹಜ. ಆದರೆ ಇದರ ಹಿಂದೆ ಇರುವ ಕೆಲವು ಸಾಧ್ಯತೆಗಳನ್ನು ನಾವು ವಸ್ತುನಿಷ್ಠವಾಗಿ ಗಮನಿಸಬೇಕು:

ತರಬೇತಿಯ ವಿಧಾನ:ಈ ವಿದ್ಯೆಯನ್ನು ಕಲಿಸುವ ಅನೇಕ ಸಂಸ್ಥೆಗಳು ಇದನ್ನು "ಮಿಡ್‌ಬ್ರೈನ್ ಆಕ್ಟಿವೇಷನ್" ಎಂದು ಕರೆಯುತ್ತವೆ. ಆದರೆ ವೈದ್ಯಕೀಯ ವಿಜ್ಞಾನದ ಪ್ರಕಾರ, ಮೆದುಳಿನ ಈ ಭಾಗವು ದೃಷ್ಟಿ ಅಥವಾ ಓದುವಿಕೆಗೆ ನೇರವಾಗಿ ಸಂಬಂಧಿಸಿಲ್ಲ. ಮಕ್ಕಳಿಗೆ ಈ ರೀತಿ "ನೋಡಲು" ಕಲಿಸುವ ಪ್ರಕ್ರಿಯೆಯಲ್ಲಿ ಅವರು ಸುಳ್ಳು ಹೇಳುತ್ತಿದ್ದರೂ ಅದನ್ನು ಪೋಷಕರು "ದೈವಿಕ ಶಕ್ತಿ" ಎಂದು ನಂಬಿ ಪ್ರೋತ್ಸಾಹಿಸಿದಾಗ, ಮಕ್ಕಳು ಅದನ್ನೇ ಮುಂದುವರಿಸುತ್ತಾರೆ.

ವೈಜ್ಞಾನಿಕ ಪರೀಕ್ಷೆಗಳು?:ಯಾವಾಗ ಇಂತಹ ಪ್ರದರ್ಶನ ನೀಡುವ ಮಕ್ಕಳ ಕಣ್ಣಿಗೆ ಹತ್ತಿ ಇಟ್ಟು ವೈದ್ಯಕೀಯ ಟೇಪ್‌ನಿಂದ ಸಂಪೂರ್ಣವಾಗಿ ಗಾಳಿ ಕೂಡ ಹೋಗದಂತೆ ಮುಚ್ಚಲಾಗುತ್ತದೆಯೋ, ಆಗ ಹೆಚ್ಚಿನ ಮಕ್ಕಳಿಗೆ ಬಣ್ಣಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಇದು ಈ ವಿದ್ಯೆಯ ಹಿಂದಿನ ಮಿತಿಯನ್ನು ಎತ್ತಿ ತೋರಿಸುತ್ತದೆ? ಎಂದು ಕೆಲವರ ಅಭಿಪ್ರಾಯವಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ:ಮಕ್ಕಳಲ್ಲಿ ಅದ್ಭುತವಾದ ಕಲಿಯುವ ಹಸಿವಿರುತ್ತದೆ ಮತ್ತು ಅವರ ಮೆದುಳು ಯಾವುದನ್ನಾದರೂ ಬೇಗನೆ ಗ್ರಹಿಸುತ್ತದೆ. ಆದರೆ ಅದನ್ನು "ಅತೀಂದ್ರಿಯ ಶಕ್ತಿ" ಎಂದು ಕರೆದು ವಾಣಿಜ್ಯೀಕರಣ ಮಾಡುವುದು ಸರಿಯಲ್ಲ.

ಇವತ್ತಿನ ಬಹುತೇಕ ಪೋಷಕರನ್ನು ಕಾಡುತ್ತಿರುವ ದೊಡ್ಡ ಪ್ರಶ್ನೆಯಿದು.ನೇರವಾಗಿ ಹೇಳಬೇಕೆಂದರೆ, ಇಂದಿನ ಶಿಕ್ಷಣ ಪದ್ಧತಿಯಲ್ಲಿ ಇಂತಹ ಕೌಶಲಗಳು 'ಅವಶ್ಯಕತೆ'ಗಿಂತ ಹೆಚ್ಚಾಗಿ 'ಆಕರ್ಷಣೆ'ಯಾಗಿ ಕಾಣಿಸುತ್ತಿವೆ. ಇದರ ಬಗ್ಗೆ ಕೆಲವು ಕಟು ಸತ್ಯಗಳು ಇಲ್ಲಿವೆ:

ಏಕಾಗ್ರತೆಗೆ ಸಹಕಾರಿ, ಆದರೆ ಪವಾಡವಲ್ಲ: ಕಣ್ಣು ಮುಚ್ಚಿ ಧ್ಯಾನ ಮಾಡುವುದು ಅಥವಾ ಶ್ರವಣ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಮಕ್ಕಳ ಏಕಾಗ್ರತೆಗೆ (ಈಂಛಿಣ) ಖಂಡಿತಾ ಸಹಾಯ ಮಾಡುತ್ತದೆ. ಆದರೆ, ಅದು "ಪವಾಡ" ಎಂದು ಬಿಂಬಿತವಾದಾಗ ಅಸಲಿ ಕಲಿಕೆಯ ಮೌಲ್ಯ ಗೌಣವಾಗಿಬಿಡುತ್ತದೆ.

ತಪ್ಪು ದಾರಿಗೆ ಎಳೆಯುವ ಭೀತಿ: ಮಕ್ಕಳು ಕಣ್ಣಿನ ಪಟ್ಟಿಯ ಸಂದಿನಿಂದ ನೋಡಿ ಹೇಳುವುದನ್ನು ಕಲಿತರೆ, ಅವರಿಗೆ ಅರಿವಿಲ್ಲದೆಯೇ "ನಾನು ಮೋಸ ಮಾಡಿ ಗೆಲ್ಲಬಹುದು" ಎಂಬ ಭಾವನೆ ಬೆಳೆಯುವ ಅಪಾಯವಿರುತ್ತದೆ. ಇದು ನೈತಿಕ ಶಿಕ್ಷಣಕ್ಕೆ ವಿರುದ್ಧವಾದುದು.

ಒತ್ತಡದ ಹೇರಿಕೆ: ಈಗಾಗಲೇ ಪಠ್ಯಪುಸ್ತಕಗಳ ಹೊರೆಯಿಂದ ಬೆಂಡಾಗಿರುವ ಮಕ್ಕಳಿಗೆ, "ನೀನು ಕಣ್ಣು ಮುಚ್ಚಿ ಓದಬೇಕು, ನೀನೊಬ್ಬ ಸೂಪರ್ ಚೈಲ್ಡ್ ಆಗಬೇಕು" ಎಂದು ಒತ್ತಡ ಹೇರುವುದು ಅವರ ಮಾನಸಿಕ ಆರೋಗ್ಯಕ್ಕೆ ಒಳ್ಳೆಯದಲ್ಲ.

?ಕೊನೆಯದಾಗಿ ಒಂದು ಮಾತು:ಮಕ್ಕಳಿಗೆ ಬೇಕಾಗಿರುವುದು ಅತೀಂದ್ರಿಯ ಶಕ್ತಿಗಿಂತ 'ಆಲೋಚನಾ ಶಕ್ತಿ'. ಕಣ್ಣು ಮುಚ್ಚಿ ಬಣ್ಣ ಗುರುತಿಸುವುದಕ್ಕಿಂತ, ಕಣ್ಣು ತೆರೆದು ಜಗತ್ತಿನ ಸತ್ಯಾಸತ್ಯತೆಗಳನ್ನು ಗುರುತಿಸುವ ವಿವೇಚನೆಯನ್ನು ನಾವು ಅವರಿಗೆ ಕಲಿಸಿಕೊಡಬೇಕಿದೆ. ನೈತಿಕತೆ ಮತ್ತು ಪರಿಶ್ರಮಕ್ಕೆ ಯಾವುದೂ ಪರ್ಯಾಯವಿಲ್ಲ.?

ಈ ವಿಷಯದಲ್ಲಿ "ಗುರುಗಳು" ಎಂದು ಕರೆಸಿಕೊಳ್ಳುವವರು ದಾರಿ ತಪ್ಪಿಸುತ್ತಿದ್ದಾರೋ ಅಥವಾ ದಾರಿ ತೋರಿಸುತ್ತಿದ್ದಾರೋ ಎಂಬುದನ್ನು ಅವರ ಸಂಭಾವನೆ ಮತ್ತು ಅವರು ನೀಡುವ ವೈಜ್ಞಾನಿಕ ಪುರಾವೆಗಳ ಆಧಾರದ ಮೇಲೆ ನಾವು ನಿರ್ಧರಿಸಬೇಕಾಗುತ್ತದೆ.

?ಈ ಕಾಲದಲ್ಲೂ ಇಂಥ ವಿದ್ಯೆ ಸಾಧಿಸಬಹುದೇ??ಎಂಬ ದ್ವಂದ್ವ ಎಲ್ಲರನ್ನೂ ಕಾಡುವುದು ಸ್ವಾಭಾವಿಕ! ಇಂತಹ "ಅತಿಮಾನುಷ ಶಕ್ತಿಗಳ" ಅಸಲಿಯತ್ತನ್ನು ಬಿಚ್ಚಿಡಲು ಇರುವ ಅತಿದೊಡ್ಡ ಸಾಕ್ಷಿ ನೀವೂ ತಿಳಿಯಬೇಕಿದೆ.

ಜೇಮ್ಸ್ ರಾಂಡಿ ಅವರ 'ಔಟಿಜ ಒಟಟುಂಟಿ ಆಂಟಟಚಿಡಿ ಕಚಿಡಿಚಿಟಿಂಡಿಟಚಿಟ ಉಛಿಟಟಜಟಿರಜ' ದಶಕಗಳ ಕಾಲ ತೆರೆದಿತ್ತು. ಜಗತ್ತಿನ ಮೂಲೆಮೂಲೆಯಿಂದ ಸಾವಿರಾರು ಜನರು "ನಮಗೆ ದಿವ್ಯದೃಷ್ಟಿ ಇದೆ", "ನಾವು ಗಾಳಿಯಲ್ಲಿ ತೇಲುತ್ತೇವೆ", "ಕಣ್ಣು ಮುಚ್ಚಿ ಓದುತ್ತೇವೆ" ಎಂದು ಬಂದಿದ್ದರು. ಆದರೆ ವೈಜ್ಞಾನಿಕವಾಗಿ, ಕಟ್ಟುನಿಟ್ಟಾದ ಪರೀಕ್ಷಾ ವ್ಯವಸ್ಥೆಯಲ್ಲಿ (ಅಂಟಣಡಿಂಟಟಜಜ ಇಟಿತುಡಿಂಟಿಟಜಟಣ) ಒಬ್ಬರೇ ಒಬ್ಬರು ತಮ್ಮ ಶಕ್ತಿಯನ್ನು ಸಾಬೀತುಪಡಿಸಲು ಸಾಧ್ಯವಾಗಲಿಲ್ಲ.ಇದೇ ಮಾದರಿಯಲ್ಲಿ ಅಮೆರಿಕದ ಅಜಟಣಜಡಿ ಜಿಂಡಿ ಖಟಡಣುಡಿಥಿ ಸಂಸ್ಥೆ ಇತ್ತೀಚೆಗೆ ತನ್ನ ಬಹುಮಾನವನ್ನು 5 ಲಕ್ಷ ಡಾಲರ್‌ಗೆ ಹೆಚ್ಚಿಸಿದ್ದು, 23 ವರ್ಷಗಳಲ್ಲಿ ಒಬ್ಬ ಅರ್ಜಿದಾರರೂ ಮೊದಲ ಹಂತದ ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲ.

ಇದರ ಬಗ್ಗೆ ಕೆಲವು ಆಸಕ್ತಿದಾಯಕ ಸಂಗತಿಗಳು ಇಲ್ಲಿವೆ:ಭಾರತ ಸರ್ಕಾರ ನೇರವಾಗಿ ಇಂತಹ ಬಹುಮಾನ ಘೋಷಿಸಿಲ್ಲ. ಆದರೆ ವಿಶ್ವದ ಮಟ್ಟದಲ್ಲಿ ಇಂತಹ ಬಹುಮಾನಗಳು ನಿಜವಾಗಿಯೂ ಇವೆ.

ಮ್ಯಾಜಿಕ್ ವರ್ಸಸ್ ಪವಾಡ: ಜೇಮ್ಸ್ ರಾಂಡಿ ಸ್ವತಃ ಒಬ್ಬ ಪ್ರಖ್ಯಾತ ಇಂದ್ರಜಾಲಿಯಾಗಿದ್ದರು (ಒಚಿರುಛಿಚಿಟಿ). ಹಾಗಾಗಿ, ಕೈಚಳಕದ ಮೂಲಕ ಜನರನ್ನು ಹೇಗೆ ಮರುಳು ಮಾಡಬಹುದು ಎಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಈ "ಗಾಂಧಾರಿ ವಿದ್ಯೆ" ಅಥವಾ "ಮಿಡ್‌ಬ್ರೈನ್ ಆಕ್ಟಿವೇಷನ್" ಕಲಿಸುವವರು ಮಾಡುವ ತಂತ್ರಗಳನ್ನು ಅವರು ಸುಲಭವಾಗಿ ಹಿಡಿದುಹಾಕುತ್ತಿದ್ದರು.

ಪಾರದರ್ಶಕತೆಯ ಕೊರತೆ: ಇಂತಹ ವಿದ್ಯೆ ಕಲಿಸುವ ಗುರುಗಳು ಯಾವಾಗಲೂ ತಮ್ಮದೇ ಆದ "ಅನುಕೂಲಕರ ವಾತಾವರಣ"ದಲ್ಲಿ ಪ್ರದರ್ಶನ ನೀಡುತ್ತಾರೆ. ಆದರೆ ವಿಜ್ಞಾನಿಗಳು ಅಥವಾ ತರ್ಕವಾದಿಗಳು ಬಂದು "ನಮ್ಮ ನಿಯಮದಂತೆ ಪರೀಕ್ಷೆ ಕೊಡಿ" ಎಂದಾಗ, "ನಮ್ಮ ಶಕ್ತಿ ದೈವಿಕವಾದುದು, ಇದನ್ನು ಪರೀಕ್ಷಿಸಬಾರದು" ಅಥವಾ "ಇಲ್ಲಿ ನೆಗೆಟಿವ್ ಎನರ್ಜಿ ಇದೆ, ಹಾಗಾಗಿ ಕೆಲಸ ಮಾಡುತ್ತಿಲ್ಲ" ಎಂಬ ನೆಪಗಳನ್ನು ಹೇಳುತ್ತಾರೆ.

ಯಾವುದೇ ವಿದ್ಯೆಯನ್ನಾಗಲೀ, ಒಬ್ಬ ಯೋಗ್ಯ ಗುರುವಿನ ಆಶ್ರಯದಲ್ಲಿ, ಅವರ ಸತ್ಯಾಸತ್ಯತೆಯನ್ನು ತಿಳಿದುಕೊಂಡು ಅವರಲ್ಲಿ ಜ್ಞಾನ ಪಡೆಯುವುದು ಒಳ್ಳೆಯದು ಎಂಬುವುದು ಅಂತಿಮವಾಗಿ ನನ್ನ ಅಭಿಪ್ರಾಯ.

ಹಣದ ಆಮಿಷ: ಸಾಮಾಜಿಕ ಮಾಧ್ಯಮಗಳಲ್ಲಿ ತಿಳಿಸಿರುವಂತೆ, ಕೋಟ್ಯಂತರ ರೂಪಾಯಿ ಬಹುಮಾನ ಕಾಯುತ್ತಿದ್ದರೂ, ಈ ವಿದ್ಯೆ ಕಲಿಸುವ ಯಾವೊಬ್ಬ 'ಗುರು' ಕೂಡ ಆ ಸವಾಲನ್ನು ಸ್ವೀಕರಿಸಿ ಹಣ ಗೆಲ್ಲಲು ಹೋಗುತ್ತಿಲ್ಲ. ಬದಲಿಗೆ, ಸಾಮಾನ್ಯ ಪೋಷಕರಿಂದ ಸಾವಿರಾರು ರೂಪಾಯಿ ಫೀಸು ಪಡೆದು ತರಗತಿ ನಡೆಸುತ್ತಿದ್ದಾರೆ. ಇದು ಅವರಲ್ಲಿರುವ ಆತ್ಮವಿಶ್ವಾಸದ ಕೊರತೆಯನ್ನು ತೋರಿಸುತ್ತದೆ.

"ಸತ್ಯಕ್ಕೆ ಪರೀಕ್ಷೆಯ ಭಯವಿಲ್ಲ, ಸುಳ್ಳಿಗೆ ಜಯಿಸುವ ಧೈರ್ಯವಿಲ್ಲ" ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಕೋಟ್ಯಂತರ ರೂಪಾಯಿ ಬಹುಮಾನ ಕಾಯುತ್ತಿದೆ, ಆದರೆ ಯಾರೂ ತೆಗೆದುಕೊಂಡಿಲ್ಲ ಎಂದರೆ, ಇದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿ ಉಳಿದಿದೆ!

---

# `ಕಣ್ಣೀರು ತಂದ ವಿಜಯ'



| ಡಾ.ಸುಧಾಕರ.ಜಿ.ಲಕ್ಕವಳ್ಳಿ



ಸ್ಫೂರ್ತಿ ಸುಧೆ - 03

ಬರಿಗಾಲಿನ ಹೆಜ್ಜೆಯೊಂದು ರಾಷ್ಟ್ರಪತಿ ಭವನದ ರೇಷ್ಮೆ ಹಾಸಿನ ಮೇಲೆ ಮೂಡಿದಾಗ ಇಡೀ ಜಗತ್ತೇ ಒಂದು ಕ್ಷಣ ಸ್ತಬ್ಧವಾಗಿತ್ತು. ಅಕ್ಷರ ಜ್ಞಾನವಿಲ್ಲದ, ಬಡತನದ ಬೇಗೆಯಲ್ಲಿ ಬೆಂದ, ಸಮಾಜದ ದೃಷ್ಟಿಯಲ್ಲಿ ವಿಧವೆ ಎಂದು ಮೂಲೆಗುಂಪಾಗಬೇಕಿದ್ದ ಒಬ್ಬ ಒಂಟಿ ಮಹಿಳೆ,ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ಸ್ವೀಕರಿಸಲು ಹೆಜ್ಜೆ ಹಾಕುತ್ತಿದ್ದರೆ ಅದು ಕೇವಲ ಒಬ್ಬ ವ್ಯಕ್ತಿಯ ನಡಿಗೆಯಾಗಿರಲಿಲ್ಲ; ಅದು ಶತಮಾನಗಳ ಕಟ್ಟುಪಾಡುಗಳನ್ನು ಪುಡಿಗಟ್ಟಿದ ಛಲದ ನಡಿಗೆಯಾಗಿತ್ತು. ಆಕೆಯ ಹೆಸರು ತುಳಸಿ ಗೌಡ. ಅಂಕೋಲಾ ತಾಲ್ಲೂಕಿನ ಹೊನ್ನಳ್ಳಿಯ ಹಾಲಕ್ಕಿ ಬುಡಕಟ್ಟು ಸಮುದಾಯದ ಈ ವೃಕ್ಷಮಾತೆಯ ಬದುಕು ಕಣ್ಣೀರಿನಿಂದ ಕಾವ್ಯವಾಗಿ ಬದಲಾದ ರೋಚಕ ಕಥೆ.

ತುಳಸಿ ಗೌಡರ (1937–2024) ಜೀವನದ ಆರಂಭವೇ ಒಂದು ಸುಡುವ ನೋವಿನ ಕಥೆ.

ಎರಡನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡ ಬಾಲಕಿ, ಶಾಲೆಗೆ ಹೋಗುವ ವಯಸ್ಸಿನಲ್ಲಿ ತಾಯಿಯೊಂದಿಗೆ ಕೂಲಿ ಕೆಲಸಕ್ಕೆ ಹೋದವರು. ಹಸಿವು ಮತ್ತು ಬಡತನದ ನಡುವೆ ಜೀವನ ಸಾಗಿಸುತ್ತಿರುವಾಗಲೇ ದಾಂಪತ್ಯಕ್ಕೆ ಅಡಿ ಇಟ್ಟರು. ಆದರೆ ವಿಧಿ ಮತ್ತೆ ಕ್ರೂರವಾಯಿತು. ಅಲ್ಪಪ್ರಾಯದಲ್ಲೇ ಪತಿಯನ್ನು ಕಳೆದುಕೊಂಡಾಗ ಸಮಾಜ ಅವರ ಮುಂದೆ ಹತ್ತಾರು ಪ್ರಶ್ನೆಗಳನ್ನು ಎಸೆದಿತ್ತು. ಒಬ್ಬ ಒಂಟಿ ಹೆಣ್ಣು ಏನು ಮಾಡಬಲ್ಲಳು? ಎಂಬ ಹಂಗಿನ ಮಾತುಗಳ ನಡುವೆ ಅವರು ಆಯ್ದುಕೊಂಡಿದ್ದು ಮೌನ ಮತ್ತು ಮಣ್ಣಿನ ಸೇವೆ. ಅಂದು ಅವರು ಸುರಿಸಿದ ಪ್ರತಿ ಹನಿ ಕಣ್ಣೀರು ಭೂತಾಯಿಯ ಒಡಲನ್ನು ಸೇರಿ ಸಸಿಗಳಾಗಿ ಚಿಗುರೊಡೆದವು. ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಸೇರಿದ ತುಳಸಿ ಗೌಡರು ಕಳೆದ ಆರು ದಶಕಗಳಲ್ಲಿ ನೆಟ್ಟು ಪೋಷಿಸಿದ ಸಸಿಗಳ ಸಂಖ್ಯೆ ಬರೋಬ್ಬರಿ 30,000ಕ್ಕೂ ಹೆಚ್ಚು! ಯಾವುದೇ ವಿಶ್ವವಿದ್ಯಾಲಯದ ಪದವಿ ಇಲ್ಲದಿದ್ದರೂ, ಕಾಡಿನ ಪ್ರತಿ ಮರ, ಪ್ರತಿ ಗಿಡದ ನಾಡಿಮಿಡಿತ ಅವರಿಗೆ ಅರಿವಿತ್ತು.

ಯಾವ ಬೀಜವನ್ನು ಯಾವ ಕಾಲದಲ್ಲಿ ಬಿತ್ತಬೇಕು, ಯಾವ ಸಸ್ಯಕ್ಕೆ ಯಾವ ಔಷಧೀಯ ಗುಣವಿದೆ ಎಂಬ ಅವರ ಅಪ್ರತಿಮ ಜ್ಞಾನವನ್ನು ಕಂಡು ಆಧುನಿಕ ವಿಜ್ಞಾನಿಗಳೇ ಬೆರಗಾದರು. ಅದಕ್ಕೇ ಜಗತ್ತು ಅವರನ್ನು ಕಾಡಿನ ವಿಶ್ವಕೋಶ ಎಂದು ಗೌರವಿಸಿತು. ಒಂಟಿತನದ ಕತ್ತಲಲ್ಲಿ ಕರಗಿ ಹೋಗಬೇಕಿದ್ದ ಜೀವ, ಇಡೀ ನಾಡಿಗೆ ಹಸಿರು ಹೊದಿಕೆ ಹೊದಿಸುವ ಚೈತನ್ಯವಾಗಿ ಬೆಳೆದಿತ್ತು.

ಇಂದಿನ ಯುವತಿಯರಿಗೆ ತುಳಸಿ ಗೌಡರ ಜೀವನವು ಕೇವಲ ಒಂದು ಸಾಧನೆಯ ಕಥೆಯಲ್ಲ, ಅದೊಂದು ದಿಕ್ಸೂಚಿ. ಸಣ್ಣ ಸೋಲಿಗೂ ಧೃತಿಗೆಡುವ, ಸಾಮಾಜಿಕ ಜಾಲತಾಣಗಳ ಕೃತಕ ಜಗತ್ತಿನಲ್ಲಿ ಬದುಕು ಹುಡುಕುವ ಇಂದಿನ ಪೀಳಿಗೆಗೆ ನೈಜ ಸಾಧನೆ ಎಂದರೆ ಏನು ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ. ಒಬ್ಬ ಮಹಿಳೆ ಮನಸ್ಸು ಮಾಡಿದರೆ ತನ್ನ ನೋವನ್ನೇ ಶಕ್ತಿಯನ್ನಾಗಿ ಮಾಡಿಕೊಂಡು ಸೃಷ್ಟಿಯನ್ನೇ ಸಲಹಬಲ್ಲಳು ಎಂಬುದಕ್ಕೆ ಇವರಿಗಿಂತ ದೊಡ್ಡ ಉದಾಹರಣೆ ಬೇಕಿಲ್ಲ. ಸೌಂದರ್ಯ ಅಡಗಿರುವುದು ಮುಖದ ಮೇಲಲ್ಲ, ನಾವು ಮಾಡುವ ಕಾಯಕದಲ್ಲಿದೆ ಎಂಬ ಸತ್ಯಕ್ಕೆ ಇವರ ಬರಿಗಾಲಿನ ಹೆಜ್ಜೆಗಳೇ ಸಾಕ್ಷಿ.

ನಮ್ಮ ಬದುಕಿನ ಕಣ್ಣೀರು ನಮ್ಮನ್ನು ಕುಗ್ಗಿಸಬಾರದು; ಅದು ಕರ್ತವ್ಯದ ಹಾದಿಯಲ್ಲಿ ಹೊಳೆಯುವ ಮುತ್ತುಗಳಾಗಬೇಕು. ತುಳಸಿ ಗೌಡರಂತೆ ನಿಸ್ವಾರ್ಥ ಭಾವದಿಂದ ನಾವು ಮಾಡುವ ಕೆಲಸ ನಮ್ಮನ್ನು ಹುಡುಕಿಕೊಂಡು ಗೌರವ ತರುವಂತೆ ಮಾಡುತ್ತದೆ. ಸಂಕಷ್ಟಗಳ ಸುಳಿಯಲ್ಲಿ ಸಿಲುಕಿದಾಗ ಆತ್ಮವಿಶ್ವಾಸದ ದೀಪವನ್ನು ಹಚ್ಚಿ, ಗುರಿಯತ್ತ ಸಾಗುವ ಛಲ ಇಂದಿನ ಪ್ರತಿ ಹೆಣ್ಣುಮಗಳ ಉಸಿರಾಗಲಿ. ಕಣ್ಣೀರನ್ನು ಮೀರಿ ನಿಂತ ಆ ವಿಜಯದ ನಗು ನಮ್ಮೆಲ್ಲರಿಗೂ ಸದಾ ಸ್ಫೂರ್ತಿಯಾಗಿರಲಿ.

---

# ಅವರವರ ಭಾವಕ್ಕೆ



| ವೀಣಾ ಹೇಮಂತ್‌ಗೌಡ ಪಾಟೀಲ್

ಹಿಂದಿ ಶಿಕ್ಷಕರು.... ಈ ಹಿಂದೆ ನಮಗೆ ತೃತೀಯ ಭಾಷೆಯನ್ನು ಬೋಧಿಸುವ ಶಿಕ್ಷಕರು ಎಂದು ಮಾನ್ಯತೆ ಕೊಡುತ್ತಿರಲಿಲ್ಲ ಅಯ್ಯೋ ನಿಮಗೇನ್ರೀ ಹಿಂದಿ ಥರ್ಡ್ ಲ್ಯಾಂಗ್ವೇಜ್.ಆರಾಮಾಗಿ ಪಾಸ್ ಮಾಡಿಬಿಡ್ತಾರೆ. ಕಷ್ಟ ಇರೋದು ನಮ್ಮ ಮ್ಯಾತ್ಸ್, ಸೈನ್ಸ್ ಸಬ್ಜೆಕ್ಟ್ ಗಳಲ್ಲಿ ಮತ್ತೆ ಇಂಗ್ಲಿಷ ಕಲಿಸುವುದರಲ್ಲಿ ಅಂತ ನೈಸ್ ಆಗಿ ಮಾತಾಡಿ ಬೇರೆ ವಿಷಯಗಳನ್ನು ಕಲಿಸುವ ಶಿಕ್ಷಕರು ನಮ್ಮ ಪಾಠದ ಅವಧಿಗಳನ್ನು ಹೆಡ್ ಮಾಸ್ಟರ್ ಮೂಲಕ ಕಸಿದು ತಾವು ಬಳಸಿಕೊಳ್ಳುತ್ತಿದ್ದರು.

ಇದೀಗ ಅಂತಗಳೇ ಬೇಡ ಕೇವಲ ಗ್ರೇಡ್ ಕೊಟ್ಟರೆ ಸಾಕು ಎಂದು ಹೇಳಿದ ಮೇಲೆ ಮುಗಿದೇ ಹೋಯಿತು ಈ ಮೊದಲೇ ನಮಗೆ ಪಲ್ಲಬೇಕಾದ ಮರ್ಯಾದೆ ಸಿಗದೇ ತುಂಬಾ ಸದರವಾಗಿ ನಮ್ಮನ್ನು ಕಾಣುತ್ತಿದ್ದರು. ಇದೀಗ ಅಂಕಗಳ ಬದಲಾಗಿ ಗ್ರೇಡ್ ಕೊಟ್ಟರೆ ಮುಗಿದೇ ಹೋಯಿತು.... ನಾವು ಶಿಕ್ಷಕರು ಇದ್ದೂ ಸತ್ತಂತೆ. ಆಟಕ್ಕುಂಟು ಲೆಕ್ಕಕ್ಕಿಲ್ಲ ಅನ್ನೋ ರೀತಿಯಲ್ಲಿ ನಮ್ಮನ್ನು ಕಡೆಗಣಿಸುತ್ತಾರೆ.ಮಕ್ಕಳು ಕೂಡ ನಮಗೆ ಮರ್ಯಾದೆ ಕೊಡುವುದಿಲ್ಲ... ಕಲಿಸುವ ವಿಷಯಕ್ಕೆ ಮಾನ್ಯತೆ ಇಲ್ಲದೆ ಹೋದ ಮೇಲೆ ವಿಷಯವನ್ನು ಬೋಧಿಸುವ ಶಿಕ್ಷಕರಿಗೆ ಇನ್ನೆಂಥ ಮರ್ಯಾದೆ ? ಅಂತ ನಮ್ಮನ್ನ ತುಂಬಾ ಸದರವಾಗಿ ಕಾಣುತ್ತಾರೆ.

ಹೆಡ್ ಮಾಸ್ಟರ್... ಹಿಂದಿಗೇನು ಅಂಕ ಕೊಡಬೇಕೇ? ಇಲ್ವಲ್ಲ! ಪಾಸ್ ಆಗೋ ಅಷ್ಟು ಬರೆದೆ ಬರೀತಾರೆ ... ಸ್ವಲ್ಪ ಹೊಂದಾಣಿಕೆ ಮಾಡ್ಕೋಬೇಕು ಸರ್/ಮೇಡಂ. ಅವರ ಸಿಲಬಸ್ ತುಂಬಾ ಉಳಿದು ಹೋಗಿದೆ. ಅದನ್ನ ಕವರ್ ಮಾಡೋದಕ್ಕೆ ಅವರಿಗೆ ಒಂದಷ್ಟು ಹೆಚ್ಚಿನ ಶಾಲಾ ಅವಧಿಗಳು ಬೇಕು.... ಕಿರಿಕಿರಿ ಮಾಡ್ದೆ ಬಿಟ್ಕೊಟ್ಬಿಡಿ ಪಾ. ಅಕಸ್ಮಾತ್ ಮ್ಯಾತ್ಸ್, ಸೈನ್ಸ್ ಇಂಗ್ಲಿಷ್ ಅಲ್ಲಿ ಮಾರ್ಕ್ಸ್ ಕಡಿಮೆ ಬಂದರೆ ಪಾಲಕರು ನಮ್ಮ ವಿರುದ್ಧ ಹರಿಹಾಯ್ತಾರೆ. ಶಾಲೆಯ ರೆಪ್ಯುಟೇಶನ್ ಹಾಳಾಗುತ್ತೆ ನಾವೆಲ್ಲರೂ ಒಂದೇ ಶಾಲೆಯಲ್ಲಿ ಕೆಲಸ ಮಾಡ್ತಾ ಇರೋರು ಒಂದೇ ಕುಟುಂಬದ ಹಾಗೆ ಅಲ್ವೇ ಪರಸ್ಪರ ಹೊಂದಾಣಿಕೆ ತುಂಬಾ ಅಗತ್ಯ. ಈ ವಿಷಯದ ಬಗ್ಗೆ ಹಿರಿಯರಾದ ನಿಮಗೆ ನಾನು ಹೆಚ್ಚು ಹೇಳಬೇಕಾಗಿಲ್ಲ ಅಲ್ವಾ? ಅವರಿಗೆ ನಿಮ್ಮ ಒಂದಷ್ಟು ಪಿರಿಯಡ್ ಗಳನ್ನು ಬಿಟ್ಟು ಕೊಡಿ.

ವಿದ್ಯಾರ್ಥಿಗಳು... ಗ್ರೇಡ್ ಕೊಡಬೇಕು, ಅಂಕ ಕೊಡಬೇಕು ಅಂತ ತಮ್ಮಲ್ಲೇ ಕಿತ್ತಾಡ್ತಾರೆ. ನಮಗೆ ಅತ್ತ ಓದಕ್ಕು ಆಗದೇ ಇತ್ತ ಆರಾಮಾಗಿ ಇರೋಕು ಬಿಡದೆ ತಲೆ ತಿಂತಾರೆ. ಯಾರಿಗೆ ಬೇಕಪ್ಪಾ ಈ ಗೋಳು. ಮನೆಯಲ್ಲಿ ಅಪ್ಪ ಅಮ್ಮ ಸೈನ್ಸ್ ಮ್ಯಾತ್ಸಲ್ಲಿ ಚೆನ್ನಾಗಿ ಮಾರ್ಕ್ಸ್ ತೆಗೀದೆ ಇದ್ರೆ ಒಳ್ಳೆ ಕಾಲೇಜಲ್ಲಿ ಅಡ್ಮಿಷನ್ ಸಿಗಲ್ಲ ಅಂತ ಹೇಳ್ತಾರೆ. ಯಾವುದನ್ನು ಓದಬೇಕು ಯಾವುದನ್ನು ಬಿಡಬೇಕು ಅಂತ ಗೊತ್ತಾಗ್ದೆ ತಲೆ ಕೆಟ್ಟು ಕೆರ ಹಿಡಿದು ಹೋಗುತ್ತೆ... ಯಾಕಾದ್ರೂ ಈ ಪರೀಕ್ಷೆಗಳು ಬರುತ್ತವೋ ನನಗಂತೂ ಗೊತ್ತಿಲ್ಲ. ನಾನೇನಾದ್ರೂ ಎಜುಕೇಶನ್ ಮಿನಿಸ್ಟರ್ ಆದರೆ ಮೊದಲು ಈ ಪರೀಕ್ಷೆಗಳನ್ನ ಬ್ಯಾನ್ ಮಾಡ್ತೀನಿ.




ಪಾಲಕರು.... ಅಯ್ಯೋ ಮಕ್ಕಳು ಸಬ್ಜೆಕ್ಟ್ ನಲ್ಲಿ ಒಳ್ಳೆ ಮಾರ್ಕು ತೆಗೆದರೆ ಸಾಕು ಲ್ಯಾಂಗ್ವೇಜ್ ಅಲ್ಲಿ ಪಾಸ್ ಆದ್ರೆ ಸಾಕು ಅನ್ನೋ ಪರಿಸ್ಥಿತಿ ಇರುವಾಗ ಮತ್ತೆ ಹಿಂದಿ ಪರೀಕ್ಷೆ ಕುರಿತು ತಗಾದೆ ಯಾಕೆ ? ಬೇರೆ ವಿಷಯದಲ್ಲಿ ಒಳ್ಳೆ ಸ್ಕೋರ್ ಮಾಡಬೇಕು ಅಂದ್ರೆ ಮಕ್ಕಳು ನೆಮ್ಮದಿಯಿಂದ ಓದುವಂತ ಪರಿಸ್ಥಿತಿ ಇರಬೇಕು. ಸುಮ್ನೆ ಕೋರ್ಟ್ ಮೆಟ್ಟಿಲು ಹತ್ತಿ ಕೂತ್ಬಿಟ್ಟಿದ್ದಾರೆ ಇವರು. ಮಕ್ಕಳಿಗೆ ಅದೆಷ್ಟು ತೊಂದ್ರೆ ನೋಡಿ !

ಮತ್ತೆ ಕೆಲ ಪಾಲಕರು ಹಿಂದಿ ಪರವಾಗಿ... ಬೇರೆ ಬೇರೆ ರಾಜ್ಯದ ಜನರ ಜೊತೆ ಸಂವಹನ ನಡೆಸುವಾಗ ನಮ್ಮ ರಾಷ್ಟ್ರೀಯ ಭಾಷೆ ಹಿಂದಿ ಬೇಕೇ ಬೇಕು ಅಲ್ವಾ. ಹಳ್ಳಿಗಳಲ್ಲಿ ಹೋಗಿ ನಾವು ಇಂಗ್ಲೀಷಲ್ಲಿ ಮಾತಾಡ್ಸಕಾಗುತ್ತಾ ಅಥವಾ ಕೈ ಸನ್ನೆ, ಬಾಯಿ ಸನ್ನೆ ಮಾಡಕ್ಕಾಗುತ್ತಾ. ಹಿಂದಿ ಭಾಷೆಗೆ ಅಂಕಗಳನ್ನ ಕೊಡೋದ್ರಿಂದ ಮಕ್ಕಳು ತುಸು ಹೆಚ್ಚು ಜವಾಬ್ದಾರಿಯಿಂದ ಓದ್ಕೋತಾರೆ. ಅದೂ ಅಲ್ದೆ ಅಂತರಾಷ್ಟ್ರೀಯ ಭಾಷೆ ಅಂತ ಇಂಗ್ಲಿಷಿಗೆ ನಾವು ಮಾನ್ಯತೆ ಕೊಡುವಾಗ ನಮ್ಮ ದೇಶದ ರಾಷ್ಟ್ರಭಾಷೆ ಹಿಂದಿಗೆ ಯಾಕ್ರಿ ಕೊಡಬಾರದು.

ನಾವೆಲ್ಲ ಚಿಕ್ಕವರಿದ್ದಾಗ ಕಡ್ಡಾಯವಾಗಿ ಹಿಂದಿ ಕಲಿತಿರೋದ್ರಿಂದ ತಾನೇ ಇವತ್ತಿಗೆ ಇಷ್ಟೊಂದು ಚೆನ್ನಾಗಿ ಬೇರೆ ಭಾಷೆ ಮಾತಾಡುವ ಪ್ರದೇಶಗಳಿಗೆ ಹೋದಾಗ ಮ್ಯಾನೇಜ್ ಮಾಡೋಕೆ ಸಾಧ್ಯ ಆಗ್ತಾ ಇರೋದು.

ಅದಲ್ದೆ ಹಿಂದಿ ನಮ್ಮ ರಾಷ್ಟ್ರೀಯಭಾಷೆ ನಮ್ಮ ರಾಷ್ಟ್ರಭಾಷೆಯಲ್ಲಿ ಇರುವ ಕಲೆ, ಸಾಹಿತ್ಯ, ಸಾಂಸ್ಕೃತಿಕ ಪರಂಪರೆ, ಭಾಷೆ, ಇತಿಹಾಸ ಇವುಗಳನ್ನು ಸಾದ್ಯಂತವಾಗಿ ಅರಿಯಲಾದ್ರೂ ನಮಗೆ ಹಿಂದಿ ಭಾಷೆ ಕಲಿಕೆ ಅಗತ್ಯ ಅಲ್ಲವೇ ?

ದೂರ ಬೇರೆ ರಾಜ್ಯಗಳಲ್ಲಿ ದೇಶಗಳಲ್ಲಿ ಒಂದು ವಿದೇಶಿ ಭಾಷೆ ಅಂತ ನಮ್ಮ ಕನ್ನಡವನ್ನು ಪಾಠ ಮಾಡಿದ್ರೆ ಅದನ್ನ ಪೇಪರ್ಗಳಲ್ಲಿ ಹೈಲೈಟ್ ಮಾಡುವ ನಾವು ನಮ್ಮದೇ ದೇಶದಲ್ಲಿ ನಮ್ಮದೇ ರಾಷ್ಟ್ರಭಾಷೆಯನ್ನು ಕಡೆಗಣಿಸುವುದಾದರೂ ಏಕೆ ?

ಸಾರ್ವಜನಿಕರು.. ಅಯ್ಯೋ ನಮ್ಮ ಕಾಲದಲ್ಲಿ ಹೀಗೆಲ್ಲ ಇರ್ಲಿಲ್ಲ ನಾವೆಲ್ಲಾ ಕಡ್ಡಾಯವಾಗಿ ಹಿಂದಿ ಭಾಷೆಯನ್ನು ಕಲಿತಿದ್ವಿ ಅದು ಈಗ ಬದುಕೋಕೆ ಉಪಯೋಗಕ್ಕೆ ಬಂತು. ಮಕ್ಕಳು ಹಿಂದಿಯನ್ನ ಭಾಷೆಯಾಗಿ ಕಲಿತರೆ ಸಾಕು , ಮಾರ್ಕು ಗೀರ್ಕು ಇದರ ಬಗ್ಗೆ ತಲೆಕೆಡಿಸಿಕೊಳ್ಳೋದಕ್ಕೆ ಸರ್ಕಾರ, ಶಿಕ್ಷಣ ಇಲಾಖೆ ಇದೆ ಅವರು ನೋಡ್ಕೋತಾರೆ ಬಿಡಿ....ಅವರವರೇ ಹೊಡೆದಾಡಿಕೊಂಡು ಒಂದು ಪರಿಹಾರ ಕಂಡುಹಿಡಿಯುತ್ತಾರೆ ಅದೂ ಅಲ್ದೆ ಈಗ ನಮ್ಮ ಮಕ್ಕಳೇನು ಶಾಲೆಯಲ್ಲಿ ಓದ್ತಾ ಇಲ್ವಲ್ಲ. ನಮಗೆ ಏಕೆ ಇಲ್ಲದ ತಲೆನೋವು ?

ಲೇಖನ ಸರಣಿ ಒಂದು

ಹಿಂದಿ ಭಾಷೆ....ಭರ್ತಿ 150 ಕೋಟಿ ಜನಸಂಖ್ಯೆ ಇರೋ ದೇಶದ ರಾಷ್ಟ್ರಭಾಷೆ ನಾನು. ದೂರ ವಿದೇಶದಿಂದ ಬಂದಿರೋ ಇಂಗ್ಲಿಷ್ ಭಾಷೆಯನ್ನ ಪುರಸ್ಕರಿಸುವ ನಮ್ಮ ಜನ ರಾಷ್ಟ್ರಭಾಷೆಯಾದ ನನ್ನನ್ನು ತಿರಸ್ಕರಿಸುವುದು ಯಾವ ನ್ಯಾಯ ? ನನ್ನನ್ನು ಒಂದು ಭಾಷೆಯಾಗಿ ಶಾಲೆ,ಕಾಲೇಜುಗಳಲ್ಲಿ ಕಲಿಸುತ್ತಾರಷ್ಟೇ. ಹಾಗೆಯೇ ಪರೀಕ್ಷೆಗಳನ್ನು ತೆಗೆದುಕೊಳ್ಳುವುದರಲ್ಲಿ ಏನು ತಪ್ಪಿದೆ ? ಅಂಕಗಳನ್ನ ಕೊಡದೆ ಕೇವಲ ಗ್ರೇಡ್ ಮೂಲಕ ಪಾಸು ಮಾಡಿಸುವುದಾದರೆ ಕಲಿಯುವ ಮಕ್ಕಳಿಗೆ, ಕಲಿಸುವ ಶಿಕ್ಷಕರಿಗೆ ಭಾಷೆಯ ಕುರಿತು ಅದೆಷ್ಟು ಮಮಕಾರ ಉಳಿಯಲು ಸಾಧ್ಯ. ಅಂಕಗಳಿಗಾಗಿ ಕಲಿಯುವಾಗಲೇ ಅಷ್ಟೇನೂ ಆಸಕ್ತಿ ತೋರದೆ ಇದ್ದ ಮಕ್ಕಳು ಮುಂದೆ ಬದುಕಿನಲ್ಲಿ ಆ ಭಾಷೆಯನ್ನು ಸಂಪರ್ಕ ಮಾಧ್ಯಮದ ಭಾಷೆಯಾಗಿ ಬಳಸುವಾಗ ತಾವು ಚಿಕ್ಕಂದಿನಲ್ಲಿ ಹಿಂದಿಯನ್ನು ದ್ವಿತೀಯ / ತೃತೀಯ ಭಾಷೆಯಾಗಿ ಕಲಿತದ್ದೆ ಇದೀಗ ಉಪಯೋಗಕ್ಕೆ ಬಂತು ಎಂದು ಹೆಮ್ಮೆಯಿಂದ ಹೇಳಲು ಸಾಧ್ಯವಾಗಿರುವುದು. ಒಂದು ಭಾಷೆ ಬೆಳೆಯುವುದು ಅದನ್ನು ಬಳಸಿ ಉಳಿಸುವ ಮತ್ತು ಬಳಸಿ ಬೆಳೆಸುವ ಮೂಲಕ ಮಾತ್ರ.... ನಿಮ್ಮೆಲ್ಲರ ರಾಷ್ಟ್ರೀಯ ಭಾವೈಕ್ಯತೆಯ ಸೂತ್ರವಾದ ನನ್ನನ್ನು ಕಡೆಗಣಿಸಿ ನನ್ನ ದೇಶದ ಮಕ್ಕಳನ್ನು ಭಾವ ಶೂನ್ಯರನ್ನಾಗಿಸಬೇಡಿ. ಅವರ ಭಾವನೆಗಳ ಅಭಿವ್ಯಕ್ತಿಯ, ರಾಷ್ಟ್ರೀಯ ಭಾವೈಕ್ಯತೆಯ ನಾಡಿ ಮಿಡಿತವಾಗಿ, ಸ್ವಾಭಿಮಾನದ ಸಂಕೇತವಾಗಿ ನಾನು ಇದ್ದೇ ಇರುತ್ತೇನೆ ಆದರೆ ನನ್ನನ್ನು ಉಳಿಸುವ, ಬೆಳೆಸುವ ಹೊಣೆಗಾರಿಕೆ ನಿಮ್ಮದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,